ಉಪನ್ಯಾಸ ಗ್ರಂಥಮಾಲೆ

೩೯೪

ಮೀನುಗಾರಿಕೆಯ ಪ್ರಾಚೀನತೆ

ಡಾ. ಎನ್. ಕೆ. ಕಡೆತೋಟದ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಜುಲೈ, ೧೯೮೮

ಉಪನ್ಯಾಸ ಗ್ರಂಥಮಾಲೆ
೩೯೪

ಮೀನುಗಾರಿಕೆಯ ಪ್ರಾಚೀನತೆ

ಡಾ. ಎನ್. ಕೆ. ಕಡೆತೋಟದ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ನವ್ಹೆಂಬರ, ೧೯೮೮

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು

ನವ್ಹೆಂಬರ, ೧೯೮೮

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ರೂ. ೧=೦೦

ಮುದ್ರಕರು :

ಸುನೀಲಕುಮಾರ ಜೋಶಿ

ಸುನೀಲಕುಮಾರ ಪ್ರಿಂಟಿಂಗ ಪ್ರೆಸ್

ರಜತಗಿರಿ, ಧಾರವಾಡ-೫೮೦೦೦೪

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ,' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೮೭ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜಿ. ಕೆ. ನಾರಾಯಣ ರೆಡ್ಡಿ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು ೧೯೮೩ ನೆಯ ಇಸ್ವಿಯ ಫೆಬ್ರುವರಿ ೨೪ ನೆಯ ದಿನಾಂಕದಂದು ನನ್ನ ಉಪನ್ಯಾಸವನ್ನು "ಕಡಲು ತೀರದ ಮೀನುಗಾರರು (ಪ್ರಾಚೀನತೆ)" ಎಂಬ ವಿಷಯದ ಮೇಲೆ ಏರ್ಪಡಿಸಿ ಈ ಬಗೆಗೆ ಅಭ್ಯಾಸ ಮಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ನಾನು ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆ. ನಾನು ಉತ್ತರ ಕನ್ನಡ ಜಿಲ್ಲೆಯ ಸಮುದ್ರ ತೀರದ ಗ್ರಾಮವಾದ ತದಡಿಯಲ್ಲಿ ಉಪನ್ಯಾಸ ಶಿಬಿರದ ವತಿಯಿಂದ ಮಾಡಿದ ಭಾಷಣದ ಮುಖ್ಯಾಂಶಗಳನ್ನು ಪುಸ್ತಿಕೆ ರೂಪದಲ್ಲಿ ಪ್ರಕಟಿಸಬೇಕೆಂದು ಇನ್ನೂ ಅನೇಕ ಸಂಗತಿಗಳನ್ನು ಕಲೆ ಹಾಕುತ್ತಿರುವಾಗಲೇ ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ ವಿಭಾಗವು ೧೯೮೬ ನೆಯ ಇಸ್ವಿಯ ಮಾರ್ಚ ೨೫ ನೆಯ ದಿನಾಂಕದಂದು ಪುನಃ ಅದೇ ಊರಿನಲ್ಲಿ "ಮೀನುಗಾರಿಕೆಯ ಪ್ರಾಚೀನತೆ" ಎಂಬ ವಿಷಯದ ಮೇಲೆ ಭಾಷಣ ಏರ್ಪಡಿಸಿ ಈ ಪುಸ್ತಿಕೆಯನ್ನು ಪೂರ್ತಿಗೊಳಿಸಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಾನು ಪ್ರಸಾರಾಂಗದ ಅಧಿಕಾರಿಗಳಿಗೆ ತುಂಬಾ ಋಣಿಯಾಗಿದ್ದೇನೆ. ಈ ಪುಸ್ತಿಕೆಯಲ್ಲಿ ಮೀನುಗಾರಿಕೆಯ ಮತ್ತು ಮೀನುಗಾರರ ಪ್ರಾಚೀನತೆಯ ಬಗ್ಗೆ

ಸಾಕಷ್ಟು ವಿಷಯುಗಳು ಬರುವಂತೆ ಪ್ರಯತ್ನಿಸಿದ್ದೇನೆ. ಈ ವಿಷಯುದಲ್ಲಿ ಪುಸ್ತಿಕೆಗಳು ವಿರಳವಾಗಿರುವದರಿಂದ ಓದುಗರಿಗೆ, ಮೀನುಗಾರರಿಗೆ ಮತ್ತು ಮೀನುಗಾರಿಕೆಯಲ್ಲಿ ಅಭಿರುಚಿ ಉಳ್ಳವರಿಗೆ ಈ ಪುಸ್ತಿಕೆಯು ಹೊರಬರುವದು ಅತಿ ಮಹತ್ವದ್ದಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಭಾಷಣವನ್ನು ಪುಸ್ತಿಕೆಯನ್ನಾಗಿ ಮಾಡಲು ಪ್ರೋತ್ಸಾಹಿಸಿದ ಪ್ರಸಾರಾಂಗದ ಆಗಿನ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರಿಗೂ, ಈಗಿನ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ ಮತ್ತು ಶ್ರೀ ಎನ್. ಆರ್. ಬಾರಿಕೇರ ಅವರಿಗೂ ತುಂಬಾ ಕೃತಜ್ಞನಾಗಿದ್ದೇನೆ.

ಮಾನವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

ಎನ್. ಕೆ. ಕಡೆತೋಟದ

ಪರಿವಿಡಿ

೧. ಪ್ರಸ್ತಾವನೆ

ಮೀನುಗಾರಿಕೆಯ ಪ್ರಾಚೀನತೆಯನ್ನು ಕುರಿತು ಅಭ್ಯಾಸ ಮಾಡುವದಾಗಲೀ ಇಲ್ಲವೆ ಅದನ್ನು ಜನರಿಗೆ ತಿಳಿಯುಪಡಿಸುವದಾಗಲೀ ಅತಿ ಕಷ್ಟದ ಕೆಲಸವಾಗಿದೆ. ಮಾನವಶಾಸ್ತ್ರಜ್ಞರಲ್ಲಿ ಡಾ. ವ್ಹಿ. ಬಿ. ಪುಣೇಕರ ಅವರು ೧೯೫೯ ರಲ್ಲಿ "ಮುಂಬೈಯ ಸೋನ ಕೋಳಿಯರು" ಎಂಬ ಗ್ರಂಥವನ್ನು ಪ್ರಕಟಿಸಿ ಮೀನುಗಾರರ ಬಗ್ಗೆ ಮಾಡಿದ ತಮ್ಮ ಅಭ್ಯಾಸವನ್ನು ಮತ್ತು ಮೀನುಗಾರಿಕೆಯ ಸಾಮಾಜಿಕ-ಆರ್ಥಿಕ ಜೀವನದ ಪರಿಚಯವನ್ನು ಮೊಟ್ಟ ಮೊದಲಿಗೆ ಮಾಡಿಕೊಟ್ಟರೆಂದು ಹೇಳಬಹುದು. ಇದಕ್ಕೂ ಪೂರ್ವದಲ್ಲಿ ಇ. ಥರ್ಸ್ಟನ್, ಎಂಥೊವೆನ್ ಮೊದಲಾದವರ ಜಾತಿಗಳನ್ನು ಹಾಗೂ ಬುಡಕಟ್ಟು ಜನಾಂಗಗಳನ್ನು ಅಭ್ಯಾಸ ಮಾಡಿ ಬರೆದ ಪುಸ್ತಕಗಳಲ್ಲಿ ಭಾರತದಲ್ಲಿಯ ಮೀನುಗಾರರ ಜಾತಿ ಹಾಗೂ ಜನಾಂಗಗಳ ಸಂಪ್ರದಾಯಗಳನ್ನು ತಮ್ಮ ಪುಸ್ತಕಗಳಲ್ಲಿ ವಿವರವಾಗಿ ಸಂಗ್ರಹಿಸಿದ್ದಾರೆ. ಏನೇ ಅಂದರೂ ಮೀನುಗಾರಿಕೆಯ ಪ್ರಾಚೀನತೆ ಮತ್ತು ಭಾರತೀಯ ಮೀನುಗಾರರ ಬಗ್ಗೆ ಬರೆದಿರುವ ಸಾಹಿತ್ಯ ಅತಿ ಕಡಿಮೆ ಎಂದೇ ಹೇಳಬೇಕು.

ಭಾರತದಲ್ಲಿ ರಾಜ ಮಹಾರಾಜರ ಬಗ್ಗೆ ಮಾತ್ರ ಅನೇಕ ದಾಖಲೆಗಳು ಪ್ರಾಚೀನಕಾಲದಿಂದಲೂ ಸಿಗುತ್ತಿದ್ದು

ಮೀನುಗಾರರಂಥಹ ಜನಸಾಮಾನ್ಯರ ಬಗ್ಗೆ ಇಂಥ ದಾಖಲೆಗಳು ಅತಿ ಕಡಿಮೆ. ಏನಾದರೂ ಸ್ವಲ್ಪ ವಿಷಯ ಅವರ ಬಗ್ಗೆ ದೊರೆಯುತ್ತಿದ್ದರೆ, ಅದೂ ರಾಜ ಮಹಾರಾಜರ ಕತೆಗಳಲ್ಲಿ, ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಮತ್ತು ಪುರಾಣಗಳಲ್ಲಿ ದೊರೆಯುವದನ್ನೇ ನಾವು ಶೇಖರಿಸಿ ಮೀನುಗಾರರ ಪ್ರಾಚೀನತೆಯ ಬಗ್ಗೆ ಹೇಳಬೇಕಾಗುತ್ತದೆ. ಯು. ಆರ್. ರಾವ್ ಅಂಥಹ ಪುರಾತತ್ವ ಶಾಸ್ತ್ರಜ್ಞರು ಇತ್ತೀಚೆಗೆ ಸಮುದ್ರಗಳೊಳಗಿನ ಪ್ರಾಚೀನ ಸಂಸ್ಕೃತಿಗಳ ಅಭ್ಯಾಸ ನಡೆಯಿಸಿದ್ದಾರೆ.

ಭಾರತದ ಸಂಪ್ರದಾಯದ ಪ್ರಕಾರ ಮೀನಿನ ಬಗ್ಗೆ ಮತ್ತು ಮೀನುಗಾರಿಕೆಯ ಬಗ್ಗೆ ಅನೇಕ ಉದಾಹರಣೆಗಳು ಅತಿ ಪ್ರಾಚೀನಕಾಲದಿಂದಲೇ ಸ್ವಲ್ಪ ಪ್ರಮಾಣದಲ್ಲಿಯಾದರೂ ದೊರೆಯುತ್ತಿರುವದು ನಮ್ಮ ಸೌಭಾಗ್ಯ. ಪುರಾಣಗಳ ಪ್ರಕಾರ ಈಗಿನ ಮಾನವರ ಮೂಲಪುರುಷನು ಮನು. ಆದ್ದರಿಂದಲೇ ಮಾನವರಿಗೆ ಮನುಷ್ಯರೆಂದು ಕರೆಯುತ್ತಾರೆ. ಇದೇ ಶಬ್ದವು ಇಂಡೋ ಇರೋಪಿಯನ್ ಭಾಷೆಯಾದ ಇಂಗ್ಲೀಷಿನಲ್ಲಿಯೂ ಸಹಿತ ಮ್ಯಾನ್ ಎಂದು ಆಗಿರಬಹುದು. ಜಗತ್ತಿನಲ್ಲಿ ಮುಂದುವರಿದ ಅನೇಕ ಧರ್ಮಗಳಲ್ಲಿ ಆದಿ ಕಾಲದಲ್ಲಿ ನಡೆದ ಜಲಪ್ರಳಯದ ಬಗ್ಗೆ ಹೇಳಲಾಗಿದೆ. ಅದರಂತೆ ಭಾರತೀಯರ ಪವಿತ್ರ ಪುರಾಣಗಳಲ್ಲಿಯೂ ಹೇಳಲಾಗಿದೆ. ನಮ್ಮ ಪುರಾಣಗಳಲ್ಲಿ ಮನುವು ಸಮುದ್ರ ತೀರದಲ್ಲಿ ಅರ್ಘ್ಯವನ್ನು ಅರ್ಪಿಸುತ್ತಿರುವಾಗ ಅವನು ಕೈಯಲ್ಲಿ

ಸಮುದ್ರದಿಂದ ನೀರನ್ನು ಎತ್ತಿಕೊಂಡಾಗ ಅವನ ಕೈಯಲ್ಲಿ ಮೀನೊಂದು ಕಾಣಿಸಿಕೊಳ್ಳುತ್ತದೆ. ಅದು ಅವನಿಗೆ ವಿಜ್ಞಾಪನೆಯೊಂದನ್ನು ಮಾಡಿ ತನ್ನನ್ನು ನೀರಿನಲ್ಲಿ ಬಿಟ್ಟು ರಕ್ಷಿಸಿದರೆ ಮುಂದೆ ಅವನ ರಕ್ಷಣೆ ಮಾಡುವದಾಗಿ ಹೇಳುತ್ತದೆ. ಆ ಪ್ರಕಾರ ಮನುವು ಆ ಮೀನನ್ನು ನೀರಿನಲ್ಲಿ ಬಿಟ್ಟುಬಿಡುತ್ತಾನೆ ಮುಂದೆ ಜಲಪ್ರಳಯವಾದಾಗ ಮೀನು ಬಂದು ಮನುವನ್ನು ರಕ್ಷಿಸಿ ಮಾನವಕೋಟಿಯನ್ನು ಉಳಿಯುವಂತೆ ಮಾಡುತ್ತದೆ. ಈ ಕಥೆಯ ಪ್ರಕಾರ ವಿಷ್ಣುವೇ ಮೀನಿನ ಅವತಾರವನ್ನು ತಾಳಿ ಮಾನವರನ್ನು ರಕ್ಷಿಸಿದನೆಂದು ನಮ್ಮ ಪುರಾಣಗಳು ಹೇಳುತ್ತವೆ. ವಿಷ್ಣುವಿನ ದಶಾವತಾರಗಳನ್ನು ಪ್ರಾಣಿಗಳ ವಿಕಾಸವಾದಕ್ಕೆ ಹೋಲಿಸುವದೂ ಉಂಟು. ಮೀನು-ಆಮೆ-ನರಸಿಂಹ-ರಾಮ ಮುಂತಾಗಿ ಮಾನವನ ವಿಕಾಸವನ್ನು ಪ್ರಾಣಿಗಳ ವಿಕಾಸದೊಂದಿಗೆ ನಮ್ಮವರು ಪುರಾಣಗಳಲ್ಲಿ ಕಲ್ಪನೆ ಮಾಡಿದ್ದಾರೆ. ಮೀನವು ವಿಷ್ಣುವಿನ ದಶಾವತಾರಗಳಲ್ಲಿ ಒಂದಾಗಿರುವದರಿಂದ ಹಿಂದೂಗಳಿಗೆ ಇದು ಅತಿ ಪವಿತ್ರವಾದುದಾಗಿದೆ. ಅವೇ ಪುರಾಣಗಳ ಪ್ರಕಾರ ಈ ಭೂಮಂಡಲವೆಲ್ಲವೂ ನೀರಿನಿಂದಲೇ ತುಂಬಿ ಹೋಗಿತ್ತು. ಆದ್ದರಿಂದ ಪ್ರಾಣಿಗಳು ಮೊದಲು ಕಾಣಿಸಿಕೊಂಡದ್ದು ನೀರಿನಲ್ಲಿಯೇ. ಇದನ್ನೇ ವೈಜ್ಞಾನಿಕವಾಗಿ ಹೇಳುವದಾದರೆ ಅತಿ ಪ್ರಾಚೀನ ಹಿಮಯುಗದ ಕಾಲದಲ್ಲಿ ನೀರ್ಗಲ್ಲಿನ ಯುಗವೊಂದು (Ice Age) ಆಗಿ ಹೋಯಿತು. ನೀರ್ಗಲ್ಲಿನಲ್ಲಿ ಬದುಕಬಹುದಾದ ಪ್ರಾಣಿಗಳ ಸಂಖ್ಯೆಯೇ ಹೆಚ್ಚಾಗಿತ್ತು.

ಹಿಮ ಕರಗಿದಾಗ ಅಲ್ಲಿ ಸಾಗರಗಳು ನಿರ್ಮಾಣವಾದವು. ಅಲ್ಲಿ ನೀರಿನಲ್ಲಿ ಬದುಕಬಹುದಾದ ಪ್ರಾಣಿಗಳು ಕಾಣಿಸಿಕೊಂಡವು. ಈಗಾದರೂ ಭೂಮಂಡಲವು ಮುಕ್ಕಾಲು ಪಾಲು ನೀರಿನಿಂದಲೇ ಆವರಿಸಿರುವದನ್ನು ಇಲ್ಲಿ ಗಮನಿಸಬೇಕು.

ಮಹಾಭಾರತದಲ್ಲಿಯೂ ಮೀನಿನ ಬಗ್ಗೆ ಉಲ್ಲೇಖಿಸಲಾಗಿದೆ. ಅರ್ಜುನನು ದ್ರೌಪದಿಯನ್ನು ಸ್ವಯಂವರದಲ್ಲಿ ಗೆದ್ದುಕೊಂಡುದುದು ಮೇಲೆ ತೂಗಾಡುತ್ತಿರುವ ಮೀನಿನ ಕಣ್ಣಿಗೆ ಕೆಳಗೆ ಇಟ್ಟ ತೈಲದಲ್ಲಿಯ ಮೀನಿನ ಪ್ರತಿಬಿಂಬವನ್ನು ನೋಡಿ ಗುರಿ ಇಟ್ಟು ಹೊಡೆದುದರಿಂದಲೇ ಶಕ್ಯವಾಯಿತೆಂದು ಹೇಳಲಾಗಿದೆ. ಈಗಿನ ಕಾಲದಲ್ಲಿ ಎತ್ತಿನ ಕಣ್ಣಿನ ಚಿತ್ರಕ್ಕೆ ಗುಂಡುಗಳನ್ನು ಹೊಡೆದು ಗುಂಡು ಹೊಡೆಯುವ ಕಲೆಯನ್ನು ಕರಗತ ಮಾಡಿಕೊಳ್ಳುವ ಪದ್ಧತಿಯನ್ನು ಇಲ್ಲಿ ನೆನೆಯಬಹುದು. ಆಗಿನ ಕಾಲದಲ್ಲಿ ಮೀನಿನ ಕಣ್ಣಿಗೆ ಬಾಣ ಹೊಡೆಯುವ ಅಭ್ಯಾಸ ಮಾಡಿಕೊಳ್ಳುತ್ತಿದ್ದರೆಂದು ನಾವು ತರ್ಕಿಸಬಹುದಾಗಿದೆ.

ಕರ್ಣನು ಮದುವೆಯ ಪೂರ್ವದಲ್ಲಿಯೇ ಮಂತ್ರದಿಂದ ಜನನವಾದಾಗ ಅವನ ತಾಯಿಯಾದ ಕುಂತಿಯು ಜನವಾದಿಕೆಯ ಹೆದರಿಕೆಯಿಂದಾಗಿ ಅವನನ್ನು ಹೊಳೆಯಲ್ಲಿ ತೇಲಿಬಿಟ್ಟಾಗ ಮೀನುಗಾರನಿಂದ ಕರ್ಣನು ರಕ್ಷಿಸಲ್ಪಡುತ್ತಾನೆ. ಮುಂದೆ ಇದೇ ಒಂದು ಕಾರಣಕ್ಕಾಗಿ ಅವನು ಸೂತಕುಲದಲ್ಲಿ ಜನಿಸಿದವನೆಂದು ಎಲ್ಲರಿಂದಲೂ ತಿರಸ್ಕರಿಸಲ್ಪಡುತ್ತಾನೆ.

ಆವಾಗಿನ ಕಾಲದಲ್ಲಿ ಸೂತಕುಲವೆಂಬುದು ಇತ್ತು ಎಂದು ಇದರಿಂದ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ.

ಮಹಾಕವಿಯೂ ನಾಟಕಕಾರನೂ ಆದ ಕಾಳಿದಾಸನು "ಅಭಿಜ್ಞಾನ ಶಾಕುಂತಲ" ಎಂಬ ನಾಟಕವನ್ನು ಬರೆಯುವಾಗ ಮೀನುಗಾರಿಕೆಯು ಉಲ್ಲೇಖ ಬರುತ್ತದೆ. ಆ ನಾಟಕದಲ್ಲಿ ಶಕುಂತಲೆಯ ಉಂಗುರವು ಆವಳು ನದಿಯಲ್ಲಿಯ ನೀರು ಕುಡಿಯುವಾಗ ಕಳೆದು ಹೋಗುತ್ತದೆ. ಆ ಉಂಗುರವನ್ನು ಒಂದು ಮೀನು ನುಂಗುತ್ತದೆ. ರಾಜನು ತೊಡಿಸಿದ ರಾಜಮುದ್ರೆ ಇದ್ದ ಉಂಗುರವು ಕಳೆದು ಹೋದದ್ದರಿಂದ ಶಕುಂತಲೆಯು ತನ್ನ ಗುರುತನ್ನು ಪುನಃ ರಾಜನಿಗೆ ನೆನಪಿಗೆ ತಂದು ಕೊಡಲಿಕ್ಕೆ ಅಶಕ್ತಳಾಗುತ್ತಾಳೆ. ಆದರೆ ಮೀನುಗಾರರು ಹಿಡಿದ ಮೀನವನ್ನು ಕೊಯ್ಯುವಾಗ ಉಂಗುರವು ದೊರಕುತ್ತದೆ. ಈ ಘಟನೆಯಿಂದಾಗಿ ದುಷ್ಯಂತ ಮತ್ತು ಶಕುಂತಲೆಯರ ಪುನರ್ ಪರಿಚಯವಾಗುತ್ತದೆ. ಈ ಪ್ರಕಾರವಾಗಿ ಈ ನಾಟಕದಲ್ಲಿ ಮೀನುಗಾರಿಕೆ ಮತ್ತು ಮೀನುಗಾರರ ಮಹತ್ವದ ಪಾತ್ರವನ್ನು ನಾಟಕಕಾರನು ಸರಿಯಾಗಿ ಉಪಯೋಗಿಸಿಕೊಂಡಿದ್ದಾನೆ. ಮತ್ತು ನಮಗೆ ಆಗಿನ ಕಾಲದಲ್ಲಿ ಮೀನುಗಾರಿಕೆಯ ದೃಷ್ಟಾಂತವು ಸರಿಯಾಗಿ ತಿಳಿಯುವಂತೆ ಆಗಿದೆ.

ಇಂದಿಗೂ ನಮ್ಮ ನಾಡಿನಲ್ಲಿ ಅತಿ ಪ್ರಾಚೀನಕಾಲದಿಂದ ನಡೆದು ಬಂದ ಸಂಪ್ರದಾಯಗಳಲ್ಲಿ ಜೋಕುಮಾರನ ಹಬ್ಬವು ಒಂದು ವಿಶಿಷ್ಟವಾದ ಪದ್ಧತಿ. ಇದನ್ನು ಜನಪದ

ಸಮಾಜದಲ್ಲಿ ಜೋಕುಮಾರನ ಹಬ್ಬ ಎಂದು ಕರೆಯುತ್ತಾರೆ. ಕುಮಾರನು ಶಿವನ ಮಗ. ಅವನು ಇಂದಿಗೂ ಗಂಗಮತದವರ ಮನೆಯಲ್ಲಿಯೇ ಹುಟ್ಟುತ್ತಾನೆ. ಅವರೇ ಅವನನ್ನು (ಮಣ್ಣಿನಿಂದ ಮಾಡಿದ ಜೋಕುಮಾರನ ಪ್ರತಿಮೆಯನ್ನು) ಒಯ್ದು ಪ್ರತಿಯೊಬ್ಬರ ಮನೆ ಮತ್ತು ಓಣಿಗಳಲ್ಲಿ ತಿರುಗಾಡಿಸಿ ಜೋಗುಳ ಹಾಡುತ್ತಾರೆ. ಈ ದಂತಕತೆ ಮೀನುಗಾರರಾದ ಗಂಗಾಮತದವರಿಗೆ ಜೋಡಿಸಲ್ಪಟ್ಟಿರುವದರಿಂದ ಇವರು ಶೈವ ಮತದವರೆಂದು ನಾವು ದೃಢವಾಗಿ ಹೇಳಬಹುದು. ಮೀನುಗಾರರು ತಮ್ಮನ್ನು ಗಂಗಾಮತದವರೆಂದು ಕರೆದುಕೊಳ್ಳುವದರಿಂದ ಅವರು ಶಿವನ ಹೆಂಡತಿಯಾದ ಗಂಗೆಯ ಆರಾಧಕರೂ ಹೌದು. ನೀರು ಮತ್ತು ಗಂಗೆ ಸರಿಸಮಾನವಾದ ಶಬ್ದಗಳೆಂದು ತಿಳಿದುಕೊಂಡು ಬಂದಿರುವದರಿಂದ ನೀರಿನಲ್ಲಿಯೇ ಮೀನುಗಾರಿಕೆ ನಡೆಯುವದರಿಂದ ನೀರಿನಲ್ಲಿ ಸಾರಿಗೆ ಸೌಕರ್ಯವನ್ನು ಇವರು ನಾವೆಗಳಿಂದ ಜನರಿಗೆ ಒದಗಿಸುವವರಾಗಿರುವದರಿಂದ ಇವರನ್ನು ಗಂಗಾಮತದವರೆಂದು ಹೇಳಿಕೊಳ್ಳುವದು ಸಮಂಜಸವಾಗಿದೆ.

ಈ ಪ್ರಕಾರವಾಗಿ ನಮ್ಮ ಪುರಾಣಗಳಲ್ಲಿ ಮತ್ತು ದಂತಕತೆಗಳಲ್ಲಿ ಮೀನುಗಾರರನ್ನು ಮತ್ತು ಮೀನುಗಾರಿಕೆಯನ್ನು ಆಗಿಂದಾಗ ಉಲ್ಲೇಖಿಸುವದರಿಂದ ಅದಕ್ಕೆ ಒಂದು ಪವಿತ್ರವಾದ ಗೌರವವಾದ ಮತ್ತು ಮಹತ್ವದ ಸ್ಥಾನವು ಹಿಂದೂ ಸಂಪ್ರದಾಯದಲ್ಲಿ ಅತಿ ಪ್ರಾಚೀನಕಾಲದಿಂದಲೇ ದೊರೆತಿದೆ.

ಮೀನುಗಾರಿಕೆಯ ಮಹತ್ವದ ಬಗ್ಗೆ ಚೀನಾ ದೇಶದಲ್ಲಿ ಒಂದು ನಾಣ್ನುಡಿ ಇದೆ. ಅದೇನೆಂದರೆ: ನೀವು ಒಬ್ಬ ಮನುಷ್ಯನಿಗೆ ಒಂದು ಮೀನನ್ನು ಕೊಟ್ಟರೆ ಅವನಿಗೆ ನೀವು ಒಂದು ದಿವಸದ ಊಟ ಕೊಟ್ಟಂತೆ. ನೀವು ಅವನಿಗೆ ಹೇಗೆ ಮೀನು ಹಿಡಿಯಬೇಕೆಂದು ಕಲಿಸಿದರೆ ಅವನಿಗೆ ಇಡೀ ಜೀವನಕ್ಕೆ ಊಟದ ವ್ಯವಸ್ಥೆ ಮಾಡಿದಂತೆ" ಎಂದು ಹೇಳಲಾಗಿದೆ. ಈ ರೀತಿಯಾಗಿ ಇಂಡೋನೇಶಿಯಾದಲ್ಲಿ ಚೀನದಲ್ಲಿ ಮೀನುಗಾರಿಕೆಗೆ ಅತಿ ಮಹತ್ವದ ಸ್ಥಾನವಿದೆ ಎಂದು ಹೇಳಬಹುದು.

ಮೀನುಗಾರಿಕೆ ಅತಿ ಪ್ರಾಚೀನವಾದುದು ಅಷ್ಟೇ ಅಲ್ಲ ಅವರು ಇಂದಿಗೂ ಬಹಳಷ್ಟು ಮೀನುಗಾರಿಕೆಯ ಮೇಲೆ ತಮ್ಮ ಜೀವನವನ್ನು ಅವಲಂಬಿಸಿದ್ದಾರೆ. ಅದಕ್ಕಾಗಿಯೇ ಅವರು ತಮ್ಮವೇ ಆದ ವಿಶಿಷ್ಟವಾದ ನಾವೆಗಳನ್ನು ಕಟ್ಟುವದರಲ್ಲಿ ಕುಶಲರಾಗಿದ್ದರು. ಅವರ ನಾವೆಗಳು ಪಟಗಳನ್ನು ಹೊಂದಿ ಹೊರವಲಯದ ತೇಲುವ ದಿಂಡುಗಳೊಂದಿಗೆ ಮುನ್ಸೂನ್ ಗಾಳಿಯ ಸಹಾಯವನ್ನು ಪಡೆದುಕೊಂಡು ಭಾರತಕ್ಕೂ ಮತ್ತು ಆಫ್ರಿಕೆಯ ಪೂರ್ವ ತೀರದಲ್ಲಿರುವ ಮಡಗಾಸ್ಕರಕ್ಕೂ ಕ್ರಿಸ್ತಶಕ ಪೂರ್ವದಲ್ಲಿಯೇ ಓಡಾಡುತ್ತಿದ್ದವು. ಆದೇ ಜನಾಂಗವು ಭಾರತದಲ್ಲಿಯೂ ಮತ್ತು ಮಡಗಾಸ್ಕರದಲ್ಲಿಯೂ ತಮ್ಮ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿವೆ. ಈ ಜನಾಂಗಕ್ಕೆ ಆಸ್ಟ್ರಿಕ್ ಅಥವಾ ಮಲಯೋ ಪೊಲಿನೇಶಿಯನ್ ಜನಾಂಗವೆಂದು ಮಾನವಶಾಸ್ತ್ರಜ್ಞರು ಕರೆಯುತ್ತಾರೆ.

ಆಸ್ಟ್ರೇಲಿಯಾ ಖಂಡವನ್ನು ಯುರೋಪಿನ ಕುಕ್ ಎಂಬ ಜಲ ಪರ್ಯಟನ ಮಾಡುವ ನಾವಿಕನು ಹುಡುಕಿದ ನೆಂದು ನಾವು ಹೇಳುತ್ತೇವೆ. ಆದರೆ ಮಲೇಶಿಯಾದ ಸಾಂಸ್ಕೃತಿಕ ಇತಿಹಾಸವನ್ನು ಓದಿದ ಮಾನವಕುಲಶಾಸ್ತ್ರಜ್ಞ ರಿಗೆ ಕ್ರಿಸ್ತಶಕ ಪೂರ್ವದಲ್ಲಿಯೇ ಮಲೇಶಿಯಾದ ಮೀನು ಗಾರರು ಆಸ್ಟ್ರೇಲಿಯಾದ ಉತ್ತರ ಸಮುದ್ರ ತೀರಕ್ಕೆ ಮೀನು ಹಿಡಿಯಲಿಕ್ಕೆ ಹೋಗುತ್ತಿದ್ದರೆಂದೂ ಮತ್ತು ಅವರು ತಮ್ಮ ರಕ್ತ ಸಂಬಂಧವನ್ನು ಆಸ್ಟ್ರೇಲಿಯಾದ ಮೂಲ ನಿವಾಸಿಗಳಲ್ಲಿ ಬಿಟ್ಟರೆಂಬುದೂ ಗೊತ್ತಿದೆ. ಇದೇ ಮಲೇಶಿಯಾದ ಮೀನು ಗಾರರು ಪೂರ್ವದ ಕಡೆಗೆ ಪ್ರವಾಸಮಾಡಿ ಶಾಂತಿಸಾಗರದಲ್ಲಿ ಮೈಕ್ರೋನೇಶಿಯಾ, ಪೊಲಿನೇಶಿಯಾ ಮುಂತಾದ ನಡುಗಡ್ಡೆ ಗಳಲ್ಲಿ ಈ ಮಲೇಶಿಯಾದ ಸಂಸ್ಕೃತಿಯನ್ನು ಹಬ್ಬಿಸಿದರು. ಆದ್ದರಿಂದ ಇಂದಿಗೂ ಈ ಸಂಸ್ಕೃತಿಯು ಶಾಂತಿಸಾಗರದಲ್ಲಿರುವ ಈಸ್ಟರ್ ನಡುಗಡ್ಡೆಯಿಂದ ಹಿಡಿದುಕೊಂಡು ಪಶ್ಚಿಮದಲ್ಲಿ ಆಫ್ರಿಕಾದ ಹತ್ತಿರವಿರುವ ಮಡಗಾಸ್ಕರದ ವರೆಗೆ ಹಬ್ಬಿ ಕೊಂಡಿದೆ. ಭಾರತವು ಇದಕ್ಕೆ ಹೊರತಾಗಿರುವದಿಲ್ಲ. ತಂಡ್ರಾ ಪ್ರದೇಶಗಳಲ್ಲಿ ಮೀನುಗಾರಿಕೆ ಭಿನ್ನರೀತಿಯಾಗಿದೆ. ಅಲ್ಲಿಯ ಜನರು ಬರ್ಫ ಕರಗಿದಾಗ ಮೀನುಗಳನ್ನು ಹಿಡಿಯುವ ಗೋಜಿಗೆ ಹೋಗುವದಿಲ್ಲ. ಆದರೆ ಚಳಿಯಿಂದ ಬರ್ಫ ಪುನಃ ಗಟ್ಟಿಯಾಗಲಿಕ್ಕೆ ಹತ್ತಿದಾಗ ಮೀನುಗಳು ಬರ್ಫದಲ್ಲಿ ಸಿಕ್ಕಿ ಕೊಳ್ಳುತ್ತವೆ. ಆದ್ದರಿಂದ ಆವಾಗ ಅವರು ಮೀನುಗಳನ್ನು ಹಿಡಿಯಲಿಕ್ಕೆ ಪ್ರಾರಂಭಿಸುತ್ತಾರೆ. ಯಾಕೆಂದರೆ ಇವರಿಗೆ

ಸಹಜವಾಗಿಯೇ ಸುಲಭವಾಗಿ ಆಗ ಮೀನು ಹಿಡಿಯುಲಿಕ್ಕೆ ಶಕ್ಯವಾಗುತ್ತದೆ.

ಮೆಡಿಟೇರಿಯನ್ ಸಮುದ್ರದಲ್ಲಿಯ ಪ್ರಾಚೀನ ನಾಗರಿಕತೆಯಲ್ಲಿ ಕ್ರೀಟ ಮುಂತಾದ ನಡುಗಡ್ಡೆಗಳಲ್ಲಿ ಮೀನುಗಾರಿಕೆಗೆ ಹೆಚ್ಚು ಮಹತ್ವಕೊಡಲಾಯಿತು. ಈ ಉದ್ದೇಶಕ್ಕಾಗಿ ಕಡಲು ತೀರದ ಹಳ್ಳಿಗಳಲ್ಲಿ ಮೀನುಗಾರಿಕೆಯ ಕಟ್ಟೆಗಳನ್ನು ಕಟ್ಟಲಾಯಿತು. ಮತ್ತು ಆವಾಗಲೇ ಒಣಗಿಸಿದ ಮೀನುಗಳನ್ನು ವ್ಯಾಪಾರಕ್ಕಾಗಿ ಉಪಯೋಗಿಸಲಿಕ್ಕೆ ಪ್ರಾರಂಭವಾಯಿತು. ಮೆಡಿಟೇರಿಯನ್ ಸಾಗರದಲ್ಲಿ ಕ್ರಿ. ಶ. ಪೂರ್ವ ೧೫೦೦ ರಲ್ಲಿ ಒಳ್ಳೆ ಸಮುದ್ರ ಪ್ರಯಾಣಗಳನ್ನು ಕೈಕೊಳ್ಳಲಾಗುತ್ತಿತ್ತು. ಇವರು ಆಫ್ರಿಕೆಯ ಉತ್ತರ ತೀರದಲ್ಲಿಯೂ, ಯುರೋಪಿನ ದಕ್ಷಿಣ ತೀರದಲ್ಲಿಯೂ, ಏಶಿಯಾದ ಪಶ್ಚಿಮ ದಂಡೆಯವರೆಗೂ ಜಲ ಪರ್ಯಟನಗಳನ್ನು ಕೈಕೊಳ್ಳುತ್ತಿದ್ದರು. ಕೆಲವು ಮಾನವಶಾಸ್ತ್ರಜ್ಞರ ಪ್ರಕಾರ ಇವರು ಅಟ್ಲಾಂಟಿಕ್ ಸಾಗರವನ್ನು ದಾಟಿ ಅಮೇರಿಕೆಯನ್ನು ತಲುಪಿರಬಹುದೆಂದು ತರ್ಕಿಸುತ್ತಾರೆ. ಇವರೇ ಕಾಲ್ಪನಿಕ ಖಂಡವೆಂದು ವರ್ಣಿಸಲ್ಪಡುವ "ಅಟ್ಲಾಂಟಿಸ್" ಎಂಬ ಪ್ರದೇಶಕ್ಕೆ ಹೋಗಿರುವದು ಸಾಧ್ಯವೆಂದು ಹೇಳಲಾಗುತ್ತಿದೆ. ಅಥವಾ ಇದೇ ಪ್ರದೇಶಕ್ಕೆ "ಅಟ್ಲಾಂಟಿಸ್" ಖಂಡವೆಂದು ಕರೆದಿರಬಹುದಾಗಿದೆ.

ಆಫ್ರಿಕಾದ ಯುಗಾಂಡಾ ಪ್ರದೇಶದಲ್ಲಿ ಒಣಗಿಸಿದ ಮೀನನ್ನು ತನ್ನ ದೇಶದ ಜನರಿಗೆ ಆಹಾರಕ್ಕೆ ಹಂಚಲಾಗು

ತ್ತಿತ್ತು. ಆದರೆ ಇವರು ಸರೋವರಗಳ ಮತ್ತು ಜಲಸಂಗ್ರಹಗಳ ಮೀನುಗಾರರಾಗಿದ್ದರೆಂಬುದನ್ನು ನಾವು ಇಲ್ಲಿ ಮರೆಯಬಾರದು. ಅವರಿಗೆ ಸಮುದ್ರ ತೀರವು ಇರದೇ ಹೋದದ್ದರಿಂದ ಅವರು ಕೇವಲ ಒಳಪ್ರದೇಶದ ಮೀನುಗಾರರಾಗಿ ಉಳಿಯಬೇಕಾಯಿತು. ಈ ದೃಷ್ಟಿಯಿಂದ ಭಾರತೀಯರು ಒಳ್ಳೆಯ ಭಾಗ್ಯವಂತರೆಂದು ಹೇಳಬೇಕು. ಏಕೆಂದರೆ ಭಾರತದಲ್ಲಿ ಎಲ್ಲ ತರದ ಮೀನುಗಾರಿಕೆ ಬೆಳೆದುಬಂದಿತ್ತು. ಅವರು ಸರೋವರಗಳಲ್ಲಿಯೂ, ಕೆರೆಗಳಲ್ಲಿಯೂ ಹೊಳೆಗಳಲ್ಲಿಯೂ ಮತ್ತು ಸಮುದ್ರ ತೀರಗಳಲ್ಲಿಯೂ ಮೀನುಗಾರಿಕೆಯನ್ನು ಬಲ್ಲವರಾಗಿದ್ದರು.

ಎಸ್ಕಿಮೋ ಜನರಲ್ಲಿ ಪ್ರಾಚೀನಕಾಲದಲ್ಲಿ ಸ್ವಚ್ಛವಾದ ನೀರಿನಲ್ಲಿಯ ಮೀನುಗಾರಿಕೆಯು ಹೊಟ್ಟೆ ಹೊರಕೊಳ್ಳಲಿಕ್ಕೆ ಮುಖ್ಯ ಸಾಧನವಾಗಿತ್ತು. ಯಾಕೆಂದರೆ ಅವರಿಗೆ ಬೇರೆ ಪ್ರಾಣಿಗಳು ಬೇಟೆಯಾಡಲಿಕ್ಕೆ ಸಾಕಷ್ಟು ಸಿಗುತ್ತಿರಲಿಲ್ಲ. ಒಮ್ಮೆ ಸಿಕ್ಕರೆ ತಿಂಗಳುಗಟ್ಟಲೆ ಅವುಗಳ ಮೇಲೆಯೇ ಜೀವಿಸಬೇಕಾಗುತ್ತಿತ್ತು. ನಮ್ಮ ದೇಶದಲ್ಲಿ ಕೆಸರು ನೀರಿನಲ್ಲಿಯೂ ಒಮ್ಮೊಮ್ಮೆ ಮೀನುಗಾರಿಕೆಯು ಒಳ್ಳೆಯ ರೀತಿಯಿಂದ ನಡೆಯುತ್ತದೆ. ಬರ್ಫವಿರುವ ಎಸ್ಕಿಮೋ ಜನರ ನಾಡಿನಲ್ಲಿ ಮುಖ್ಯವಾಗಿ ಸ್ವಚ್ಛವಾದ ನೀರಿನಲ್ಲಿ ಮೀನುಗಳನ್ನು ಹಿಡಿಯುವದು ಹೆಚ್ಚು ಹಿತಕರವೆನಿಸುತ್ತಿತ್ತು.

ಪುರಾತತ್ವ ಶಾಸ್ತ್ರಜ್ಞರ ಪ್ರಕಾರ ಅಮೇರಿಕಾ ಖಂಡಗಳಲ್ಲಿಯೂ ಪ್ರಾಚೀನಕಾಲದಲ್ಲಿ ಉತ್ತರ ಅಮೇರಿಕೆ

ಯಲ್ಲಿಯ ರೆಡ್ ಇಂಡಿಯನ್‌ರು ೧ನೆಯ ಶತಮಾನದ ಸುಮಾರಿನಲ್ಲಿ ಹಲವು ಸ್ಥಳಗಳಲ್ಲಿ ತಮಗೆ ಬೇಡಾದ ಮೀನುಗಳ ರಾಶಿಗಳನ್ನು ಬಿಟ್ಟು ಹೋಗಿರುವದು ಅವರು ಇಂಥ ಪ್ರದೇಶಗಳಲ್ಲಿ ವಾಸವಾಗಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ. ಅವರು ಮೀನುಗಾರಿಕೆಯನ್ನು ತ್ಯಜಿಸಿದ ನಂತರ ಬೇಸಾಯದಲ್ಲಿ ಮತ್ತು ದನಕರುಗಳನ್ನು ಸಾಕುವದರಲ್ಲಿ ನಿರತರಾದಂತೆ ತೋರುತ್ತದೆ. ಆದರೆ ಕೆಲಿಫೋರ್ನಿಯಾ ಪ್ರದೇಶದಲ್ಲಿ ರೆಡ್ ಇಂಡಿಯನ್‌ರು ಕಡಲು ತೀರದ ಪ್ರದೇಶಗಳಲ್ಲಿ ಮೀನುಗಾರಿಕೆಯನ್ನು ಕೈಕೊಂಡಿದ್ದರೆಂದೂ ಮತ್ತು ಒಳ ಪ್ರದೇಶಗಳಲ್ಲಿ ಬೀಜಗಳನ್ನು ಕೂಡಿ ಹಾಕುವದರಲ್ಲಿ ಮತ್ತು ಬೇಟೆಯಾಡುವದರಲ್ಲಿ ತೊಡಗಿದ್ದರೆಂದೂ ತಿಳಿದುಬರುತ್ತದೆ.

ಈ ಪ್ರಕಾರವಾಗಿ ಮೀನುಗಾರಿಕೆಯು ಜಗತ್ತಿನ ಎಲ್ಲ ಖಂಡಗಳಲ್ಲಿಯೂ ಅತಿ ಪ್ರಾಚೀನಕಾಲದಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ಭಾರತದ ಮಟ್ಟಿಗೆ ಮೀನುಗಾರಿಕೆಯ ಪ್ರಾಚೀನತೆಯನ್ನು ಹೇಳಬೇಕೆಂದರೆ ೫ ಸಾವಿರ ವರ್ಷಗಳ ಹಿಂದೆ ಅಂದರೆ ಕ್ರಿ. ಶ. ಪೂರ್ವ ೩೦೦೦ ದ ಸಿಂಧೂ ನದಿ ಕೊಳ್ಳದ ನಾಗರಿಕತೆಯಲ್ಲಿ ಗುಜರಾತಿನ ಲೋಥಲ್‌ದಲ್ಲಿ ಬಂದರನ್ನು ಕಟ್ಟಲಾಗಿತ್ತೆಂದು ಪ್ರಾಚ್ಯ ಶಾಸ್ತ್ರಜ್ಞರು ಹೇಳುತ್ತಾರೆ. ಕ್ರಿ. ಶ ಪೂರ್ವ ೨೦೦೦ ನೇ ಇಸ್ವಿಯಲ್ಲಿ ಸುಸಜ್ಜಿತವಾದ ಹಡಗುಗಳನ್ನು ಕಟ್ಟಲಾಗುತ್ತಿತ್ತೆಂದು ಇದೇ ಪ್ರದೇಶದಲ್ಲಿ ನಡೆಸಿದ ಪ್ರಾಚ್ಯಶಾಸ್ತ್ರದ ಅಭ್ಯಾಸದಿಂದ ತಿಳಿದು ಬರುತ್ತದೆ. ಇಂಥ ಸುಸಜ್ಜಿತ ಹಡಗುಗಳನ್ನು ನಡೆಸಬಲ್ಲವರು

ಸಮುದ್ರದಲ್ಲಿ ಅತಿ ದೂರದವರೆಗೆ ಮೀನುಗಾರಿಕೆಯನ್ನು ನಡೆಸುತ್ತಿದ್ದರೆಂದು ಸಹಜವಾಗಿಯೇ ತರ್ಕಿಸಬಹುದಾಗಿದೆ. ಇದೇ ಜನರು ಜಲ ಪರ್ಯಟನಗಳನ್ನು ಕೈಕೊಂಡು ಅರೇಬಿಯಾದ ಪ್ರದೇಶವನ್ನು ದಾಟಿ ಆಫ್ರಿಕಾ ಮತ್ತು ಯುರೋಪಿನ ತೀರದ ಪ್ರದೇಶಗಳನ್ನೂ ಮುಟ್ಟಿ ಅಲ್ಲಿ ತಮ್ಮ ಸಂಸ್ಕೃತಿಯನ್ನು ಹಬ್ಬಿಸಿರುವ ಸಾಧ್ಯತೆ ಇದೆ. ಮಧ್ಯಪೂರ್ವದ ಮೆಸೋಪೊಟೇಮಿಯಾದ ಸಂಪರ್ಕವಿದ್ದ ಬಗ್ಗೆ ನಮಗೆ ಸರಿಯಾದ ಸಂಗತಿಗಳು ಲಭ್ಯವಾಗಿವೆ.

ಭಾರತದೇಶಕ್ಕೆ ೫೮೦೦ ಮೈಲು ಉದ್ದದ ಕಡಲು ತೀರವು ಇದೆ. ಕರ್ನಾಟಕಕ್ಕೆ ೩೨೦ ಕಿಲೋಮೀಟರ ಉದ್ದದ ಕಡಲು ತೀರವು ಇದೆ. ಕರ್ನಾಟಕದ ಈ ಭಾಗಕ್ಕೆ ಉತ್ತರ ಕನ್ನಡ ಜಿಲ್ಲೆ ಎಂದೂ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಎಂದೂ ಕರೆಯುತ್ತಾರೆ. ಕರ್ನಾಟಕದ ಕಡಲ ತೀರವು ಇಡೀ ಭಾರತದ $\frac{1}{15}$ ಭಾಗದಷ್ಟು ಮಾತ್ರ ಆಗುತ್ತದೆ. ಕರ್ನಾಟಕದಲ್ಲಿ ಮೀನುಗಾರಿಕೆಗೆ ೧೦,೦೦೦ ಚೌರಸ್ ಮೈಲಿನಷ್ಟು ಪ್ರದೇಶವು ಯೋಗ್ಯವಾಗಿದೆ ಎಂದು ಮೀನುಗಾರಿಕೆಯ ತಜ್ಞರು ಹೇಳುತ್ತಾರೆ. ಇದರಲ್ಲಿ ಈಗ ಕೇವಲ $\frac{1}{5}$ ದಷ್ಟು ಪ್ರದೇಶವು ಮಾತ್ರ ಮೀನುಗಾರಿಕೆಗೆ ಉಪಯೋಗಿಸಲ್ಪಡುತ್ತಿದೆ.

ಪ್ರಾಚೀನಕಾಲದಲ್ಲಿ ಎಲ್ಲ ಮಾನವ ಕುಲಗಳು ಮುಖ್ಯವಾಗಿ ಸಂಚಾರೀ ಜನಾಂಗಗಳೇ ಆಗಿದ್ದವು. ಅವರು ಬೇಟೆಯಾಡುವ ಮತ್ತು ಫಲವತ್ತಾದ ಪ್ರದೇಶಗಳನ್ನು

ಹುಡುಕುತ್ತಾ ತಮ್ಮ ಜೀವನವನ್ನು ಸಂಚಾರೀ ಜೀವನವನ್ನಾಗಿ ಮಾಡಿಕೊಂಡಿದ್ದರು. ಬೇಸಾಯಗಾರಿಕೆ ಬೆಳೆದಂತೆ ಎಲ್ಲ ಜನಾಂಗಗಳೂ ಸಂಚಾರಿ ಜೀವನವನ್ನು ಬಿಟ್ಟು ಸ್ಥಾಯೀ ಜೀವನವನ್ನು ಪ್ರಾರಂಭಿಸಿದವು. ಮೀನುಗಾರರು ಸಹಿತ ಮೊಟ್ಟಮೊದಲು ಸಂಚಾರಿ ಜನಾಂಗವಾಗಿಯೇ ಇದ್ದಿರಬೇಕೆಂದು ಮಾನವಶಾಸ್ತ್ರಜ್ಞರು ತರ್ಕಿಸಿದ್ದಾರೆ. ಅವರು ಸಾಕಷ್ಟು ಮೀನುಗಳು ಸಿಗುವ ಪ್ರದೇಶಗಳನ್ನು ಹುಡುಕುತ್ತಾ ತಿರುಗಾಡುತ್ತಿದ್ದರು. ನಾವೆಗಳನ್ನು ಕಟ್ಟಲಿಕ್ಕೆ ಕಲಿತ ಮೀನುಗಾರರಂತೂ ದೇಶ ವಿದೇಶಗಳ ಸಂಚಾರವನ್ನು ಇದೇ ಉದ್ದೇಶಕ್ಕಾಗಿ ಬಳಸಿಕೊಂಡಿರುವ ಸಾಧ್ಯತೆ ಇದೆ. ಅವರಿಗೆ ನದಿಗಳನ್ನು ಸರೋವರಗಳನ್ನು ಮತ್ತು ಸಮುದ್ರಗಳನ್ನು ದಾಟುವದು ಇನ್ನಿತರರಿಗಿಂತ ಅತಿ ಸುಲಭವಾದ ಸಾಧ್ಯತೆಯಾಗಿತ್ತು.

ಒಂದು ರೀತಿಯಿಂದ ಮೀನುಗಾರಿಕೆ ಮತ್ತು ಮೀನುಗಾರರ ಪ್ರಾಚೀನತೆಯನ್ನು ಅಭ್ಯಾಸ ಮಾಡುವದೆಂದರೆ ನೀರಿನ ಸಂಗ್ರಹಗಳನ್ನು, ನೀರಿನ ಪ್ರವಾಹಗಳನ್ನು, ಸಮುದ್ರಗಳನ್ನು ಮತ್ತು ಸಾಗರಗಳನ್ನು ಸರಿಯಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಏಕೆಂದರೆ ಮೀನುಗಳು ಕೇವಲ ನೀರಿನಲ್ಲಿ ಬದುಕಬಲ್ಲ ಪ್ರಾಣಿಗಳಾಗಿವೆ. ನೀರಿನಲ್ಲಿ ಇನ್ನಿತರ ಜೀವಿಗಳೂ ಮತ್ತು ಸಸ್ಯಗಳೂ ಸಹಿತ ಜನಿಸಿ ಬೆಳೆದು ಬಾಳುತ್ತವೆ. ಆದ್ದರಿಂದ ನೀರಿನ ಸಣ್ಣಪುಟ್ಟ ಸಂಗ್ರಹಗಳನ್ನು ಹಿಡಿದು ಸಾಗರಗಳನ್ನೊಳಗೊಳ್ಳುವಂತೆ

ಮಾಡಿದ ಅಭ್ಯಾಸಗಳು ಜಲಶಾಸ್ತ್ರ ಮತ್ತು (Marine Science) ಮತ್ತು ಸಾಗರಶಾಸ್ತ್ರವೆಂದು (Oceanology) ಅನ್ನಿಸಿಕೊಳ್ಳುತ್ತವೆ. ಮೀನುಗಾರಿಕೆ ಮತ್ತು ಮೀನುಗಾರರ ಪ್ರಾಚೀನತೆಯು ಈ ಶಾಸ್ತ್ರಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುವದರಿಂದ ಇಂಥ ಅಭ್ಯಾಸಗಳು ಮೀನುಗಾರಿಕೆ ಮತ್ತು ಮೀನುಗಾರರ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲಬಲ್ಲವು.

ಕಡಲತೀರದ ಮೀನುಗಾರಿಕೆಯು ಸುಸಜ್ಜಿತವಾದ ನಾವೆಗಳನ್ನು ಮತ್ತು ಹಡಗುಗಳನ್ನು ಕಟ್ಟಲಿಕ್ಕೆ ಎಡೆಮಾಡಿ ಕೊಟ್ಟಿತು. ಇದರಿಂದ ಅಂತರ್‌ರಾಷ್ಟ್ರೀಯ ವ್ಯಾಪಾರವು ಬೆಳೆಯಿತು. ಸಾಮ್ರಾಜ್ಯಗಳನ್ನು ಕಟ್ಟುವವರು ಈ ಸುಸಜ್ಜಿತ ಹಡಗುಗಳನ್ನು ವೈರಿ ರಾಷ್ಟ್ರಗಳೊಡನೆ ಯುದ್ಧ ಮಾಡುವದಕ್ಕಾಗಿ ಉಪಯೋಗಿಸಿಕೊಳ್ಳಹತ್ತಿದರು. ವಾಯುಯಾನವು ಪ್ರಾರಂಭವಾಗುವ ಪೂರ್ವದಲ್ಲಿ ಜಗತ್ತಿನ ದೇಶಗಳ ಸಂಪರ್ಕ ಮತ್ತು ಖಂಡಗಳ ಸಂಪರ್ಕ ಕೇವಲ ಹಡಗುಗಳ ಮುಖಾಂತರವಾಗಿ ನಡೆಯುತ್ತ ಬಂದಿರುವದರಿಂದ ಮೀನುಗಾರಿಕೆಯೇ ಮೊಟ್ಟ ಮೊದಲು ಇಂಥ ಒಂದು ಜಲಪರ್ಯಟನದ ಪ್ರಾರಂಭವನ್ನು ಹಾಕಿಕೊಟ್ಟಿತು ಎಂದು ಹೇಳಬಹುದು.

ಸಾಗರಗಳ ಪ್ರಾಚೀನತೆಯನ್ನು ಅಭ್ಯಾಸ ಮಾಡುವ ಪುರಾತತ್ವ ಶಾಸ್ತ್ರಜ್ಞರು ಭಾರತದ ಪೂರ್ವ ಕಡಲತೀರವಾದ ತಮಿಳುನಾಡು ಮತ್ತು ಆಂಧ್ರಪ್ರದೇಶದ ಕರಾವಳಿಗಳಲ್ಲಿ

ಅತಿ ಪ್ರಾಚೀನ ಮೀನುಗಾರಿಕೆಯ ಪ್ರದೇಶಗಳು, ಪಟ್ಟಣಗಳು ಮತ್ತು ಬಂದರಗಳು ಸಮುದ್ರದಲ್ಲಿ ಮುಳುಗಿ ಹೋಗಿವೆ ಎಂದು ಹೇಳುತ್ತಾರೆ. ಅದು ಖಚಿತವಾಗಿ ಗೊತ್ತಾದರೆ ನಾವು ಭಾರತದ ಪ್ರಾಚೀನ ಮೀನುಗಾರಿಕೆಯನ್ನು ಮಲೇಶಿಯಾ ನಡುಗಡ್ಡೆಗಳೊಂದಿಗೆ ಇದ್ದ ಸಂಬಂಧವನ್ನು ಸರಿಯಾಗಿ ಕಲ್ಪಿಸಬಹುದು. ಅಷ್ಟೇ ಅಲ್ಲ ಮಲೇಶಿಯಾದ ಮೀನುಗಾರ ಜನಾಂಗಗಳು ಭಾರತಕ್ಕೆ ಹೇಗೆ ತಲುಪಿದರು ? ಯಾವಾಗ ತಲುಪಿದರು ? ಎಂಬುದನ್ನು ನಿರ್ಧಿಷ್ಟವಾಗಿ ನಾವು ಹೇಳಬಹುದು.

ಭಾರತದಲ್ಲಿ ಭವಿಷ್ಯ ಹೇಳುವ ಪದ್ಧತಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ನಮ್ಮ ದೇಶದಲ್ಲಿ ಅರಸರು ಭವಿಷ್ಯ ಹೇಳುವವರನ್ನು ತಮ್ಮ ಆಸ್ಥಾನದಲ್ಲಿ ಇಟ್ಟುಕೊಳ್ಳುತ್ತಿದ್ದರು. ಭಾರತದಲ್ಲಿ ಬೆಳೆದು ಬಂದ ಭವಿಷ್ಯ ಶಾಸ್ತ್ರದಲ್ಲಿ ೧೨ ರಾಶಿಗಳನ್ನು ಮಾಡಿ ಪ್ರತಿಯೊಬ್ಬರು ಯಾವ ರಾಶಿಗೆ ಸಂಬಂಧಿಸಿರುತ್ತಾರೋ ಅಂಥವರ ಭವಿಷ್ಯವನ್ನು ಪ್ರತಿಯೊಬ್ಬನ ರಾಶಿಯನ್ನು ನೋಡಿ ಭವಿಷ್ಯ ಹೇಳುತ್ತಾರೆ. ಇಂಥ ೧೨ ರಾಶಿಗಳಲ್ಲಿ ಮೀನದ ಗುರುತೂ ಒಂದು ರಾಶಿಯಾಗಿದೆ. ಆದ್ದರಿಂದ ಭವಿಷ್ಯಕಾರರೂ ಸಹಿತ ಮೀನದ ಮಹತ್ವವನ್ನು ಮೊದಲಿನಿಂದಲೇ ತಿಳಿದುಕೊಂಡಿದ್ದಾರೆ ಎಂದು ಹೇಳಬಹುದು.

ಪುರಾಣಗಳಲ್ಲಿ ಬರುವ ಮನ್ಮಥನಿಗೆ ಮೀನದ ಧ್ವಜವಿರುವದನ್ನು ನಾವು ಇಲ್ಲಿ ಲಕ್ಷಿಸಬೇಕು. ಶಿವನ ಹೆಂಡತಿ

ಯಾದ ಪಾರ್ವತಿಗೆ ಮೀನಾಕ್ಷಿ ಎಂದು ಕರೆಯುವದುಂಟು
ಮೀನಾಕ್ಷಿ ಎಂದರೆ ಮೀನಗಳಂತೆ ಕಣ್ಣುಗಳುಳ್ಳವ
ಅಥವಾ ಸುಂದರವಾದ ಕಣ್ಣುಗಳನ್ನು ಹೊಂದಿದವಳೆಂದ
ಅರ್ಥವಾಗುತ್ತದೆ. ತಮಿಳುನಾಡಿನ ಮಧುರೆಯಲ್ಲಿ ಸು
ಸಿದ್ಧವಾದ ಮೀನಾಕ್ಷಿ ದೇವಾಲಯವಿರುವದನ್ನು ನಾವು ಇ
ನೆನೆಯಬಹುದು. ಇದರಮೇಲಿಂದ ನಾವು ನಮ್ಮ ಸಮೀ
ಯಲ್ಲಿ ಪುರಾಣಕಾಲದಲ್ಲಿ ಮತ್ತು ಪ್ರಾಚೀನ ಕಾಲದ
ಮತ್ತು ನಂತರ ಮೀನವು ಎಷ್ಟೊಂದು ಮಹತ್ವದ ಪ್ರಾ
ಯಾಗಿತ್ತೆಂಬುದನ್ನು ಕಂಡುಕೊಳ್ಳುತ್ತೇವೆ.

೩

ಮೀನುಗಾರಿಕೆಯ ತಂತ್ರದ ಬೆಳವಣಿಗೆ

ಮೊದಲನೆಯ ಅಧ್ಯಾಯದಲ್ಲಿ ನಾವು ಮೀನುಗಾರಿಕೆಯು ಜಗತ್ತಿನ ಯಾವ ಯಾವ ಭಾಗಗಳಲ್ಲಿ ಹೇಗೆ ಪ್ರಾರಂಭವಾಯಿತು ಮತ್ತು ಅದು ಭಾರತದ ಪ್ರಾಚೀನ ಕಾಲದಲ್ಲಿ ಮಹತ್ವವಾದ ಉದ್ಯೋಗವಾಗಿತ್ತು ಎಂಬ ಬಗ್ಗೆ ತಿಳಿದುಕೊಂಡೆವು. ಈ ಎರಡನೆಯ ಅಧ್ಯಾಯದಲ್ಲಿ ಮೀನುಗಾರಿಕೆಯ ತಂತ್ರಗಳು ಪ್ರಾಚೀನಕಾಲದಿಂದ ಬೆಳವಣಿಗೆಯಾಗಿ ಬಂದ ರೀತಿಗಳನ್ನು ಕುರಿತು ವಿಚಾರಿಸುವಾ.

ಮಾನವಶಾಸ್ತ್ರಜ್ಞರ ಪ್ರಕಾರ ಮೀನುಗಾರಿಕೆಯು ಈಗಿನಿಂದ ೨೦-೩೫ ಸಾವಿರ ವರ್ಷಗಳ ಹಿಂದೆಯೇ ಪ್ರಾರಂಭವಾಯಿತು. ಅದಕ್ಕಿಂತ ಪೂರ್ವದಲ್ಲಿ ಮಾನವನು ಗುಹೆಗಳಲ್ಲಿ ವಾಸವಾಗಿದ್ದುಕೊಂಡು ಗಡ್ಡೆ-ಗೆಣಸು, ಹಣ್ಣು-ಹಂಪಲಗಳನ್ನು ಸಂಗ್ರಹಿಸುವದರಲ್ಲಿ ಮತ್ತು ವನ್ಯಪ್ರಾಣಿಗಳ ಬೇಟೆಯಾಡುವದರಲ್ಲಿ ತೊಡಗಿದ್ದನು. ಅದರಂತೆಯೇ ಮೀನುಗಾರಿಕೆಯು ಪ್ರಾರಂಭದಲ್ಲಿ ಸಮುದ್ರ ತೀರದಲ್ಲಿ ಮತ್ತು ಜಲಸಂಗ್ರಹಗಳ ತೀರದಲ್ಲಿ ಸತ್ತುಬಿದ್ದ ಮೀನುಗಳನ್ನು ಆರಿಸುವದೇ ಆಗಿತ್ತು. ಆಗಲೇ ಅವನು ಅದು ಮಾನವನ ಆಹಾರವಾಗಬಲ್ಲದೆಂದು ಕಂಡುಕೊಂಡನು. ನಂತರ ಅವನು ಮೀನುಗಳನ್ನು ಸಮುದ್ರತೀರದ ನೀರಿನಲ್ಲಿ ಮತ್ತು ಜಲಸಂಗ್ರಹಗಳ

ನೀರಿನಲ್ಲಿ ಅಡ್ಡಾಡಿ ಕೈಗಳಿಂದಲೇ ಮೀನುಗಳನ್ನು ಹಿಡಿಯುಲಿಕ್ಕೆ ಪ್ರಾರಂಭಿಸಿದನು. ಯಾಕೆಂದರೆ ಆಗ ಅವನ ಬುದ್ಧಿಮತ್ತೆಯು ಮತ್ತು ಸಂಸ್ಕೃತಿಯು ಬೆಳವಣಿಗೆಯಾಗಿರಲಿಲ್ಲ. ಅವನಿಗೆ ಇನ್ನೂ ಸಾಧನಗಳನ್ನು ಉಪಯೋಗಿಸುವದು ಗೊತ್ತಾಗಿರಲಿಲ್ಲ. ಮಾನವನು ಸಾಧನಗಳನ್ನು ನಿರ್ಮಿಸಿ ತನ್ನ ಸಂಸ್ಕೃತಿಯನ್ನು ಬೆಳೆಯಿಸಿಕೊಳ್ಳುತ್ತಾ ಬಂದಿದ್ದಾನೆ. ಆದ್ದರಿಂದಲೇ ಮಾನವನಿಗೆ "ಸಾಧನ ನಿರ್ಮಾಪಕ"ನೆಂದು ಕರೆಯುತ್ತಾರೆ. ಅವನು ಕಾಲ ಕಳೆದಂತೆ ಮೀನು ಹಿಡಿಯುವದಕ್ಕಾಗಿಯೂ ಸಾಧನಗಳನ್ನು ಉಪಯೋಗಿಸಹತ್ತಿದನು. ಕಾಲಕ್ರಮೇಣ ಇಂಥ ಸಾಧನಗಳ ಬೆಳವಣಿಗೆ ಆದದ್ದು ನಮಗೆ ಖಚಿತವಾಗಿ ತಿಳಿದುಬರುತ್ತದೆ.

ಮೀನುಗಾರಿಕೆಯಲ್ಲಿ ಅವನು ಮೊಟ್ಟ ಮೊದಲಿಗೆ ಉಪಯೋಗಿಸಲಿಕ್ಕೆ ಹತ್ತಿದ ಸಾಧನವೆಂದರೆ ಭರ್ಚಿ, ಬೇಟೆಯಾಡುವವಕ್ಕೂ ಅವನು ಭರ್ಚಿಗಳನ್ನೇ ಮೊಟ್ಟಮೊದಲಿಗೆ ಉಪಯೋಗಿಸುತ್ತಿದ್ದನು. ಒಂದು ರೀತಿಯಿಂದ ಮೀನುಗಾರಿಕೆ ಅವನಿಗೆ ನೀರಿನಲ್ಲಿಯ ಮೀನುಗಳನ್ನು ಬೇಟೆಯಾಡುವದೇ ಆಗಿತ್ತು. ಅವನಿಗೆ ಮೊಟ್ಟಮೊದಲು ಕಬ್ಬಿಣದ ಭರ್ಚಿಗಳ ಪರಿಚಯವಿಲ್ಲದಿದ್ದರೂ ಕಟ್ಟಿಗೆಯ ಮತ್ತು ಎಲುಬಿನ ಅಥವಾ ಕಟ್ಟಿಗೆಯ ಭರ್ಚಿಗೆ ಎಲುಬಿನ ಮೊನೆ ಇರುವ ಭರ್ಚಿಗಳೇ ಮೀನುಗಾರಿಕೆಯ ಸಾಧನಗಳಾಗಿದ್ದವು. ಅವನಿಗೆ ತಾಮ್ರದ ಮತ್ತು ಹಿತ್ತಾಳೆಯ ಪರಿಚಯವಾದ ನಂತರ ಅವುಗಳಿಂದ ಮಾಡಿದ ಭರ್ಚಿಗಳನ್ನು ಉಪಯೋಗಿಸಲಿಕ್ಕೆ ಹತ್ತಿದನು.

ಇನ್ನೂವರೆಗೆ ಸಾಂಸ್ಕೃತಿಕ ಬೆಳವಣಿಗೆ ಆಗದ ಆಫ್ರಿಕಾದ ಅನೇಕ ಜನಾಂಗಗಳು ಮೀನು ಹಿಡಿಯಲಿಕ್ಕೆ ಕಟ್ಟಿಗದ ಭರ್ಚಿಗಳನ್ನೇ ಉಪಯೋಗಿಸುತ್ತಾರೆ. ಬೇಟೆಯಾಡುವದರಲ್ಲಿ ಅಥವಾ ಮೀನುಗಾರಿಕೆಯ ಬೇಟೆಯಲ್ಲಿ ಭರ್ಚಿಗಳನ್ನು ಉಪಯೋಗಿಸುವದೆಂದರೆ ಅವನು ಅತಿ ಸಮೀಪದಿಂದ ನೀರಿನಲ್ಲಿ ಇದ್ದುಕೊಂಡು ಭರ್ಚಿಗಳ ಪ್ರಹಾರ ಮಾಡಬೇಕಾಗುತ್ತದೆ.

ಕಾಲಕಳೆದಂತೆ ದೂರದಿಂದ ಮೀನುಗಳ ಬೇಟೆಯಾಡುವದಕ್ಕಾಗಿ ಅವನು ಬಿಲ್ಲು ಬಾಣಗಳನ್ನು (Missiles) ಉಪಯೋಗಿಸಹತ್ತಿದನು. ಈ ಬಿಲ್ಲು ಬಾಣಗಳನ್ನು ಅವನು ಮೊದಲು ಪ್ರಾಣಿಗಳ ಬೇಟೆಯಾಡುವದರಲ್ಲಿ ಉಪಯೋಗಿಸಿ ಅವುಗಳನ್ನೇ ಮೀನುಗಳ ಬೇಟೆಗೂ ಉಪಯೋಗಿಸಹತ್ತಿದನು. ಬಿಲ್ಲು ಬಾಣಗಳನ್ನು ಉಪಯೋಗಿಸಿ ಮೀನುಗಳ ಬೇಟೆಯಾಡುವದು ಅತಿ ಕಠಿಣವಾದ ಕೆಲಸವಾಗಿದೆ. ಏಕೆಂದರೆ ನೀರಿನಲ್ಲಿಯ ಮೀನವು ಒಂದೆಡೆ ಇದ್ದರೆ ಮತ್ತೊಂದೆಡೆ ಇದ್ದಂತೆ ಕಾಣುತ್ತದೆ. (Due to refraction) ಆದ್ದರಿಂದ ನೀರಿನಲ್ಲಿರುವ ಮೀನಿನ ಮೇಲೆ ಗುರಿ ಇಟ್ಟು ಬಾಣ ಬಿಡುವದು ಕೇವಲ ಅಭ್ಯಾಸದ ಬಲದಿಂದ ಸಾಧ್ಯವಾಗುತ್ತದೆ. ಮೊದಲು ಅವನು ಕಟ್ಟಿಗೆ ಮತ್ತು ಎಲುಬಿನಿಂದಲೇ ಬಿಲ್ಲು-ಬಾಣಗಳನ್ನು ತಯಾರಿಸುತ್ತಿದ್ದನು. ಧಾತುಗಳ ಉಪಯೋಗ ತಿಳಿದ ನಂತರ ಧಾತುಗಳಿಂದ ತಯಾರಿಸಿದ ಬಿಲ್ಲು-ಬಾಣಗಳನ್ನು ಉಪಯೋಗಿಸಹತ್ತಿದನು.

ಕಾಲವು ಗತಿಸಿದಂತೆ ಮೀನುಗಳನ್ನು ಹಿಡಿಯುವದರಲ್ಲಿ ಅವನು ತನ್ನ ಜಾಣತನವನ್ನು ಇನ್ನೂ ಬೆಳೆಯಿಸಿಕೊಂಡನು. ಮೀನುಗಳನ್ನು ಆಕರ್ಷಿಸುವದರ ಸಲುವಾಗಿ ಮೀನುಗಳಿಗೆ ಆಹಾರದ ಆಮಿಷವನ್ನು ತೋರಿಸಿ ಮೀನುಗಳನ್ನು ಹಿಡಿಯುವ ಪದ್ಧತಿ ಬೆಳೆದು ಬಂದಿತು. ಗಾಳದ ಕೊಂಡಿಗಳಿಗೆ ಇಲ್ಲವೆ ಬಲೆಗಳಲ್ಲಿ ಮೀನದ ಆಹಾರವನ್ನು ಇಟ್ಟು ಅವುಗಳನ್ನು ಆಕರ್ಷಿಸಿ ಮೀನು ಹಿಡಿಯುವ ಪದ್ಧತಿ ಪ್ರಾರಂಭವಾಯಿತು.

ಇದಾದ ನಂತರ ಕೊಂಡಿಗಳ ಮುಖಾಂತರ ಮೀನುಗಳನ್ನು ಹಿಡಿಯಲಿಕ್ಕೆ ಪ್ರಾರಂಭವಾಯಿತು. ಈ ಕೊಂಡಿಗಳು ಚೂಪಾಗಿರುವದರಿಂದ ನೀರಿನಲ್ಲಿ ಓಡಾಡುವ ಮೀನುಗಳು ಇಂಥ ಕೊಂಡಿಗಳಿಗೆ ಬಡಿದ ಕೂಡಲೇ ಅವುಗಳಲ್ಲಿ ಸಿಕ್ಕಿಕೊಳ್ಳುತ್ತವೆ. ನಂತರ ಈ ಕೊಂಡಿಯನ್ನು ಹೊರತೆಗೆದು ಸಿಕ್ಕಿಕೊಂಡ ಮೀನುಗಳನ್ನು ಬೇರ್ಪಡಿಸಿ ಸಂಗ್ರಹಿಸುತ್ತಾರೆ.

ಸಣ್ಣ ಪುಟ್ಟ ನೀರಿನ ಸಂಗ್ರಹಗಳಲ್ಲಿ ಮೀನುಗಳನ್ನು ಹಿಡಿಯುವದು ಇನ್ನೂ ಅತಿ ಕುತೂಹಲಕಾರಿಯಾಗಿದೆ. ಕೆಲವು ಮೂಲ ನಿವಾಸಿಗಳಿಗೆ ಅಡವಿಗಳಲ್ಲಿಯ ಕೆಲವು ವಿಷಕಾರಿ ವನಸ್ಪತಿಗಳ ಹಾಗೂ ಫಲಗಳ ಪರಿಚಯವಿರುತ್ತದೆ. ಅವರು ಅಂಥ ವನಸ್ಪತಿಗಳನ್ನಾಗಲೀ, ಬೀಜಗಳನ್ನಾಗಲೀ ಅಥವಾ ಫಲಗಳನ್ನಾಗಲೀ ಇಂಥ ಸಣ್ಣ-ಪುಟ್ಟ ನೀರಿನ ಸಂಗ್ರಹಗಳಲ್ಲಿ ಹಾಕುತ್ತಾರೆ. ವಿಷ ಮಿಶ್ರಿತ ನೀರಿನಿಂದಾಗಿ ಮೀನುಗಳು ಮಂದಸ್ಥಿತವಾಗಿ ಓಡಾಡಲಿಕ್ಕೆ ಪ್ರಾರಂಭಿಸು

ತ್ತವೆ. ಆಗ ಅವುಗಳನ್ನು ಸುಲಭವಾಗಿ ಕೈಗಳಿಂದ ಹಿಡಿದು ಸಂಗ್ರಹಿಸುತ್ತಾರೆ. ಇಂಥ ಒಂದು ತಂತ್ರವು ಅನೇಕ ದೇಶಗಳ ಮೂಲನಿವಾಸಿಗಳಲ್ಲಿ ಇಂದಿಗೂ ಅಸ್ತಿತ್ವದಲ್ಲಿ ಇರುವ ಬಗ್ಗೆ ಮಾನವ ಶಾಸ್ತ್ರಜ್ಞರು ಸಾಕಷ್ಟು ಸಂಗತಿಗಳನ್ನು ಕಲೆ ಹಾಕಿದ್ದಾರೆ ಕರ್ನಾಟಕದಲ್ಲಿಯ ಉತ್ತರಕನ್ನಡ ಜಿಲ್ಲೆಯ ಸಿದ್ದೀ ಜನರು ಮತ್ತು ಕುಮರೀ ಮರಾಠಿಗರು ಇಂಥ ತಂತ್ರಗಳನ್ನು ಇಂದಿಗೂ ಬಳೆಯಿಸಿಕೊಳ್ಳುತ್ತಾರೆ.

ಇತ್ತೀಚೆಗೆ ಹಲವು ಬಗೆಯ ಜಾಳಿಗೆಗಳನ್ನು ಮತ್ತು ಬಿದಿರಿನ ಬುಟ್ಟಿಗಳನ್ನು ಉಪಯೋಗಿಸಿ ಮೀನುಗಳನ್ನು ಹಿಡಿಯುವ ಪದ್ಧತಿ ಬೆಳೆದು ಬಂದಿದೆ. ಈ ತಂತ್ರದಲ್ಲಿ ಮೀನುಗಳು ಒಳ್ಳೇ ಸುಲಭವಾಗಿ ಜಾಳಿಗೆಗಳಲ್ಲಿ ಮತ್ತು ಬಲಿಯ ಬುಟ್ಟಿಗಳಲ್ಲಿ ಒಳಗೆ ಹೋಗಲಿಕ್ಕೆ ಅನುಕೂಲವಿರುತ್ತದೆ. ಆದರೆ ಅವುಗಳಿಗೆ ಹೊರಗೆ ಬರಲಿಕ್ಕೆ ಅವಕಾಶವಿರುವದಿಲ್ಲ.

ಡಾ. ಪುಣೇಕರ ಅವರು ಕೋಳಿ ಜನರು ಉಪಯೋಗಿಸುವ ಸುಮಾರು ೩೦ ತರದ ಮೀನು ಹಿಡಿಯುವ ಜಾಳಿಗೆಗಳನ್ನು ವರ್ಣಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ: ಮೊದಲನೆಯವು ಸ್ಥಾಯೀ ಜಾಳಿಗೆಗಳು: ಈ ಪ್ರಕಾರದ ಜಾಳಿಗೆಗಳಲ್ಲಿ ಮುಖ್ಯವಾಗಿ ದೋಲ, ಭೋಕ್ಷಿ, ಧರಸ್ ಮತ್ತು ಟಬೋಟಿ ಎಂದು ಹೇಳಿದ್ದಾರೆ. ಎರಡನೆಯ ಪ್ರಕಾರದ ಜಾಳಿಗೆಗಳು ಹಡಗುಗಳಲ್ಲಿ ಉಪ

ಯೋಗಿಸುವ ಜಾಳಿಗೆಗಳು. ಅವುಗಳಲ್ಲಿ ಜಾಲ, ವಾಗರಾ, ವಾಪ್ರಿ, ವೊಂಗ್ರಿ, ಪೇರಾ, ಪೋಗಲಿ ಅಥವಾ ಖಾಂಡ್ರಾ, ಯೇರಿ ಅಥವಾ ವೇರಿ, ಮತ್ತು ಗೋಳ್ವಾ ಎಂಬಿದ್ದಾರೆ. ಮೂರನೆಯದಾಗಿ ಒಂದೇ ಕೈಯಿಂದ ಉಪಯೋಗಿಸುವ ಜಾಳಿಗೆಗಳು. ಅವುಗಳಲ್ಲಿ ಪಾಗ, ಪಾಖಾ, ಹಾಥ, ಮತ್ತು ಗಡಾ ಎಂಬ ಜಾಳಿಗೆಗಳು. ನಾಲ್ಕನೆಯದವು ಇತರ ತರದ ಜಾಳಿಗೆಗಳು. ಅವುಗಳಲ್ಲಿ ಮುಖ್ಯವಾಗಿ ದೀಪಾ, ಕಸಾನಿ ಮುಂತಾದವುಗಳು. ಈ ಜಾಳಿಗೆಗಳು ೧ ವರ್ಷದಿಂದ ಹಿಡಿದು ೪–೫ ವರ್ಷಗಳ ವರೆಗೆ ಉಪಯೋಗಿಸಲಿಕ್ಕೆ ಬರುತ್ತದೆ. ಅತಿ ಹೆಚ್ಚು ಅಂದರೆ ೧೦ ವರ್ಷಗಳವರೆಗೆ ಉಪಯೋಗ ಮಾಡಲಿಕ್ಕೆ ಬರುತ್ತವೆ. ಮತ್ತು ಅನೇಕ ಸಲ ಇವುಗಳನ್ನು ರಿಪೇರಿ ಮಾಡಬೇಕಾಗುತ್ತದೆ. ಜಾಳಿಗೆಗಳನ್ನು ಮಾಡುವಾಗ ಇತ್ತೀಚೆಗೆ ಹತ್ತಿಯ ನೂಲನ್ನು ಬಿಟ್ಟು ನೈಲಾನನ್ನು ಸಹ ಉಪಯೋಗಿಸಹತ್ತಿದ್ದಾರೆ. ಜಾಳಿಗೆಗಳು ತೇಲುವದಕ್ಕೆ ಅನುಕೂಲವಾಗಲಿಕ್ಕೆ ಅವುಗಳಿಗೆ ಕಟ್ಟಿಗೆಯ ಬೆಂಡುಗಳನ್ನು ಸೇರಿಸುವ ಬದಲಾಗಿ ಪ್ಲ್ಯಾಸ್ಟಿಕ್ ಬೆಂಡುಗಳನ್ನು ಸೇರಿಸಹತ್ತಿದ್ದಾನೆ.

ಮೀನುಗಾರಿಕೆಯ ತಂತ್ರಗಳಲ್ಲಿ ಪಕ್ಷಿಗಳನ್ನು ಮತ್ತು ಪ್ರಾಣಿಗಳನ್ನು ಉಪಯೋಗಿಸಿ ಮೀನು ಹಿಡಿಯುವ ಪದ್ಧತಿಯೂ ಸಹಿತ ಕೆಲವು ದೇಶಗಳಲ್ಲಿ ಬೆಳೆದು ಬಂದಿದೆ. ಮಲೇಶಿಯಾ ನಡುಗಡ್ಡೆಗಳಲ್ಲಿ ಅತಿ ಪ್ರಾಚೀನ ಕಾಲದಿಂದಲೇ ಕಾರ್ಮೊರಂಟ ಎಂದು ಕರೆಯುವ ಒಂದು ಪಕ್ಷಿಯ ಸಹಾಯ

ಂದ ಮೀನುಗಳನ್ನು ಹಿಡಿಯುವ ಪದ್ಧತಿ ಬೆಳೆದು ಬಂದಿದೆ. ಈ ಕಾರ್ಮೊರಂಟ್ ಪಕ್ಷಿಗಳಿಗೆ ಮೀನು ಹಿಡಿಯುವಲ್ಲಿ ತರಬೇತಿಯನ್ನು ಸಹಿತ ಕೊಡಲಾಗುತ್ತಿದೆ. ಈ ಒಂದು ಸೋಜಿಗದ ಸಂಗತಿ ಎಂದರೆ ಈ ಪಕ್ಷಿಗಳು ಸಹಜವಾಗಿ ತಾವಾಗಿಯೇ ಕೇವಲ ಏಳು ಮೀನುಗಳನ್ನು ಮಾತ್ರ ಹಿಡಿದು ತರುತ್ತವೆ. ಇತ್ತೀಚೆಗೆ ಈ ಪಕ್ಷಿಯನ್ನು ನಾವೆಗಳಲ್ಲಿ ಮೀನುಗಾರರು ತಮ್ಮೊಂದಿಗೆ ಒಯ್ಯುತ್ತಾರೆ ಮತ್ತು ಇವು ಮೀನುಗಳನ್ನು ನುಂಗಬಾರದೆಂಬ ಉದ್ದೇಶದಿಂದ ಅವುಗಳ ಕುತ್ತಿಗೆಗೆ ಉಂಗುರಗಳನ್ನು ಹಾಕುತ್ತಾರೆ. ಅವು ಮೀನುಗಳನ್ನು ಹಿಡಿದು ತಂದನಂತರ ಮೀನನ್ನು ತೆಗೆದುಕೊಂಡು ಮತ್ತೆ ಸಮುದ್ರದಲ್ಲಿ ಹಾರಿ ಬಿಡುತ್ತಾರೆ. ಈ ಪ್ರಕಾರವಾಗಿ ಅದು ಏಳು ಮೀನುಗಳನ್ನು ಹಿಡಿದ ನಂತರ ಎಂಟನೆಯ ಮೀನು ಅದರ ಆಹಾರಕ್ಕೆಂದು ಉಂಗುರವನ್ನು ತೆಗೆದು ಹಾರಿಬಿಡಲಾಯಿತು. ಆದರೆ ಎಂಟನೆಯ ಮೀನವನ್ನು ಅದು ಹಿಡಿಯಲಿಲ್ಲ. ಈ ಪ್ರಕಾರವಾಗಿ ಮೀನುಗಳನ್ನು ಹಿಡಿಯಲಿಕ್ಕೆ ಪಕ್ಷಿಗಳನ್ನು ತರಬೇತಿಗೊಳಿಸಬಹುದು. ನಾಯಿಗಳನ್ನು ಸಹಿತ ತರಬೇತಿಗೊಳಿಸಿ ಮೀನುಗಳನ್ನು ಬೇಟೆ ಮಾಡುವಂತೆ ಮಾಡಬಹುದು. ಈ ಪ್ರಕಾರವಾಗಿ ಪಕ್ಷಿಗಳನ್ನು ಮತ್ತು ಪ್ರಾಣಿಗಳನ್ನು ಮೀನುಗಾರಿಕೆಯ ತಂತ್ರದಲ್ಲಿ ಉಪಯೋಗಿಸಿಕೊಳ್ಳುವದುಂಟು. ಸಣ್ಣ ಮೀನುಗಳನ್ನು ಹಿಡಿಯುವದಕ್ಕಾಗಿ ದೊಡ್ಡ ಮೀನುಗಳನ್ನು ಸಹಿತ ಉಪಯೋಗಿಸಬಹುದೆಂದು ತಿಳಿದು ಬರುತ್ತದೆ. ಪ್ರಾಣಿ

ಗಳಲ್ಲಿಯ ಅಂತರ್ ಹೋರಾಟವನ್ನು ಒಮ್ಮೊಮ್ಮೆ ದೊ
ಮೀನು ಸಣ್ಣ ಮೀನವನ್ನು ತಿಂದು ಹಾಕುವ ದೃಷ್ಟಾಂತ
ಹೋಲಿಸುವದನ್ನು ಇಲ್ಲಿ ಗಮನಿಸಬೇಕು.

ಮೀನುಗಾರಿಕೆಯನ್ನು ಕಡಲು ತೀರದಲ್ಲಿಯೇ ಅನೇ
ವಿಭಾಗಗಳಾಗಿ ಗುರುತಿಸಲಾಗಿದೆ. ಇವು ಮೀನುಗಾರಿಕೆ
ತಂತ್ರದಲ್ಲಿ ವಿಭಿನ್ನ ಪ್ರಕಾರದವುಗಳಾಗಿರುವದರಿಂದ ಇ
ಗಳನ್ನು ಸ್ವಲ್ಪ ವಿಚಾರಿಸುವಾ. ಮೊದಲನೆಯದಾ
ಕಡಲು ತೀರದ ಕೆಸರಿನಲ್ಲಿಯ ಮೀನುಗಾರಿಕೆ ಎಂದು ಹೇ
ಲಾಗಿದೆ. ಈ ಜಲಸಂಗ್ರಹಗಳು ಸ್ವಚ್ಛವಾಗಿರದೆ ಕೆಸ
ಗಳಿಂದ ತುಂಬಿಕೊಂಡಿರುವದರಿಂದ ಇವುಗಳನ್ನು ಹಿ
ಕರೆಯಲಾಗಿದೆ. ಸ್ವಚ್ಛವಾಗಿರುವ ನೀರಿನ ಸಂಗ್ರಹಗಳಿಗಿಂ
ಇಂಥ ಕೆಸರು ನೀರಿನ ಸಂಗ್ರಹಗಳಲ್ಲಿ ಮೀನುಗಾರಿಕೆ ಕಠಿ
ತಮವಾದುದು ಆಗಿದೆ. ಕೆಸರಿನಲ್ಲಿ ಮೀನುಗಾರಿಕೆ ಮಾ
ವಾಗ ಮನುಷ್ಯನು ಬಿದ್ದರೆ ಜೀವಕ್ಕೆ ಗಂಡಾಂತರ ಪ್ರಾ
ವಾಗಿದೆ. ಆದರೆ ಕೆಸರು ನೀರುಗಳಲ್ಲಿ ಮೀನುಗಳು ಹೆಚ್
ದೊರೆಯುವ ಸಂಭವವಿರುವದರಿಂದ ಇಂಥ ಮೀನುಗಾ
ಲಾಭದಾಯಕವೂ ಆಗಿವೆ. ನಾವು ಮೊದಲೇ ಹೇಳಿದ
ಎಸ್ಕಿಮೋ ಜನರು ಕೇವಲ ಸ್ವಚ್ಛ ನೀರಿನಲ್ಲಿ ಮೀನುಗಾ
ಮಾಡುವವರಾಗಿದ್ದಾರೆ. ಎರಡನೆಯದಾಗಿ ಸಮುದ್
ಒತ್ತಡಗಳಲ್ಲಿಯ ಮೀನುಗಾರಿಕೆ ಎಂದು ಹೇಳಲಾಗಿ
ಸಮುದ್ರದ ಒತ್ತಡಗಳು ಒಮ್ಮೊಮ್ಮೆ ಭೂಭಾಗದಲ್ಲಿ
ದೂರದವರೆಗೆ ಪಸರಿಸಿರುತ್ತವೆ. ಇಂಥ ಪ್ರದೇಶಗ

ವಾಸವಾಗಿರುವ ಮೀನುಗಾರರು ಮೀನುಗಾರಿಕೆಯನ್ನು ಮಾಡಿ ಒಳ ಪ್ರದೇಶಗಳಿಗೆ ತಮ್ಮ ಮೀನುಗಳನ್ನು ಸಾಗಿಸುತ್ತಾರೆ. ಆದ್ದರಿಂದ ಇಂಥಲ್ಲಿ ಮೀನುಗಾರರ ವಸತಿಗಳು ಬೆಳೆಯುತ್ತವೆ.

ಮೂರನೆಯದಾಗಿ ಸಮುದ್ರ ತೀರದ ಮೀನುಗಾರಿಕೆ ಎಂದು ಹೇಳಲಾಗಿದೆ. ಸಮುದ್ರ ತೀರದ ಮೀನುಗಾರಿಕೆಯಲ್ಲಿ ಸಣ್ಣ ಸಣ್ಣ ನಾವೆಗಳನ್ನು ಉಪಯೋಗಿಸಿ ದಂಡೆಬಂಟಿ ಜಾಳಿಗೆಗಳ ಮುಖಾಂತರ ಮೀನುಗಳನ್ನು ಹಿಡಿಯುತ್ತಾರೆ. ಒಮ್ಮೊಮ್ಮೆ ಒಬ್ಬೊಬ್ಬರು ಸಹಿತ ಇಂಥ ಸಾಹಸಗಳನ್ನು ಕೈಕೊಳ್ಳುತ್ತಾರೆ. ಹೆಚ್ಚಾಗಿ ೨-೫ ಜನರು ಕೂಡಿ ಸಮುದ್ರ ತೀರಗಳಲ್ಲಿ ಸಣ್ಣ ನಾವೆಗಳಲ್ಲಿ ಮೀನು ಹಿಡಿಯುವದೇ ಹೆಚ್ಚು. ಕೆಲವು ಸಲ ಸಮುದ್ರದಲ್ಲಿ ತೀರದವರೆಗೆ ದೈತ್ಯಾಕಾರದ ಮೀನುಗಳು ಇಂಥ ಸಣ್ಣ ನಾವೆಗಳನ್ನು ಬುಡಮೇಲು ಮಾಡುವದುಂಟು. ಮೀನುಗಾರರಿಗೆ ಬಿರುಗಾಳಿಗಳ, ದೊಡ್ಡ ತೆರೆಗಳ ಮತ್ತು ಸಮುದ್ರದ ಪ...ತಗಳ ಭಯವಂತೂ ಯಾವಾಗಲೂ ಇದ್ದೇ ಇರುತ್ತದೆ. ಸಮುದ್ರ ತೀರದ ಮೀನುಗಾರಿಕೆಯನ್ನು ಕೈಕೊಳ್ಳುವವರೇ ಹೆಚ್ಚು. ಇದು ಪ್ರಾಚೀನ ಕಾಲದಿಂದ ನಡೆದು ಬಂದ ಸಂಪ್ರದಾಯ. ಇನ್ನು ನಾಲ್ಕನೆಯದಾಗಿ ಸಮುದ್ರದ ಒಳ ಪ್ರದೇಶದ ಮೀನುಗಾರಿಕೆ ಎಂದು ಹೇಳಲಾಗಿದೆ. ಈ ಮೀನುಗಾರಿಕೆಯು ಸಹಿತ ನಮ್ಮ ದೇಶದಲ್ಲಿ ಮತ್ತು ಇನ್ನಿತರ ದೇಶಗಳ ಮೀನುಗಾರಿಕೆಯಲ್ಲಿ ಪ್ರಾಚೀನ ಕಾಲದಿಂದಲೂ

ಮೀನುಗಾರಿಕೆಯ ತಂತ್ರಗಳಲ್ಲಿ ಕೇವಲ ಕಡಲು ತೀರದ ಮೀನುಗಾರಿಕೆಯನ್ನು ಅವಲೋಕಿಸಿದರೆ ಸಾಲದು. ಒಳ ನಾಡಿನ ಮೀನುಗಾರಿಕೆಯನ್ನು ಅವಲೋಕಿಸುವದೂ ಅಷ್ಟೇ ಮಹತ್ವದ್ದಾಗಿದೆ. ಆದ್ದರಿಂದ ನಮ್ಮ ಮೀನುಗಾರರ ಜಾತಿಗಳು ಕೇವಲ ಕಡಲು ತೀರದ ಪ್ರದೇಶಗಳಲ್ಲಿ ಮಾತ್ರ ವಾಸವಾಗಿರದೆ ಅವರು ಒಳನಾಡಿನಲ್ಲಿಯೂ ಕಂಡುಬರುತ್ತಾರೆ. ನಮ್ಮ ದೇಶವು ಸರೋವರಗಳಿಂದ, ಕೆರೆಗಳಿಂದ, ನದಿಗಳಿಂದ ಮತ್ತು ಜಲಾಶಯಗಳಿಂದ ತುಂಬಿಹೋಗಿರುವ ದೇಶವಾಗಿರುವದರಿಂದ ಮೀನುಗಾರರ ಮತ್ತು ನಾವಿಕರ ಜನಾಂಗಗಳು ಇಡೀ ದೇಶದಲ್ಲಿಯೇ ಪ್ರಾಚೀನ ಕಾಲದಿಂದಲೂ ಕಂಡು ಬರುತ್ತವೆ. ರಾಮಾಯಣದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯರನ್ನು ಗಂಗಾನದಿಯನ್ನು ದಾಟಿಸುವಲ್ಲಿ ನಾವಿಕರು ತೆಪ್ಪಗಳನ್ನು ಹೇಗೆ ಉಪಯೋಗಿಸಿದರೆಂಬ ಬಗ್ಗೆ ದೃಷ್ಟಾಂತಗಳನ್ನು ತೋರಿಸಲಾಗಿದೆ. ಹನುಮಂತನು ಸೀತೆಯ ಶೋಧಕ್ಕಾಗಿ ಲಂಕೆಯನ್ನು ತಲುಪುವದಕ್ಕಾಗಿ ಗುಡ್ಡಗಳನ್ನೇ ಎಳೆದು ತಂದು ಭಾರತದೇಶ ಮತ್ತು ಲಂಕೆಯ ನಡುಗಡ್ಡೆಯ ನಡುವೆ ಸೇತುವೆಯನ್ನು ಕಟ್ಟಿದನೆಂದು ಹೇಳಲಾಗಿದೆ. ರಾಮಾಯಣದ ಪ್ರಕಾರ ರಾಕ್ಷಸ ವಂಶದವನಾದ ರಾವಣನಿಗೆ ಮಾತ್ರ ವಾಯುಯಾನ ಬರುತ್ತಿತ್ತೆಂದೂ ಅವನು ಸೀತೆಯನ್ನು ಕೊಂಡೊಯ್ಯುವದಕ್ಕಾಗಿ 'ಪುಷ್ಪಕ' ಎಂಬ ಹೆಸರಿನ ವಿಮಾನವನ್ನು ಉಪಯೋಗಿಸಿದನೆಂದೂ ಹೇಳುತ್ತಾರೆ. ಮಹಾಭಾರತದಲ್ಲಿ ರಾಕ್ಷಸರೆಂದು ಕರೆದಿರುವ ಇವರು ದ್ರಾವಿ

ದರೇ ಆಗಿರಬೇಕು. ಯಾಕೆಂದರೆ ದಕ್ಷಿಣ ಭಾರತದಲ್ಲಿ ಇಂದಿಗೂ ರಾವಣನ ಬಗ್ಗೆ ಅಭಿಮಾನ ಇರುವದನ್ನು ನಾವು ಇಲ್ಲಿ ನೆನೆಯಬೇಕು. ದ್ರಾವಿಡ ಮುನ್ನೇತ್ರ ಕಳಗಂದವರು ರಾಮನಿಗೆ ಬದಲಾಗಿ ರಾವಣನಿಗೆ ಹೆಚ್ಚಿಗೆ ಭಕ್ತಿ ತೋರಿಸುತ್ತಾರೆ. ರಾಮನು ಆರ್ಯನಾಗಿದ್ದನು. ದ್ರಾವಿಡನಾದ ರಾವಣನು ವಾಯುಯಾನ ಮಾಡಿದನೆಂದು ಹೇಳಿದ ಬಳಿಕ ದ್ರಾವಿಡರು ತಂತ್ರಜ್ಞಾನದಲ್ಲಿ ಆರ್ಯರಿಗಿಂತಲೂ ಮುಂದುವರಿದಿದ್ದರೆಂದು ಹೇಳಬೇಕಾಗುತ್ತದೆ. ಈ ಮಾತು ಪ್ರಾಚ್ಯಶಾಸ್ತ್ರಜ್ಞರಿಂದಲೂ ಮನ್ನಿಸಲ್ಪಟ್ಟಿರುವದನ್ನು ನಾವು ಇಲ್ಲಿ ನೆನೆಯಬೇಕು. ರಾಮನಿಗೆ ಸಹಾಯ ಮಾಡಿದ ಹನುಮನನ್ನು ಆರ್ಯರು ವಾನರ ಎಂದು ಕರೆದಿದ್ದಾರೆ. ಮಹಾಭಾರತದಲ್ಲಿ ಟಿಬೇಟನ್ನರಿಗೆ ಬಂಗಾರ ಹೊರತೆಗೆಯುವ ಇರುವೆಗಳು ಎಂದು ಕರೆದಿರುವದರಿಂದ ಮಾನವ ಕುಲಗಳನ್ನು ಆರ್ಯರು ಕುಲಚಿಹ್ನೆಗಳಿಂದ ಕರೆಯುತ್ತಿದ್ದರೆಂದು ತೋರುತ್ತದೆ. ಆದರೆ ಆರ್ಯರಿಗೆ ಇನ್ನೂ ವಾಯುಯಾನ ಗೊತ್ತಿರಲಿಲ್ಲ. ಅವರು ಕೇವಲ ತೆಪ್ಪಗಳನ್ನು, ನೌಕೆಗಳನ್ನು ಮತ್ತು ಸೇತುವೆಗಳನ್ನು ಮಾತ್ರ ನದಿ ಮತ್ತು ಸಮುದ್ರಗಳನ್ನು ದಾಟುವದಕ್ಕೆ ಬಳಸಿಕೊಳ್ಳುತ್ತಿದ್ದರು. ಈ ನೌಕೆಯ ಮತ್ತು ಮೀನುಗಾರಿಕೆಯ ಉದ್ಯೋಗ ಮಾಡುವವರು ಹೆಚ್ಚಾಗಿ ಆರ್ಯರಾಗಿದ್ದಿಲ್ಲ. ಆದರೆ ಅವರು ಆರ್ಯರಿಗೆ ಇಂಥ ಕಾರ್ಯಗಳಲ್ಲಿ ಸೇವೆಗಳನ್ನು ಒದಗಿಸುತ್ತಿದ್ದರು. ಆದ್ದರಿಂದಲೇ ಅವರು ನಾಗಕುಲದವರೆಂದು ಮತ್ತು ಮತ್ಸ್ಯರೆಂದು ಕರೆಯಿಸಿ

ಕೊಳ್ಳುತ್ತಿದ್ದರು. ಅವರು ರಾಜಮಹಾರಾಜರ ಪರಿವಾರ ಗಳನ್ನು ನೋಡುವ ಕೆಲಸಗಳಲ್ಲಿ ನಿರತರಾಗಿದ್ದರಿಂದ ಅವರಿಗೆ 'ಪರಿವಾರದ'ವರೆಂದೂ ಕರೆಯುತ್ತಿದ್ದರು. ಇಂಥ ಅವರ ಅನೇಕ ಸೇವಾನಿಷ್ಠುರ ಉದ್ಯೋಗಗಳ ಮೇಲಿಂದ ಅವರಿಗೆ ಅನೇಕ ಹೆಸರುಗಳು ಅವರ ಜಾತಿಗಳಿಗೆ ಇಡಲ್ಪಟ್ಟಿದ್ದು ಅವುಗಳನ್ನು ನಾವು ಮುಂದಿನ ಭಾಗದಲ್ಲಿ ವಿವರವಾಗಿ ಚರ್ಚಿಸೋಣ. ಈಗ ಒಳನಾಡಿನ ಬಗೆಗಿನ ಮೀನುಗಾರಿ ಕೆಯ ಬಗ್ಗೆ ವಿಚಾರಿಸುವದು ಅವಶ್ಯವಾಗಿದೆ. ನದಿಗಳಲ್ಲಿ ಸರೋವರಗಳಲ್ಲಿ ಮತ್ತು ಕೆರೆಗಳಲ್ಲಿ ಜಲಚರ ಪ್ರಾಣಿಗಳು ಕಂಡುಬರುತ್ತವೆ. ಅವುಗಳಲ್ಲಿ ಆಹಾರದ ದೃಷ್ಟಿಯಿಂದ ಮೀನುಗಳೇ ಮಹತ್ವವಾದವುಗಳು. ಮತ್ತೆ ಕೆಲವು ಜಲಚರ ಪ್ರಾಣಿಗಳನ್ನು ಆಹಾರವನ್ನಾಗಿ ಉಪಯೋಗಿಸು ವದೂ ಸಹ ಕಂಡುಬರುತ್ತವೆ.

ಉತ್ತರ ಭಾರತದಲ್ಲಿಯ ನದಿಗಳು ಸಾವಕಾಶವಾಗಿ ಹರಿಯುತ್ತಿದ್ದರೆ ದಕ್ಷಿಣ ಭಾರತದ ನದಿಗಳು ಭರದಿಂದ ಹರಿಯುತ್ತಿವೆ. ಆದ್ದರಿಂದ ನೌಕಾ ವಿಹಾರಕ್ಕೆ ಉತ್ತರ ಭಾರತದ ನದಿಗಳು ಹೆಚ್ಚು ಅನುಕೂಲಕರವಾಗಿವೆ. ಉತ್ತರ ಭಾರತದಲ್ಲಿ ನದಿಗಳಲ್ಲಿ ನೀರು ಕಡಿಮೆಯಾಗುವದು ವಿರಳ. ಆದರೆ ದಕ್ಷಿಣ ಭಾರತದಲ್ಲಿ ಮಳೆಗಾಲದಲ್ಲಿ ನದಿಗಳಲ್ಲಿ ನೀರು ಹೆಚ್ಚಾಗಿ ಇದ್ದು ಅದು ಬೇಸಿಗೆಯಲ್ಲಿ ಬಹಳ ಕಡಿಮೆಯಾಗು ತ್ತದೆ. ಈ ಮಾತು ಸಣ್ಣ ನದಿಗಳಿಗೂ ಮತ್ತು ಹಳ್ಳಗಳಿಗೂ

ಸಹಿತ ಅನ್ವಯಿಸುತ್ತದೆ. ಉತ್ತರ ಭಾರತದಲ್ಲಿ ಸಣ್ಣ ಸಣ್ಣ ನಾವೆಗಳನ್ನು ಉಪಯೋಗಿಸಿ ಮೀನುಗಾರಿಕೆ ಮಾಡುವದು ಪ್ರಾಚೀನಕಾಲದಿಂದಲೂ ನಡೆದು ಬಂದಿದೆ. ಆದ್ದರಿಂದಲೇ ನಮ್ಮ ದಂತಕತೆಗಳಲ್ಲಿ ಇವುಗಳ ಉಲ್ಲೇಖವಿದೆ. ಬಡ ನಾವಿಕರಿಗೆ ಮತ್ತು ಮೀನುಗಾರರಿಗೆ ನದಿಗಳಲ್ಲಿ ಎಲ್ಲಿ ಮೀನುಗಳು ಹೆಚ್ಚಿಗೆ ದೊರೆಯುತ್ತಿವೆ ಎಂಬುದು ತಿಳಿದಿರುತ್ತದೆ. ಆದ್ದರಿಂದಲೇ ಅವರು ಮೀನುಗಾರಿಕೆಯ ಮೇಲೆಯೇ ತಮ್ಮ ಉಪಜೀವನವನ್ನು ನಡೆಯಿಸುತ್ತಾ ದನಕರಗಳನ್ನು ಸಾಕುವ ದನ್ಯಾಗಲೀ ಇಲ್ಲವೇ ಬೇಸಾಯವನ್ನು ಕೈಕೊಳ್ಳುವದರಲ್ಲಾಗಲೀ ತಮ್ಮ ಮನಸ್ಸನ್ನು ತೊಡಗಿಸಿರುವದಿಲ್ಲ. ಮೀನುಗಳಂತೆ ಅವರಿಗೆ ಏಡಿಗಳು, ಆಮೆಗಳು ಮುಂತಾದ ಜಲಚರ ಪ್ರಾಣಿಗಳು ಆಹಾರವಾಗಿರುವದರಿಂದ ಅವರು ಅವುಗಳನ್ನು ಸಂಗ್ರಹಿಸಿ ಮತ್ತು ಮಾರಾಟ ಮಾಡಿ ತಮ್ಮ ಉದರ ನಿರ್ವಹಣೆ ಮಾಡಿಕೊಳ್ಳುತ್ತಾರೆ. ಯಾವ ಮೀನುಗಳನ್ನು ಹಿಡಿಯಬೇಕು ಮತ್ತು ಯಾವು ಹೆಚ್ಚಿಗೆ ಯೋಗ್ಯವಾದವುಗಳೆಂಬುದು ಅವರಿಗೆ ಗೊತ್ತು. ಇವುಗಳ ಅಭ್ಯಾಸದ ಪರಂಪರೆ ಕೆಲವು ಜಾತಿಗಳಿಗೆ ಪ್ರಾಚೀನ ಕಾಲದಿಂದಲೇ ಅನುಭವದ ಮೇಲಿಂದ ತಿಳಿದುಬಂದಿದೆ.

ಸರೋವರಗಳಲ್ಲಿಯ ಮೀನುಗಾರಿಕೆಯು ಆಫ್ರಿಕಾ ಖಂಡದಲ್ಲಿ ಯುಗಾಂಡದಲ್ಲಿ ಹೆಚ್ಚಿಗೆ ಪ್ರಾಶಸ್ತ್ಯ ಪಡೆದಿತ್ತೆಂದು ಈಗಾಗಲೇ ಹೇಳಲಾಗಿದೆ. ನಮ್ಮ ದೇಶದಲ್ಲಿ ರಾಜಸ್ಥಾನ.

ಮಧ್ಯಪ್ರದೇಶ, ಉತ್ತರ ಪ್ರದೇಶ, ಕಾಶ್ಮೀರ ಮುಂತಾದ ಕಡೆಗಳಲ್ಲಿ ಕೆಲವು ದೊಡ್ಡ ದೊಡ್ಡ ಸರೋವರಗಳು ಇದ್ದು ಅವುಗಳಲ್ಲಿ ನಾವೆಗಳ ಮುಖಾಂತರ, ದೋಣಿಗಳ ಮುಖಾಂತರ ಮೀನುಗಾರಿಕೆಯು ಪ್ರಾಚೀನ ಕಾಲದಿಂದಲೇ ನಡೆದು ಬಂದಿದೆ. ಆದರೆ ಅವರು ಮೀನುಗಳನ್ನು ಹೇಗೆ ಬೆಳೆಯಿಸಬೇಕೆಂಬ ಬಗ್ಗೆ ಗಮನ ಕೊಡಲಿಲ್ಲ. ಸ್ವಾಭಾವಿಕವಾಗಿಯೇ ದೊರಕುವ ಮೀನುಗಳನ್ನು ಹಿಡಿಯುವದರಲ್ಲಿಯೇ ಮಗ್ನರಾಗಿರುತ್ತಿದ್ದರು.

ಆದರಂತೆ ನಮ್ಮ ದೇಶದಲ್ಲಿ ಸ್ವಾಭಾವಿಕವಾದ ಕೆರೆಗಳಿಗೆ, ಕೃತ್ರಿಮ ರೀತಿಯ ಕೆರೆಗಳಿಗೆ ಮತ್ತು ಜಲಾಶಯಗಳಿಗೆ ಏನೂ ಕೊರತೆ ಇರುವದಿಲ್ಲ. ದಕ್ಷಿಣ ಭಾರತದಲ್ಲಿ ಪ್ರತಿಯೊಂದು ಊರಿಗೂ ಒಂದೆರಡು ಕೆರೆಗಳುಂಟು. ಕೆಲವು ಕುಡಿಯುವ ನೀರಿನ ಕೆರೆಗಳನ್ನು ಮತ್ತು ಕೆಲವನ್ನು ದನಗಳಿಗೆ ಉಪಯೋಗಿಸುವದಕ್ಕಾಗಿ ಕೆರೆಗಳನ್ನು ಕಟ್ಟಲಾಗಿದೆ. ಇದಲ್ಲದೆ ಅಡವಿಗಳಲ್ಲಿ, ಹೊಲ ಗದ್ದೆಗಳಲ್ಲಿಯೂ ಕೆರೆಗಳನ್ನು ಮತ್ತು ಸ್ವಾಭಾವಿಕ ಜಲಾಶಯಗಳನ್ನು ನಾವು ಕಾಣಬಹುದು! ಕೆಲವು ಕೆರೆಗಳಿಗೆ ಕಾರಂಜಿಗಳಿಂದಲೇ ನೀರಿನ ಪೂರೈಕೆಯಾಗುತ್ತಿದೆ. ಮತ್ತು ಕೆಲವು ಜಲಾಶಯಗಳನ್ನು ಗುಡ್ಡಗಳ ನಡುವೆ ಗೋಡೆಕಟ್ಟಿ ನಿರ್ಮಿಸಲಾಗಿದೆ. ಹೀಗೆ ಕೆರೆ, ಭಾವಿ, ಮತ್ತು ಜಲಾಶಯಗಳನ್ನೇ ನಮ್ಮ ದೇಶದಲ್ಲಿ ನಾವು ಸರಿಯಾಗಿ ಅಭ್ಯಾಸ ಮಾಡಿರುವದಿಲ್ಲ. ಇವುಗಳ

...ು ಮೀನುಗಾರಿಕೆಯ ಅಭ್ಯಾಸವಂತೂ ಇನ್ನು ದೂರೇ ...ಿತು. ಹೊಸ್ತು ತುಂಬುವ ಅನೇಕ ಭಾವಿಗಳನ್ನು ...ಿದ್ದು ಅವುಗಳಲ್ಲಿ ಸಹಿತ ಮೀನುಗಾರಿಕೆಗೆ ಸಾಕಷ್ಟು ...ಕಾಶವಿದೆ.

ಇತ್ತೀಚೆಗೆ ಶೋಭೆಗಾಗಿ ಮನೆಯ ಗಾಜುಗಳಲ್ಲಿ ...ಸುಗಾರಿಕೆ ಬೆಳೆದುಬರುತ್ತಿದೆ. ಅವುಗಳಿಗೆ ಅತಿ ಸಣ್ಣ ...ನುಗಳನ್ನು ಉಪಯೋಗಿಸುತ್ತಾರೆ. ನಮ್ಮ ದೇಶದಲ್ಲಿ ...ೀಚೆಗೆ ಮತ್ಸ್ಯಾಗಾರಗಳೂ ಬೆಳೆಯುತ್ತಿದ್ದು ಪ್ರಾಣಿ ...್ರಹಾಲಯಗಳಲ್ಲಿ ಅನೇಕ ತರಹದ ಪ್ರಾಣಿಗಳನ್ನು ಸಾಕು ... ಮತ್ಸ್ಯಾಗಾರಗಳಲ್ಲಿ ಅನೇಕ ತರಹದ ಮೀನುಗಳನ್ನು ... ಮೀನುಗಾರಿಕೆಯ ಅಭಿರುಚಿಗೆ ಮತ್ತು ಅಭಿವೃದ್ಧಿಗೆ ...ಯ ಮಾಡಿಕೊಡುತ್ತಿದ್ದಾರೆ. ಇಂಥಲ್ಲಿ ಕೇವಲ ಮೀನು ...ದೆ ಜಲಚರ ಇನ್ನಿತರ ಪ್ರಾಣಿಗಳನ್ನೂ ಕಾಣಬಹುದು. ...ರಜನ್ಯ ಸಸ್ಯಗಳನ್ನೂ ಕಾಣಬಹುದು. ಇಂಥ ಸಂಗ್ರ...ಯಗಳು ಸಾಗರಜನ್ಯ ಪ್ರಾಣಿಗಳ ಉತ್ಪತ್ತಿಗೆ ...ಗೆ ಪ್ರೋತ್ಸಾಹನ ಕೊಡುವದರಲ್ಲಿ ಯಾವ ಸಂಶಯವೂ

ಮೀನುಗಾರಿಕೆಯ ತಂತ್ರಗಳ ಬೆಳವಣಿಗೆಗೆ ಸಾಗರ ...ಮತ್ತು ಸಾಗರ ಪರಿಸರಗಳ ಅಭ್ಯಾಸ ಇನ್ನೂ ಹೆಚ್ಚಿಗೆ ...ಕೂಲವಾಗಿರುವದರಿಂದ ನಮ್ಮ ಸಾಂಪ್ರದಾಯಕವಾದ ...್ತ ಪ್ರಾಚೀನವಾದ ಮೀನುಗಾರಿಕೆಯನ್ನು ಹೆಚ್ಚು

ವಿಸ್ತರಣಕಾರಿಯಾಗಿಯೂ ಲಾಭದಾಯಕವಾಗಿಯೂ
ಮತ್ತು ನವೀನವಾಗಿಯೂ ಬೆಳೆಯಿಸಿಕೊಳ್ಳಲಿಕ್ಕೆ ಅನ
ಕೂಲವಿದೆ.

ಎಸ್. ಡಿ. ಕೃಷ್ಣಸ್ವಾಮಿ ಎಂಬ ಪುರಾತತ್ವ ಶಾಸ್ತ್ರಜ್ಞ
ಪ್ರಕಾರ ಮಲೆನೇಶಿಯಾದ ಆಸ್ಟ್ರಿಕ್ ಭಾಷೆಯ ಜನರು ಮೀನ
ಗಳನ್ನು ಹಿಡಿಯುವ ತಾಮ್ರದ ಉದ್ದವಾದ ಬರ್ಚಿಗಳನ್ನು
ಮೊದಲು ಉಪಯೋಗಿಸಿದ್ದು ಇವು ಆ ಜನಾಂಗದವರ
ಭಾರತಕ್ಕೆ ವಲಸೆ ಬಂದಾಗ ಅವರೊಡನೆ ಭಾರತಕ್ಕೆ
ಬಂದವು ಎಂದು ಹೇಳುತ್ತಾರೆ. ಈ ಬರ್ಚಿಗಳು ಬೇಟೆಯ
ಡಲಿಕ್ಕೆ ಮತ್ತು ಮೀನು ಹಿಡಿಯಲಿಕ್ಕೆ ಉಪಯೋಗಕ್ಕೆ ಬ
ವಂಥವು ಆಗಿದ್ದವು ಎಂದು ಬರೆಯುತ್ತಾರೆ.

ಪ್ರಾಚೀನ ಮೀನುಗಾರಿಕೆಯ ಕಟ್ಟೆಗಳು

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಮತ
ಕರ್ನಾಟಕದಲ್ಲಿ ಮೀನುಗಾರಿಕೆಯ ಕಟ್ಟೆಗಳು ಬೆಳೆ
ಬಂದಿವೆ. ಸಮುದ್ರ ತೀರದಲ್ಲಿ ಕಟ್ಟಿದ ಈ ಮೀನುಗಾರಿಕೆ
ಕಟ್ಟೆಗಳು ಕೇವಲ ಮೀನುಗಾರಿಕೆಯ ಕಟ್ಟೆಗಳಾಗಿರದೆ ಅ
ನಾವಿಕರ ಕಟ್ಟೆಗಳೂ ಆಗಿದ್ದವು. ಈ ಪ್ರಕಾರವಾಗಿ ಅ
ಬರಬರುತ್ತ ದೇಶ ವಿದೇಶಗಳ ವ್ಯಾಪಾರದ ಅಭಿವೃದ್ಧಿಗ
ಉಪಯೋಗಿಸಿಕೊಂಡಿದ್ದರಿಂದ ಅವುಗಳಿಗೆ ಬಂದರುಗ
ಅಥವಾ ಬಂದರುಗಳ ಪಟ್ಟಣಗಳೆಂದು ಹೆಸರು ಬಂದಿತು.

ಇಂಥ ಒಂದು ಪ್ರಾಚೀನ ಬಂದರು ಗುಜರಾತಿನಲ್ಲಿಯ ಲೋಥಲ್‌ದಲ್ಲಿ ಇತ್ತೆಂದು ನಾವು ಮೊದಲೇ ಹೇಳಿದ್ದೇವೆ. ಇದು ಸಿಂಧು ನದಿ ತೀರದ ಕೊಳ್ಳದ ಸಂಸ್ಕೃತಿಯಲ್ಲಿ ಅತಿ ಮಹತ್ವದ ಪಾತ್ರವನ್ನು ಆಡಿತು. ಇಲ್ಲಿಂದ ಮೆಸೊಪೊಟೆಮಿಯಾ, ಇಜಿಪ್ತ ಮತ್ತು ಇನ್ನಿತರ ಸೆಮೆಟಿಕ್ ಮತ್ತು ಆಫ್ರಿಕಾದ ಪೂರ್ವ ದಂಡೆಯ ಪ್ರದೇಶದೊಂದಿಗೆ ಭಾರತ ಸಂಪರ್ಕವನ್ನು ಹೊಂದಿತು. ಈ ನಾವಿಕರು ಮೊಟ್ಟ ಮೊದಲಿಗೆ ಮೀನುಗಾರರಿದ್ದವರೇ ನಾವಿಕರಾಗಿ ಪರಿವರ್ತನ ಹೊಂದಿರಬೇಕು. ಪಶ್ಚಿಮದ ಕರಾವಳಿಯಲ್ಲಿ ಕೋಚೀನ್, ಕಾಲಿಕತ್, ದಂಡಾ (ಹಬ್ಸನ) ದ್ವಾರಕೆ, ಅಂಜದೀವ, ಹೊನ್ನಾವರ, ಮಿರ್‌ಜಾನ, ತದಡಿ ಮುಂತಾದ ಬಂದರುಗಳು ಪ್ರಾಚೀನಕಾಲದಿಂದಲೂ ಮೀನುಗಾರಿಕೆ ಮತ್ತು ನಾವಿಕರ ಬಂದರಗಳಾಗಿದ್ದವು. ಸಾಗರ ಪುರಾತತ್ವ ಶಾಸ್ತ್ರಜ್ಞರು ಇನ್ನೂ ಇಂಥ ಅನೇಕ ಬಂದರು ಪಟ್ಟಣಗಳ ಅವಶೇಷಗಳನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದಾರೆ.

ಪೂರ್ವ ಕರಾವಳಿಯಲ್ಲಿ ಅನೇಕ ಇಂಥ ಬಂದರುಗಳು ನೀರಿನಲ್ಲಿ ಹೂತು ಹೋದುದಾಗಿ ಈ ಸಾಗರ ಪುರಾತತ್ವ ಶಾಸ್ತ್ರಜ್ಞರು ಹೇಳುತ್ತಾರೆ. ಮದ್ರಾಸದ ಹತ್ತಿರ ಇಂಥ ಒಂದು ಅತಿ ಪ್ರಾಚೀನ ಬಂದರವಿತ್ತೆಂದು ನಂಬಲಾಗಿದೆ. ಮಚಲೀ ಪಟ್ಟಣ, ಪಾಂಡಿಚೇರಿ, ಪುರಿ, ಕಲಕತ್ತೆಗಳು ಸಹಿತ ಪೂರ್ವ ಕರಾವಳಿಯಲ್ಲಿ ಮಲೇಶಿಯಾ ನಡುಗಡ್ಡೆಗಳ ಸಂಪರ್ಕವನ್ನು ಅತಿ ಪ್ರಾಚೀನ ಕಾಲದಿಂದಲೇ ಪಡೆದಿರ

ಬೇಕು. ಅಂದಮಾನದಲ್ಲಿ ನಿಗ್ರಾಯಿಡ ಜನಾಂಗದ ಆದಿ
ವಾಸಿಗಳು ಮತ್ತು ನಿಕೋಬಾರದಲ್ಲಿ ಮೊಂಗೋಲಾಯಿಡ
ಜನಾಂಗದ ಮೂಲನಿವಾಸಿಗಳು ಪ್ರತ್ಯೇಕ ಜನಾಂಗದ
ಜನರು ಪೂರ್ವಕಾಲದಿಂದ ವಾಸಿಸಿರುವದು ಒಂದು ಪ್ರಾಚೀನ
ತೆಯ ಕೌತುಕವೇ ಆಗಿದೆ.

ಪಶ್ಚಿಮ ತೀರದ ಅಂಜದೀವ ನಡುಗಡ್ಡೆಗೆ ಈಜಿಪ್ತದ
ಇತಿಹಾಸಕಾರನಾದ ತಾಲ್ಮಿಯು ಕ್ರಿ. ಶ. ೧೫೦ ರಲ್ಲಿ ಭೆಟ್ಟಿ
ಕೊಟ್ಟನೆಂದು ತಿಳಿದು ಬರುತ್ತದೆ. ಅವನು ಅಲ್ಲಿ ಬಂದಾಗ
ಅವನಿಗೊಬ್ಬ ಭಾರತೀಯ ಯೋಗಿಯು ಭೆಟ್ಟಿಯಾಯಿ
ತೆಂದೂ ಆ ಯೋಗಿಯು ಅವನಿಗೆ ಅನೇಕ ಚಮತ್ಕಾರಗಳನ್ನು
ಮಾಡಿ ತೋರಿಸಿದನೆಂದೂ ಹೇಳಲಾಗಿದೆ. ಆ ಯೋಗಿಯು
ಒಂದು ತೆಂಗಿನಮರವನ್ನು ದಿಟ್ಟಿಸಿ ನೋಡಿದ ಕೂಡಲೇ ತೆಂಗಿನ
ಕಾಯಿಗಳು ತಾವಾಗಿಯೇ ಉದುರಿ ಬಿದ್ದವೆಂದು ಹೇ
ದ್ದಾನೆ. ಕ್ರಿ. ಶ. ೨೪೨ ನೇ ಇಸ್ವಿಯಲ್ಲಿ ಬರೆದ ಗ್ರಂಥ
ವೆಂದು ಹೇಳಲಾದ "Periplus of Erithrean
sea" ಇದರಲ್ಲಿ ಅಂಜದೀವ ನಡುಗಡ್ಡೆಯನ್ನು ನಮೂದಿ
ಸಲಾಗಿದೆ. ಕ್ರಿ. ಶ. ೧೩೪೨ ರಲ್ಲಿ ಆಫ್ರಿಕಾದ ಪ್ರವಾಸಿ
ಯಾದ ಇಬ್ನ ಬತೂತಾ ಈ ನಡುಗಡ್ಡೆಗೆ ಮತ್ತು ಬಂದರಕ್ಕೆ
ಭೆಟ್ಟಿಕೊಟ್ಟು ಇದರ ವರ್ಣನೆಯನ್ನು ಬರೆದಿದ್ದಾನೆ.

ಕರ್ನಾಟಕದಲ್ಲಿಯ ಹೊನ್ನಾವರ ಬಂದರವನ್ನು ಕ್ರಿ. ಶ.
೨೪೨ ರಲ್ಲಿ ಬರೆದ "Periplus of Erithrean
Sea" ಎಂಬ ಗ್ರಂಥದಲ್ಲಿ ನಾವರ ಎಂದು ನಮೂದಿ

ಲಾಗಿದೆ ಎಂದು ತಿಳಿದುಬರುತ್ತದೆ. ಕ್ರಿ. ಶ. ೧೩೪೨ ರಲ್ಲಿ ಈ ಬಂದರಕ್ಕೆ ಆಫ್ರಿಕಾದ ಪ್ರವಾಸಿಯಾದ ಇಬ್ನ ಬತೂತಾ ಭೆಟ್ಟಿಕೊಟ್ಟನೆಂದು ಹೇಳಲಾಗುತ್ತದೆ. ಹೊನ್ನಾವರ ಬಂದರವನ್ನು ಕ್ರಿ ಶ. ೧೫೦೨ ರಲ್ಲಿ ವಾಸ್ಕೋಡಾ ಗಾಮಾನ ಸೈನಿಕರು ಸುಟ್ಟರೆಂದು ತಿಳಿದು ಬರುತ್ತದೆ. ಪಶ್ಚಿಮ ತೀರದಲ್ಲಿ ಕಾರವಾರವು ನೈಸರ್ಗಿಕ ಬಂದರವಾಗಿದ್ದರೂ ಅದಕ್ಕೆ ಬ್ರಿಟೀಶರ ಕಾಲದಿಂದಲೇ ಅಂತರ್‌ರಾಷ್ಟ್ರೀಯ ಮಹತ್ವ ಬಂದಿತು. ಆದರೆ ಇಲ್ಲಿ ಮೀನುಗಾರಿಕೆಯ ಉದ್ಯೋಗವು ಮಾತ್ರ ಅತಿ ಪ್ರಾಚೀನ ಕಾಲದಿಂದಲೇ ನಡೆದಂತೆ ತೋರುತ್ತದೆ. ಪಶ್ಚಿಮ ತೀರದಲ್ಲಿ ಮಿರ್ಜಾನ ಒಂದು ಪ್ರಾಚೀನ ಬಂದರು. ಇಲ್ಲಿ ಅನೇಕ ಪ್ರಾಚೀನ ಮತ್ತು ಐತಿಹಾಸಿಕ ಘಟನೆಗಳು ಪೋರ್ತುಗೀಜರ ಕಾಲದಿಂದಲೂ ನಡೆಯುತ್ತಲೇ ಬಂದಿವೆ. ಅದರಂತೆ ಅಘನಾಶಿನಿ ನದಿಯು ಪಶ್ಚಿಮ ಸಮುದ್ರವನ್ನು ಕೂಡುವ ಪ್ರದೇಶದಲ್ಲಿ ತದಡಿ ಎಂಬ ಮೀನುಗಾರಿಕೆಯ ಕಟ್ಟೆಯು ಮತ್ತು ಚಿಕ್ಕ ಬಂದರು ಪ್ರಾಚೀನಕಾಲದಿಂದಲೆ ಇದ್ದಂತೆ ತೋರುತ್ತದೆ. ಇಲ್ಲಿ ಹಬಸೀ ಗುತ್ತಾ, ಅಬ್ಬಿ (ಅರಬ್ಬೀ) ಜಟ್ಟಿ, ಜೈನ ಜಟ್ಟಿ, ಹಾರು ವೀರ, ಜಟಕಾ ಜಟ್ಟಿ, ಮಾಸ್ತಿಕಲ್ಲು ಮುಂತಾದ ಸ್ಮಾರಕ ಕಲ್ಲುಗಳು ಇರುವದರಿಂದ ಇದು ಸಮುದ್ರಗಳ್ಳರ ನಡುವೆ ಹೋರಾಟ ನಡೆದಾಗ ಮಡಿದ ವೀರರ ಸ್ಮಾರಕ ಕಲ್ಲುಗಳು ಇರಬೇಕೆಂದು ತರ್ಕಿಸಬಹುದಾಗಿದೆ.

ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಮೀನುಗಾರಿಕೆಯ ತಂತ್ರಗಳು ಬೆಳೆದು ಬಂದಿವೆ. ಈ ಬೆಳವಣಿಗೆಯಲ್ಲಿ ನಮ್ಮ ಭಾರತದೇಶ ಮತ್ತು ಕರ್ನಾಟಕಗಳು

ಹೊರತಾಗಿಲ್ಲ. ಅವು ಯಾವಾಗಲೂ ಬೇರೆ ದೇಶಗಳಲ್ಲಿ ನಡೆದ ತಂತ್ರಜ್ಞಾನಗಳನ್ನು ತಮ್ಮೊಳಗೆ ಅಳವಡಿಸಿಕೊಳ್ಳು ತ್ತಲೆ ಬಂದಿವೆ.

ಮೀನುಗಾರಿಕೆಯ ತಂತ್ರಗಳು ಕೇವಲ ಸಾಧನಗಳಿಗೆ, ಬಂದರುಗಳಿಗೆ ಮತ್ತು ಮೀನೂಗಾರಿಕೆಯ ಕಟ್ಟೆಗಳಿಗೆ ಸೀಮಿತ ವಾಗಿರುವದಿಲ್ಲ. ಆದರೆ ಅವರ ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಯಲ್ಲಿಯೂ ಅನೇಕ ತಂತ್ರಗಳನ್ನು ಅವರು ಸಾಂಪ್ರ ದಾಯಕವಾಗಿ ಬಳಸುತ್ತಾ ಬಂದಿದ್ದಾರೆ. ಮೀನುಗಾರಿಕೆಯಲ್ಲಿ ಒಂದು ರೀತಿಯ ಕಾರ್ಯ ವಿಭಜನೆಯೂ ಕಂಡು ಬರುತ್ತದೆ. ಮೀನುಗಾರರಲ್ಲಿಯ ಗಂಡಸರು ಮೀನು ಹಿಡಿಯಲಿಕ್ಕೆ ಕಡಲಿ ನಲ್ಲಿ ಪ್ರಯಾಣ ಮಾಡುತ್ತಿದ್ದರೆ ಅವರ ಸ್ತ್ರೀಯರು ಮೀನು ಗಳನ್ನು ಹೊತ್ತೊಯ್ಯುವಲ್ಲಿ, ಮೀನುಗಳನ್ನು ಸಂಗ್ರಹಿಸಿಡುವ ದರಲ್ಲಿ, ಮೀನುಗಳನ್ನು ಒಣಗಿಸುವದರಲ್ಲಿ ಮತ್ತು ಮೀನು ಗಳನ್ನು ಮಾರಾಟ ಮಾಡುವದರಲ್ಲಿ ನಿರತರಾಗಿರುತ್ತಾರೆ. ಹಡಗಿನಲ್ಲಿಯ ಮೀನುಗಾರಿಕೆಗೆ ಕನಿಷ್ಠ ೪–೫ ಜನರಾದರೂ ಬೇಕಾಗುತ್ತಾರೆ. ಆದ್ದರಿಂದ ಮೀನುಗಾರರು ತಮ್ಮ ಮನೆ ಯಲ್ಲಿ ಸಾಕಷ್ಟು ಜನರು ಇಂಥ ಕೆಲಸಕ್ಕೆ ಯೋಗ್ಯವಾಗಿರು ವವರು ಇಲ್ಲದಿದ್ದಲ್ಲಿ ಈ ಕೆಲಸಕ್ಕಾಗಿ ನೌಕರರನ್ನು ನೇಮಿಸಿ ಕೊಳ್ಳುವ ಅವಶ್ಯಕತೆ ಬೀಳುತ್ತದೆ. ಮೀನುಗಾರಿಕೆಯ ದೊಡ್ಡ ಬಂದರುಗಳಲ್ಲಿ ಮೀನುಗಾರಿಕೆಯು ಒಂದು ರೀತಿ ಯಿಂದ ಒಂದು ಉದ್ದಿಮೆಯಂತೆ ನಡೆದು ಬರುತ್ತದೆ. ಆದ್ದ ರಿಂದ ಅವರಿಗೆ ಅನೇಕ ತರದ ಮೀನುಗಾರಿಕೆಯ ವಿಶಿಷ್ಟ ತಂತ್ರಗಳ ಅವಶ್ಯಕತೆ ಬೀಳುತ್ತದೆ.

೩

ಮೀನುಗಾರರ ಕುಲನಿಷ್ಠ ಸಮಾಜಗಳು

ರಾಮಾಯಣ, ಮಹಾಭಾರತ ಮತ್ತು ಇನ್ನಿತರ ಪುರಾಣಗಳಲ್ಲಿ ಮೀಸುಗಾರರಂಥ ಆದಿವಾಸಿಗಳ ಬಗ್ಗೆ ಸಾಕಷ್ಟು ಪುರಾವೆಗಳು ಸಿಗುತ್ತವೆ ಮತ್ತು ಮೀನುಗಾರಿಕೆಯ ಬಗ್ಗೆ ಹೇಳಲಾಗಿದೆ. ಭಾರತಕ್ಕೆ ಜಾತಿ ಪದ್ಧತಿಯು ಒಂದು ವಿಶಿಷ್ಟವಾದ ಸಂಪ್ರದಾಯವೆಂಬುದು ಸಮಾಜಶಾಸ್ತ್ರವನ್ನು ಓದಿದವರಿಗೂ ಮತ್ತು ಇನ್ನಿತರರಿಗೂ ತಿಳಿದ ವಿಷಯವೆ ಆಗಿದೆ. ಮೀನುಗಾರರಲ್ಲಿ ಜಾತಿ ಪದ್ಧತಿಯನ್ನು ವಿಶ್ಲೇಷಿಸಿದಾಗ ಮೀನುಗಾರರು ಒಂದೇ ಜಾತಿಗೆ ಸೇರಿದವರಲ್ಲವೆಂಬುದು ತಿಳಿದು ಬರುತ್ತದೆ. ಮೀನುಗಾರರು ಅನೇಕ ಜಾತಿಗಳ ಒಂದು ಔದ್ಯೋಗಿಕ ಸಮುದಾಯ (guild), ಇವರಲ್ಲಿ ಕೆಲವರು ಇನ್ನೂ ಮಿಸುಗಾರಿಕೆಯನ್ನು ಮಾಡುತ್ತಿದ್ದು ಮತ್ತೆ ಕೆಲವರು ನಾವಿಕರಾಗಿಯೂ ಇದ್ದಾರೆ. ಬೇರೆ ಹಲವು ಜಾತಿಗಳು ಪ್ರಾಚೀನಕಾಲದಲ್ಲಿ ಮೀನುಗಾರರಾಗಿಯೋ ಇಲ್ಲವೇ ನಾವಿಕರಾಗಿಯೋ ಇದ್ದವರು ಇಂದು ಪೂರ್ತಿಯಾಗಿ ಬೇರೆ ಉದ್ಯೋಗಗಳನ್ನು ಕೈಕೊಂಡಿದ್ದಾರೆ. ಆದ್ದರಿಂದ ಈ ಮೀನುಗಾರರ ಜಾತಿಗಳ ವಿಷಯವಾಗಿ ಪ್ರಾಚೀನಕಾಲದಿಂದ ಬಂದ ಸಂಪ್ರದಾಯದ ಬೆಳವಣಿಗೆಯನ್ನು ಚರ್ಚಿಸುವದು

ಅವಶ್ಯವಾಗಿದೆ. ಇನ್ನು ನಮ್ಮ ದೇಶದ ಎಲ್ಲ ಮೀನುಗಾರರು ಅಥವಾ ಮೀನುಗಾರ ಜಾತಿಯವರು ಒಂದೇ ಬುಡಕಟ್ಟಿಗೆ ಇಲ್ಲವೇ ಒಂದೇ ಮಾನವ ಕುಲಕ್ಕೆ ಸಂಬಂಧಿಸಿದವರಾಗಿರುವ ದಿಲ್ಲ. ನಾವು ಭಾರತೀಯರ ಬಗ್ಗೆ ಹೇಳುವಾಗ ಭಾರತೀಯರು ಮಿಶ್ರ ಜನಾಂಗದವರು (mixed race) ಎಂದು ಹೇಳುತ್ತೇವೆ. ಅದೇ ಪ್ರಕಾರವಾಗಿ ಮೀನುಗಾರರು ಸಹಿತ ನಮ್ಮ ದೇಶದಲ್ಲಿ ಮಿಶ್ರ ಜನಾಂಗ (mixed race) ದವರೇ ಆಗಿದ್ದಾರೆ. ಆದರೆ ಅವರ ಮಾನವಕುಲಗಳನ್ನು ಅಥವಾ ಪ್ರಾಚೀನ ಕುಲನಿಷ್ಠ ಸಮಾಜಗಳನ್ನು (Ethnic societies) ಗುರುತಿಸುವದು ಶಕ್ಯವಿದೆ ಮತ್ತು ಅವಶ್ಯಕವಾಗಿದೆ. ಯಾಕೆಂದರೆ ಇಂಥ ಒಂದು ಅಭ್ಯಾಸದಿಂದ ನಾವು ಭಾರತದಲ್ಲಿಯ ಅಥವಾ ಕರ್ನಾಟಕದಲ್ಲಿಯ ಮೀನುಗಾರರ ಪ್ರಾಚೀನ ಜಾತಿಗಳನ್ನು, ಜನಾಂಗಗಳನ್ನು, ಮಾನವ ಕುಲಗಳನ್ನು ಅಥವಾ ಕುಲನಿಷ್ಠ ಸಮಾಜಗಳನ್ನು ಅಭ್ಯಾಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅಥವಾ ಒಂದು ರೀತಿಯಿಂದ ಈ ನಮ್ಮ ಮೀನುಗಾರರು ಮೂಲತಃ ಯಾರು ? ಎಲ್ಲಿಂದ ಬಂದರು ? ಹೇಗೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಪಸರಿಸಿದರು ? ಎಂದು ತಿಳಿದುಬರುವದು. ಅವರು ಕೆಲವೊಂದು ಸಲ ಒಂದೇ ಬುಡಕಟ್ಟಿನವರು ಅಥವಾ ಮಾನವ ಕುಲದವರಾಗಿದ್ದರೂ (Ethnic group) ಭಿನ್ನ ಶಾಖೆಗಳಲ್ಲಿ ಒಡೆದು ತಮ್ಮವೇ ಆದ ಜಾತಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಒಮ್ಮೊಮ್ಮೆ ಇಂಥ ಉಪ ಮಾನವ ಕುಲ

ಗಳು ಬಹಿರ್ ವಿವಾಹಕ್ಕೆ (Exogamy)ಅವಕಾಶ ಮಾಡಿ ಕೊಂಡಿರುವದರಿಂದ ಜಾತಿಗಳಾಗಿ ಪರಿಣಮಿಸುತ್ತವೆ. ಆದ ರಿಂದ ಇಂಥ ಪ್ರಕ್ರಿಯೆ ಭಾರತೀಯ ಮೀನುಗಾರರಲ್ಲಿ ಪ್ರಾಚೀನ ಕಾಲದಿಂದಲೂ ಹೇಗೆ ನಡೆದು ಬಂದಿದೆ ಎಂಬು ದನ್ನು ತಿಳಿದುಕೊಳ್ಳುವಾ. ನಮ್ಮ ದೇಶದಲ್ಲಿ ಬುಡಕಟ್ಟು ಜನಾಂಗಗಳು ಮತ್ತು ಮಾನವ ಕುಲಗಳು (tribes and ethnic groups) ಈ ಪ್ರಕಾರವಾಗಿ ಬಹಿರ್ ವಿವಾಹ ವನ್ನು ನಿಷಿದ್ಧವಾಗಿ ಜಾತಿಗಳಾಗಿ ಪರಿಣಮಿಸುವ ಪ್ರಕ್ರಿಯೆ ಪೂರ್ವಕಾಲದಿಂದಲೇ ನಡೆದುಬಂದಿದೆ. ಇಂಥಹ ಮಾನವ ಕುಲಗಳಿಗೆ ತಾವು ಒಂದೇ ಎಂಬ ಭಾವನೆ ಇರುವದರಿಂದ ಮತ್ತು ತಮ್ಮ ಕುಲವರ್ಧನೆಗಾಗಿ ಪ್ರಯತ್ನಿಸುವದರಿಂದ ಅವು ಪ್ರತ್ಯೇಕ ಮಾನವ ಕುಲಗಳಾಗಿ ಪರಿಣಮಿಸುತ್ತವೆ.

ಕರ್ನಾಟಕದ ಸಮುದ್ರ ತೀರದಲ್ಲಿ ಮತ್ತು ಒಳನಾಡಿ ನಲ್ಲಿ ಅನೇಕ ಮೀನುಗಾರರ ಜಾತಿಯವರು ವಾಸವಾಗಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಜಾತಿಯ ಹೆಸರುಗಳನ್ನು ಈ ರೀತಿಯಾಗಿ ನಮೂದಿಸಲಾಗಿದೆ :

೧) ಗಂಗಮತ ೨) ಮೀನುಗಾರ ೩) ಜಾಲಗಾರ ೪) ಬೆಸ್ತ ೫) ಬೆಸ್ತಾರ ೬) ತೊರೆಯ ೭) ಅಂಬಿಗ ೮) ಕಬ್ಬಲಿಗ ೯) ಕಬ್ಬೇರ ೧೦) ಮಹಾದೇವ ೧೧) ಕೋಳಿ ೧೨) ಕೊಳ್ಳೀಳಿ ೧೩) ಮಲ್ಹಾರ ೧೪) ಮಡ್ಡೇರ ೧೫) ಮುದಿರಾಜ ೧೬) ಮೊಗವೀರ (ಮೊಗ್ಯಾರ) ೧೭) ಮರಕಾಲ ೧೮) ಕಾರ್ವಿ (ಖಾರ್ವಿ) ೧೯) ಗಾಬಿತ

೨೦) ಹರಿಕಾಂತ್ರ (ಹರಿಕಾಂತ) ೨೧) ಹಾಗಿ ೨೨) ಬೋಯಿ (ಬೋಯಿ) ೨೩) ಬುಂಡೆ ಬೆಸ್ತ (ಬುಂಡೆ ಬೆಸ್ತ) ೨೪) ಪರಿವಾರ ೨೫) ರಾಜ ಪರಿವಾರ ೨೬) ಗಂಗಕುಲ ೨೭) ನಾಯಕ - ೨೮) ಗಂಗರಸ ೨೯) ನೀರಗಂಟಿ ೩೦) ಸಫಲಿಗ ೩೧) ಭೀಷ್ಮ ಕುಲ ೩೨) ಬಾರಕೇರ ೩೩) ಸುಣಗಾರ ೩೪) ಸೂತ ೩೫) ದಾಲಜಿ ೩೬) ಮೋಪ್ಲಾ ೩೭) ಸವಾಯುತ ಇತ್ಯಾದಿ.

೧. ಮಲಯೋ-ಪೊಲಿನೇಶಿಯನ್ ಮೀನುಗಾರರು :

ಮೇಲೆ ಕಾಣಿಸಿದ ಜಾತಿಗಳ ಹೆಸರುಗಳನ್ನು ಜನಗಣತಿಯಲ್ಲಿ ಅವರು ಹೇಳಿದಂತೆಯೇ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಒಮ್ಮೊಮ್ಮೆ ಇಂಥ ಹೆಸರುಗಳು ಒಂದೇ ಜಾತಿಯವರಾಗಿದ್ದರೂ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಜಾತಿಯ ಹೆಸರುಗಳಿಂದ ಕರೆಯುತ್ತಿರುವದರಿಂದ ನಿರ್ದಿಷ್ಟವಾಗಿ ಅವರು ಇದೇ ಜಾತಿಯವರೆಂದು ಹೇಳುವದು ಕಠಿಣವಾಗುತ್ತದೆ. ಉದಾಹರಣಾರ್ಥವಾಗಿ, ಗಂಗಮತದವರೆಂದು ಹೇಳಿಸಿಕೊಳ್ಳುವ ಜಾತಿಯವರು ಗಂಗಕುಲ, ಭೀಷ್ಮಕುಲ, ಬಾರಕೇರ, ಸುಣಗಾರ, ಸೂತ ಇತ್ಯಾದಿಯಾಗಿ ಕರೆಯಿಸಿಕೊಳ್ಳುತ್ತಿದ್ದರೂ ಅವರೆಲ್ಲ ಒಂದೇ ಜಾತಿಗೆ ಸೇರಿದವರಾಗಿದ್ದಾರೆ. ಅವರು ಅಂತರ್ ವಿವಾಹ (endogamy) ಪದ್ಧತಿಯನ್ನು ಅನುಸರಿಸುತ್ತಾರೆ. ಭೀಷ್ಮನು ಗಂಗೆಯಿಂದ ಜನಿಸಿದವನಾಗಿದ್ದರಿಂದ ಅವರು ತಮ್ಮನ್ನು ಭೀಷ್ಮಕುಲದವರೆಂದು ಕರೆದುಕೊಳ್ಳುತ್ತಾರೆ. ಬಾರಕೇರ ಅಂದರೆ ಊರ ಕೆಲಸ ಮಾಡುವವರು, ಸುಣಗಾರ ಎಂದರೆ ಸುಣ್ಣವನ್ನು

ತಯಾರಿಸುವವರು, ಸೂತ ಎಂದರೆ ಕಟ್ಟಿಗರು, ಈ ಪ್ರಕಾರವಾಗಿ ಉದ್ಯೋಗಗಳ ಮೇಲಿಂದ ಅವರಿಗೆ ಹೆಸರುಗಳು ಬಂದಿವೆ. ಆದರೆ ಇವರೆಲ್ಲರೂ ಒಂದೇ ಕುಲದವರು. ಮೀನುಗಾರ ಅಥವಾ ಜಾಲಗಾರ ಎಂದು ಹೇಳುವದು ವೃತ್ತಿಯ ಹೆಸರನ್ನು ತೋರಿಸುತ್ತದೆಯೇ ಹೊರತು ಅವರ ಜಾತಿಯನ್ನಲ್ಲ. ಮೀನುಗಾರ ಅಥವಾ ಜಾಲಗಾರ ಎಂದು ಹೇಳಿಕೊಳ್ಳುವವರು ಅನೇಕ ಜಾತಿಯವರಾಗಿದ್ದಾರೆ. ಅದೇ ಪ್ರಕಾರವಾಗಿ ಬೆಸ್ತ, ಬೆಸ್ತಾರ, ತೊರೆಯ, ಅಂಬಿಗ, ಕಬ್ಬಲಿಗ, ಕಬ್ಬೇರ ಇವರೆಲ್ಲ ಮೀನುಗಾರರಿದ್ದವರು ಆ ಉದ್ಯೋಗದೊಂದಿಗೆ ಕಡಲು, ನದಿ ಮತ್ತು ಸರೋವರಗಳಲ್ಲಿ ಜನರನ್ನು ದಾಟಿಸುವದಕ್ಕಾಗಿ ನಾವೆ-ಸಂಪರ್ಕದ ಉದ್ಯೋಗದಲ್ಲಿ ತೊಡಗಿದ್ದರಿಂದ ಅವರನ್ನು ಹಾಗೆ ಕರೆಯುತ್ತಿದರು. ಮರಕಾಲೆಂದರೆ ನಾವೆ ಎಂದು ಅರ್ಥ. ಏಕೆಂದರೆ ಮರವೆಂದರೆ ಕಟ್ಟಿಗೆ ಕಾಲು ಎಂದರೆ ನಡೆಯುವ ಸಾಧನ, ಮರಕಾಲವೆಂದರೆ ಕಟ್ಟಿಗೆಯಿಂದ ನಡೆಯುವ ಸಾಧನ-ನಾವೆ, ಮಹದೇವ, ಕೋಳಿ, ಕೋಳಿ, ಮಲ್ಹಾರ ಇವರೆಲ್ಲ ಒಂದೇ ಬುಡಕಟ್ಟಿನವರಾಗಿದ್ದರೂ ಮುಂದೆ ಶಾಖೆಗಳಾಗಿ ಒಡೆದು ಬೇರೆ ಬೇರೆ ಜಾತಿಯವರಾದಂತೆ ತೋರುತ್ತದೆ. ಕೋಳಿ ಜಾತಿಯವರಲ್ಲಿಯೇ ಸೋನಾ ಕೋಳಿ ಮತ್ತು ಮಹದೇವ ಕೋಳಿ ಎಂಬ ಎರಡು ಜಾತಿಯವರು ಇರುವದರಿಂದ ಇವರು ಒಂದೇ ಬುಡಕಟ್ಟಿನವರಿದ್ದವರು ಒಡೆದು ಎರಡು ಜಾತಿಗಳಾಗಿರುವದು ನಿಶ್ಚಿತವಾಗಿ ಮತ್ತು ಸ್ಪಷ್ಟವಾಗಿ ಕಂಡುಬರುತ್ತದೆ.

ಕೋಳಿ ಜಾತಿಯಲ್ಲಿ ಮಲ್ಹಾರ ದೇವರನ್ನು ಪೂಜಿಸುವ ಭಕ್ತಿ ಪಂಥದವರು ಇದ್ದು ಮುಂಬೈಯಲ್ಲಿ ಇರುವ ಅನೇಕ ಕೋಳಿ ಜನರು ಸಹಿತ ಇಂಥ ಮಲ್ಹಾರ ದೇವರ ಪೂಜಾ ಪಂಥಕ್ಕೆ ಸೇರಿದವರಾಗಿದ್ದಾರೆ. ಮತ್ತು ಮುಂಬೈಯಲ್ಲಿ ಇಂದಿಗೂ ಅವರು ಮಲ್ಹಾರ ದೇವರ ಪೂಜೆ ಮಾಡುತ್ತಿದ್ದು ಪೂಜೆಯ ಕಾಲದಲ್ಲಿ "ಏಳು ಕೋಟಿ ಏಳು ಕೋಟಿ" ಎಂದು ಘೋಷಿಸುತ್ತಾರೆ. ಕರ್ನಾಟಕದ ಮಲ್ಹಾರ ದೇವರ ಆರಾಧಕರೂ ಇದೇ ರೀತಿ ಮಲ್ಹಾರ ದೇವರ ಪೂಜೆಯ ಕಾಲದಲ್ಲಿ ಘೋಷಣೆ ಮಾಡುವದನ್ನು ನೋಡಿದರೆ ಈ ಭಕ್ತಿ ಪಂಥವು ಕರ್ನಾಟಕಕ್ಕೆ ಸಂಬಂಧಿಸಿದುದು ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಮುಂಬೈಯಲ್ಲಿಯ ಮರಾಠಿ ಮಾತನಾಡುವ ಕೋಳಿ ಜನರಿಗೂ ಕರ್ನಾಟಕದ ಈ ಭಕ್ತಿ ಪಂಥಕ್ಕೂ ಸಂಬಂಧವಿರುವದರಿಂದ ಈ ಭಕ್ತಿ ಪಂಥ ಕೋಳಿ ಜನರಿಗೆ ಕರ್ನಾಟಕದ ಉತ್ತರ ಭಾಗದಲ್ಲಿ ಇರುವ ಕೋಳಿ ಜನರ ಮುಖಾಂತರ ಪಸರಿಸಿರಲು ಸಾಕು. ಮೀನುಗಾರರಲ್ಲಿ ಮಲ್ಹಾರ ಎಂಬ ಜಾತಿಯು ಹೆಸರು ಈ ಆರಾಧಕರ ಸಮೂಹಕ್ಕೆ ಬಂದಿರಬಹುದಾದ ಶಕ್ಯತೆ ಇದೆ. ಮಹಾರಾಷ್ಟ್ರದಲ್ಲಿ ಈ ಪಂಥಕ್ಕೆ ಖಂಡೋಬಾ ಎಂದು ಕರೆಯುತ್ತಾರೆ. ಇಷ್ಟೇ ಅಲ್ಲ ಕೋಳಿ ಎಂಬ ಶಬ್ದವು ಕೋಲಾ ಇಲ್ಲವೆ ಕೋಲ್ಲಾ ಎಂಬ ಮಾನವಕುಲದ ಅಥವಾ ಜನಾಂಗದ ಹೆಸರಾಗಿರುವದರಿಂದ ಈ ಕೋಳಿ ಜನರು ಭಾರತದ ಅನೇಕ ಕಡೆಗಳಲ್ಲಿ ಪಸರಿಸಿರುವದರಿಂದ ಇದೊಂದು ಜನಾಂಗಿಕ

ಭ್ಯಾಸದಲ್ಲಿ ಒಳ್ಳೆ ಮಹತ್ವದ ಸ್ಥಾನವನ್ನು ಪಡೆದಿದೆ.
ರ್ನಾಟಕದಲ್ಲಿ ಕೋಳಿವಾಡಗಳೆಂಬ ಅನೇಕ ಊರುಗಳು
ವೆ. ಕೊಲ್ಹಾಪುರವೆಂಬ ಊರಿನ ಹೆಸರು ಸಹಿತ ಇದೇ
ನಾಂಗದವರಿಂದ ಬಂದಿರಬೇಕೆಂದು ವಿದ್ವಾಂಸರು ತರ್ಕಿಸಿ
ದ್ದಾರೆ ಕೊಲ್ಹಾ ಜನರ ಸಂಸ್ಕೃತಿ ಒಂದು ಕಾಲದಲ್ಲಿ
ರತದಲ್ಲಿ ಒಳ್ಳೇ ಉಚ್ಚತಮವಾದ ಸ್ಥಿತಿಯಲ್ಲಿ ಇತ್ತು
ಂದು ಕಂಡು ಬರುತ್ತದೆ. ಚಕ್ಕಡಿ ಇಲ್ಲವೆ ಬಂಡಿಗೆ
ಲ್ಭಾಗದಲ್ಲಿ ಹೊದಿಕೆ ಮಾಡಿದ್ದರೆ ಅದಕ್ಕೆ ಕೊಲ್ಹಾರ
ಂಡಿ ಎಂದು ಕರೆಯುತ್ತಾರೆ. ಈ ಜನಾಂಗದವರು ಇಂಥ
ಂಡಿಗಳನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದರು ಎಂದು
ೋರುತ್ತದೆ. ಕೊಲ್ಹಾ ಜನರು ಮೂಲತಃ ಆಸ್ಟ್ರಿಕ್
ಥವಾ ಮಲಯೋ-ಪೊಲಿನೇಶಿಯನ್ ಸಂಸ್ಕೃತಿಗೆ ಸೇರಿ
ಂಥವರು. ಅವರು ಮುಂಡಾವರ್ಗದಿಂದ ಬೇರ್ಪಟ್ಟು
ಲ್ಹಾ ಎನಿಸಿಕೊಂಡರು. ಭಾರತದಲ್ಲಿ ಇಂದಿಗೂ ಅನೇಕ
ುಂಡಾ ಬುಡಕಟ್ಟು ಜನಾಂಗಗಳು ತಮ್ಮವೇ ಆದ
ಲಯೋ-ಪೊಲಿನೇಶಿಯನ್ ಅಥವಾ ಆಸ್ಟ್ರಿಕ್ ಭಾಷೆಗಳನ್ನು
ಾತನಾಡುತ್ತಾರೆ. 'ಇವರು ಮೂಲತಃ ಭಾರತದ ಪೂರ್ವದ
ಡುಗಡ್ಡೆಗಳಾದ ಜಾವಾ, ಸುಮಾತ್ರಾ ಮತ್ತು ಮಲಯಾ
ಡುಗಡ್ಡೆಗಳ ಕಡೆಯಿಂದ ಬಂದು ಭಾರತದಲ್ಲಿ ಕ್ರಿ. ಪ.
ೂರ್ವ ೩೦೦೦ ವರ್ಷಗಳ ಹಿಂದೆಯೇ ನೆಲೆಸಿದಂಥವರು.
ವರು ಅನೇಕ ತಂಡಗಳಲ್ಲಿ ಬೇರೆ ಬೇರೆ ವೇಳೆಗಳಲ್ಲಿ
ಾರತಕ್ಕೆ ಬಂದಂತೆ ತೋರುತ್ತದೆ. ಈ ಮುಂಡಾ ಗುಂಪಿ

ನವರು ಬೇರೆ ಬೇರೆ ಉದ್ಯೋಗಗಳನ್ನು ಕೈಕೊಂಡು ವಿಭಿ
ಮಾನವಕುಲಗಳ ಹೆಸರುಗಳನ್ನು ಪಡೆದಂತೆ ತೋರುತ್ತ
ಇವರ ಭಾಷೆಗಳಲ್ಲಿ ದ್ರಾವಿಡ ಭಾಷೆಗಳ ಛಟ್ಟಗಳು ಸ
ಒಮ್ಮೊಮ್ಮೆ ಇವು ದ್ರಾವಿಡ ಭಾಷೆಗಳೋ ಅಥವಾ ಆಸ್ಟ್ರಿ
ಭಾಷೆಗಳೋ ಎಂಬುದನ್ನು ಖಚಿತವಾಗಿ ಹೇಳಲಿಕ್ಕೆ ಬ
ದಷ್ಟು ಇವೆರಡೂ ಭಾಷೆಗಳ ಸಂಬಂಧ ಪ್ರಾಚೀನ ಕಾ
ದಿಂದಲೂ ಭಾರತದಲ್ಲಿ ನಡೆದುಬಂದಿದೆ. ಆದ್ದರಿಂದ
ಇವರಿಗೆ ಭಾರತದ ಜನಾಂಗದಲ್ಲಿ ಇಂಡೋ-ಆರ್ಯ
ಪೂರ್ವದ ಜನಾಂಗಳೆಂದು ಕರೆಯುತ್ತಾರೆ. (Pre-Ind
Aryan tribes)

ಮೊಗವೀರರು ಇಲ್ಲವೆ ಮೊಗೇರರು ಅಥ
ಮೊಗ್ರಾರು ಎಂದು ಕರೆಯುವ ಮೀನುಗಾರರು ದಕ್ಷಿ
ಕನ್ನಡ ಜಿಲ್ಲೆಯಲ್ಲಿ ತುಳು ಮಾತನಾಡುವ ಜನರು. ಇವ
ಕನ್ನಡವನ್ನೂ ತಮ್ಮ ಮಾತೃಭಾಷೆಯನ್ನಾಗಿ ಮಾಡಿಕೊಂ
ದ್ದಾರೆ. ಇವರು ಮೂಲತಃ ತಮಿಳುನಾಡಿನಿಂದ ಬಂ
ರೆಂದು E. Thurston ಅವರು ತಮ್ಮ ದಕ್ಷಿಣ ಭಾರ
ಜಾತಿ ಮತ್ತು ಬುಡಕಟ್ಟು ಜನಾಂಗಗಳ ಬಗ್ಗೆ ಬರೆಯುತ
ಹೇಳಿದ್ದಾರೆ. ಇವರು 'ಅಳಿಯ ಸಂತಾನ' ಪದ್ಧತಿಯ
ತಮ್ಮ ಕೌಟುಂಬಿಕ ಜೀವನದಲ್ಲಿ ಅನುಸರಿಸುತ್ತಾರೆ.
ಭಾಗದ ಉತ್ತರದ ಕಡೆಗೆ ವಾಸಿಸುತ್ತಿರುವ ಮೊಗ
ಜಾತಿಯವರು "ಮಕ್ಕಳ ಸಂತಾನ" ಪದ್ಧತಿಯನ್ನು
ಸರಿಸುತ್ತಾರೆ. ಇವರು ವಿವಾಹಗಳಲ್ಲಿ ಕನ್ಯಾ

್ತಿಯನ್ನು ಇನ್ನೂ ಇಟ್ಟುಕೊಂಡಿದ್ದಾರೆ. ಮದುವೆ
್ಲಿ ಮದುಮಕ್ಕಳಿಗೆ ಧಾರೆ ಎರೆದುಕೊಡುವ ಪದ್ಧತಿ
. ಈ ವಿವಾಹ ವಿಧಿಯಲ್ಲಿ ಹಾಲು ಮತ್ತು ನೀರನ್ನು
ಬಿಸಿ ಮದುಮಕ್ಕಳ ಮೇಲೆ ಎರೆಯಲಾಗುವದು.
್ರಿಂದ ಈ ವಿಧಿಗೆ ಧಾರೆ ಎರೆಯುವದು ಎಂದು ಕರೆಯು
್ತೆ. ಮೊಗವೀರರು ಮಾತೃಪ್ರಧಾನ ಕುಟುಂಬವನ್ನು
ದಲಿನಿಂದಲೂ ಅನುಸರಿಸುವದರಿಂದ ಇವರು ಪ್ರಾಚೀನ
ಾದ ಜನಾಂಗವೆಂದು ಸಹಜವಾಗಿ ಹೇಳಬಹುದು.
ಗೀರರು ದತ್ತಕ ತೆಗೆದುಕೊಳ್ಳುವಾಗ ಗಂಡುಮಕ್ಕಳ
ಾಗಿ ಹೆಣ್ಣು ಮಕ್ಕಳನ್ನು ದತ್ತಕ ತೆಗೆದುಕೊಳ್ಳಲಿಕ್ಕೆ
ಗೆ ಇಚ್ಛಿಸುತ್ತಾರೆ ಎಂದು ಕಂಡು ಬಂದಿದೆ. ಈ
ತಿಯು ಅವರ ಅಳಿಯ ಸಂತಾನ ಪದ್ಧತಿಗೂ **ಮತ್ತು**
ತೃಪ್ರಧಾನ ಕುಟುಂಬಕ್ಕೂ ಇರುವ ಒಂದು ಸಾಮಾಜಿಕ
ಧಾನ್ಯತೆಯನ್ನೇ ಸೂಚಿಸುತ್ತದೆ.

ಮೊಗೇರ ಜಾತಿಯವರು ಹೆಚ್ಚಾಗಿ ಕಡಲಿನಲ್ಲಿಯ
ುಗಾರಿಕೆಯನ್ನು ಪ್ರಾಚೀನ ಕಾಲದಿಂದಲೂ ಕೈ
್ಳುತ್ತಾ ಬಂದಿರುವರು. ಇತ್ತೀಚೆಗೆ ಅವರನ್ನು ಸರ
ದವರು ಹೊಸ ಪದ್ಧತಿಯ ಮೀನುಗಾರಿಕೆಯ
್ಯೋಗದಲ್ಲಿ ತೊಡಗಿಸಿದ್ದಾರೆ. ಮತ್ತು ಮಾಪಿಳ್ಳೆ
ುಗಾರರೊಂದಿಗೆ ದಕ್ಷಿಣ ಕನ್ನಡದಲ್ಲಿ ಕೆಲಸ ಮಾಡು
. ಈ ಭಾಗದಲ್ಲಿಯ ಮೊಗವೀರರು ತಮ್ಮ ಮೀನು
ಕೆಯ ನಾವೆಗಳಿಗೆ ಬಿದಿರಿನ ಬಡಿಗೆಗಳನ್ನು ಕಟ್ಟುವ

ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಈ ಬಿದಿರಿನ ಬಡಿಗೆಗಳು ಮೀನುಗಳಿಗೆ ಬಡಿದು ಮೀನುಗಳನ್ನು ಮೀನುಗಾರಿಕೆಯ ಜಾಳಿಗೆಗಳಲ್ಲಿ ಓಡಿಸುತ್ತದೆ. ಬೇರೆ ಮೀನುಗಾರರ ಅಭಿಪ್ರಾಯದಲ್ಲಿ ಇಂಥ ಬಿದಿರಿನ ಬಡಿಗೆಗಳು ಮೀನುಗಾರಿಕೆಯಲ್ಲಿ ಸಹಾಯವಾಗುವದರ ಬದಲಾಗಿ ಮೀನುಗಳನ್ನು ದೂರ ಓಡಿಸುತ್ತವೆ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಈ ಪದ್ಧತಿಯು ಮಲಯ ದೇಶಗಳ ಪದ್ಧತಿಯಾಗಿದ್ದು ಇದು ಮಲಯ ದೇಶದಲ್ಲಿ ನಾವೆಗಳಿಗೆ ಹೊರವಲಯದ ತೇಲುವ ದಿಂಡುಗಳನ್ನು ಕಟ್ಟುವ ಪದ್ಧತಿಯು ಪಳಿಯುಳಿಕೆಯೆ ಆಗಿದೆ. ಈ ಪದ್ಧತಿಯಿಂದ ನಾವೆಗಳು ಹೆಚ್ಚು ತೇಲುವಂತೆ ಆಗಿ ಸಮುದ್ರದ ಏರಿಳಿತಗಳಿಂದ ನಾವೆಗಳನ್ನು ರಕ್ಷಿಸುತ್ತವೆ. (out trigger system)

ಸಂಪ್ರದಾಯದ ಪ್ರಕಾರ ಉಡುಪಿಯ ಸುತ್ತಮುತ್ತಲು ಇರುವ ಮೊಗೇರರು ಪ್ರತಿದಿನ ಮುಂಜಾನೆ ಕೆಲವೊಂದು ಮೀನುಗಳನ್ನು ತಂದು ಊರಿನ ಅಧಿಕಾರಿಗಳಿಗೆ ತಮ್ಮ ಆದಾಯದ ಭಾಗವನ್ನು ಕೊಡಬೇಕಾಗುತ್ತಿತ್ತೆಂದು ತಿಳಿದುಬರುತ್ತದೆ.

ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ಇದ್ದ ಸಮಯದಲ್ಲಿ ಪ್ರತಿದಿವಸ ರಾಜನ ಬೆಕ್ಕಿಗಾಗಿ ಅವರು ಮೀನುಗಳನ್ನು ತಂದು ಅರ್ಪಿಸುತ್ತಿದ್ದರೆಂದು ಗೊತ್ತಾಗಿದೆ. ಬುಚನನ್ ಎಂಬವರು ಮೊಗೇರರ ಬಗ್ಗೆ ಬರೆಯುವಾಗ ಇವರು ಮಲಯಾಳ ದೇಶದ ಮುಕ್ಕುವನ್ ಜಾತಿಯವರಂತೆ

ರುವರೆಂದು ಹೇಳುತ್ತಾರೆ. ಆದರೆ ಮುಕ್ಕುವನ್ ಜಾತಿಯವರಿಗೂ ಮತ್ತು ಮೊಗೇರರಿಗೂ ಶರೀರ ಸಂಬಂಧವಾಗುವದಿಲ್ಲ. ಮೊಗೇರರು ಈ ಭಾಗದಲ್ಲಿ ನಾವಿಕರಾಗಿ, ಮೀನುಗಾರರಾಗಿ ಬಂದರುಗಳಲ್ಲಿ ಸಾಮಾನುಗಳನ್ನು ಸಾಗಿಸುವವರಾಗಿ ಮತ್ತು ಪಲ್ಲಕ್ಕಿ ಹೊರುವವರಾಗಿ ಕೆಲಸ ಮಾಡುತ್ತಾರೆ. ಇವರು ಪಲ್ಲಕ್ಕಿ ಹೊರುವ ಕೆಲಸ ಮಾಡುವದರಿಂದ ಇವರಿಗೆ ಬೋಯಿ ಎಂದು ಸಹಿತ ಕರೆಯುತ್ತಾರೆ. ತುಳು ಕ್ಷೌರಿಕರು ಮೊಗೇರರ ಕ್ಷೌರವನ್ನು ಮಾಡುವದಿಲ್ಲ. ಆದ್ದರಿಂದ ಮೊಗೇರರಲ್ಲಿಯೇ ಕೆಲವರು ಕ್ಷೌರಿಕರ ವೃತ್ತಿಯನ್ನು ಕೈಕೊಳ್ಳುತ್ತಾರೆ. ಆದರೆ ಕೊಂಕಣಿ ಕ್ಷೌರಿಕರು ಮೊಗೇರರ ಕ್ಷೌರವನ್ನು ಮಾಡಲಿಕ್ಕೆ ಒಪ್ಪಿಕೊಳ್ಳುತ್ತಾರೆ. ಬಿಲ್ಲವ ಕ್ಷೌರಿಕರು ಸಹಿತ ಮೊಗೇರರ ಕ್ಷೌರವನ್ನು ಮಾಡುತ್ತಾರೆ.

ಮದ್ರಾಸ ನಗರದಲ್ಲಿಯ ತಮಿಳು ಮೀನುಗಾರರಿಗೆ ಪಟ್ಟಿನವನ್ ಎಂದು ಕರೆಯುತ್ತಾರೆ. ಏಕೆಂದರೆ ಅವರು ಪಟ್ಟಣದಲ್ಲಿ ವಾಸಿಸುತ್ತಾರೆ. ಬಂಗಾಲ ಉಪಸಾಗರದ ತೀರದಲ್ಲಿ ಮಚ್ಛಲೀ ಪಟ್ಟಣವೆಂಬ ಪಟ್ಟಣವೇ ಇರುವದನ್ನು ನಾವು ಇಲ್ಲಿ ಗಮನಿಸಬೇಕು. ಮಚ್ಛಲೀ ಪಟ್ಟಣ ಎಂದರೆ ಮೀನುಗಾರಿಕೆಯ ಮೀನುಗಾರರ ಪಟ್ಟಣವೆಂದೇ ಅರ್ಥವನ್ನು ಕೊಡುತ್ತದೆ.

ಉಳಿದ ತುಳು ಜಾತಿಯವರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಗೇರರು ಭೂತಗಳನ್ನು ಪೂಜಿಸುತ್ತಾರೆ (Devil

worship) ದಕ್ಷಿಣ ಕನ್ನಡ ಜಿಲ್ಲೆಯ ವಾದಿರಾಜ ಸ್ವಾಮಿ ಎಂಬ ಒಬ್ಬ ಸಂತನು ಮೊಗೇರರಿಗೆ ದೀಕ್ಷೆ ಕೊಟ್ಟು ಮತ್ತೆ ಬ್ರಾಹ್ಮಣರನ್ನಾಗಿ ಮಾಡಿದನೆಂದು ತಿಳಿದು ಬರುತ್ತದೆ. ಅಂದರೆ ಮೊಗೇರರು ಕ್ಷೌರಿಕರಾಗಿ ಕೆಲಸ ಮಾಡುವವರಿಂದ ಹಿಡಿದು, ಪಾಲಕಿ ಹೊರುವವರಾಗಿ, ನಾವಿಕರಾಗಿ, ಮೀನುಗಾರರಾಗಿ ಮತ್ತು ಬ್ರಾಹ್ಮಣರಾಗಿ ಕೆಲಸ ಮಾಡುತ್ತಿರುವುದನ್ನು ನೋಡಿದರೆ ಒಂದೇ ಒಂದು ಜಾತಿಯು ಹೇ ರಾಜೋಪಜೀವಿಯಾಗಿ ನಮ್ಮ ದೇಶದಲ್ಲಿ ಬೆಳೆಯುತ್ತಿ ಎಂಬುದು ನಮ್ಮ ನಿದರ್ಶನಕ್ಕೆ ಬರುತ್ತದೆ.

ಬೋವಿ ಅಥವಾ ಬೋಯಿ ಜನರು

ಬೋವಿ ಅಥವಾ ಬೋಯಿ ಇಲ್ಲವೆ ಬೋಯ ಎಂದು ಕರೆಯಿಸಿಕೊಳ್ಳುವ ಈ ಜನರನ್ನು ಈ ಮೊದಲೆ ಹೇಳಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಲ್ಲಕ್ಕಿಯನ್ನು ಹೊರುವ ಮೊಗವೀರರಿಗೆ ಬೋವಿ ಎಂದೇ ಕರೆಯುತ್ತಾರೆ ಮೈಸೂರು ಪ್ರಾಂತದಲ್ಲಿ ಬೆಸ್ತರಿಗೆ ಬೋವಿ ಎಂದು ಕರೆಯುವದುಂಟು. ಬೋಯಿ ಅಂದರೆ ಕೆಲಸದವ ಎಂದು ಅರ್ಥವಾಗುವದು. ಆಂಧ್ರಪ್ರದೇಶದ ಉತ್ತರಭಾಗದಲ್ಲಿ ಮತ್ತು ಓಡಿಸಾ ಪ್ರಾಂತದ ದಕ್ಷಿಣ ಭಾಗದಲ್ಲಿರುವ ಸಾವರಾ ಅಥವಾ ಶಬರ ಎಂಬ ಬುಡಕಟ್ಟು ಜನಾಂಗದಲ್ಲಿಯ ಮುಖ್ಯಸ್ಥರಿ ಬೋಯಿ ಎಂದು ಕರೆಯುವದುಂಟು. ರಾಮಾಯಣದ ಕ್ರಿ. ಶ. ಪೂರ್ವ ೧೧೦೦ ರಲ್ಲಿ ಸಹಿತ ರಾಮನಿಗೆ ಶಬರಿಯು ಅಂದರೆ ಶಬರಾ ಸ್ತ್ರೀಯು ಹಣ್ಣು ಆಯ್ದು ಕೊಟ್ಟು

...ಸಿದರೆಂದು ಹೇಳಲಾಗಿದೆ. ಒಡಿಸಾ ಪ್ರಾಂತದಲ್ಲಿ ಒಡ್ಡೆ ...ಥವಾ ಒಡ್ಡರ ಜನಾಂಗಕ್ಕೆ ಬೋಯರ್ ಎಂದು ಕರೆಯು...ದುಂಟು. ಈ ಪ್ರಾಂತಕ್ಕೆ ಒಡಿಸಾ ಎಂದು ಹೆಸರು ಬರ...ಕಾದರೆ ಈ ಒಡ್ಡೆ ಅಥವಾ ಒಡ್ಡರ ಜನಾಂಗದವರಿಂದಲೇ ...ದಿದೆ. ಈ ಪ್ರಕಾರವಾಗಿ ಮೊಗೇರ, ಬೆಸ್ತರ, ಒಡ್ಡರ, ...ತ್ತು ಸಾವರಾ (ಶಬರ) ಇವರೆಲ್ಲರೂ ಒಂದೇ ಮೂಲದ ...ಲವಾದ ಬೋಯಿ ಜನಾಂಗಕ್ಕೆ ಇಲ್ಲವೆ ಅತಿ ವಿಸ್ತಾರವಾದ ...ನಾಂಗವಾದ ಮುಂಡಾ ಜನಾಂಗಕ್ಕೆ ಸೇರಿದವರು.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗೆಜೆಟಿಯರದಲ್ಲಿ ...ಯಾ ಜನರನ್ನು ಆ ಪ್ರದೇಶದ ಸೈನಿಕ ವರ್ಗದ ಜನ...ದು ಕರೆಯಲಾಗಿದೆ. ಆಗಿನ ಕಾಲದ ಪಾಳೆಗಾರ ಅರಸರು ...ತ್ತು ಹೈದರ ಅಲಿಯು ತಮ್ಮ ಸೈನ್ಯಗಳಲ್ಲಿ ಈ ಬೋಯಾ ...ರನ್ನು ಸೇರಿಸಿಕೊಳ್ಳುತಿದ್ದರಂತೆ. ಎಲ್. ಇ. ಕನ್ನ...ಸವೇರಿಂಗ ಎಂಬುವರು ಬೋಯಾ ಜನರ ಐತಿಹ್ಯದ ಬಗ್ಗೆ ...ಯುತ್ತಾ "ಈ ಜನರು ನಾಯುಡು ಇಲ್ಲವೆ ಜೆಂಟು ಎಂಬ ...ರಿನಿಂದ ಸೈನಿಕರಾಗಿ ಸೇವೆ ಸಲ್ಲಿಸಿದ್ದಾರೆ" ಎಂದು ಹೇಳಿ...ರೆ. ಇದೇ ಜನರಿಗೆ ತೆಲುಗು ಮಾತನಾಡುವ ಪ್ರದೇಶ... ಬೋಯಾ ಎಂದು ಕರೆಯುತ್ತಿದ್ದರೆ ಕನ್ನಡ ಮಾತ...ಡುವ ಪ್ರದೇಶದಲ್ಲಿ ಬೇಡರು ಎಂದು ಕರೆಯುತ್ತಿದ್ದರು. ...ೕ ಬೇಡರನ್ನು ಹುಲ್ಲುಗಾವಲಿನ ಪ್ರದೇಶಗಳಲ್ಲಿ ಕೆಲಸ ...ಡುತ್ತಿದ್ದರೆ ಮ್ಯಾಸರೆಂದು ಕರೆಯುತ್ತಿದ್ದರು. ಮತ್ತು ...ತಿಗಳ ಆಧಾರದ ಮೇಲೆ ಈ ಬೇಡರನ್ನು ನಾಲ್ಕು ವಿಭಾಗ

ಗಳಲ್ಲಿ ವರ್ಗಾಯಿಸಲಾಗಿತ್ತು. (೧) ಯುಮ್ಮುಲವರು (Buffalo–men) (೨) ಮಂಡಲವರು (herds'–men) (೩) ಪುಲವರು (flower–men) ಮತ್ತು (೪) ಮೀನಲವರು (Fisher–men) ಇವೆಲ್ಲ ಹೆಸರುಗಳು ಅವರ ಉದ್ಯೋಗಗಳ ಮೇಲಿಂದ ಬಂದಿವೆ ಎಂಬುದು ಸ್ಪಷ್ಟವಿದೆ. ಇವೇ ವಿಭಾಗಗಳನ್ನು ಕನ್ನಡದಲ್ಲಿ (೧) ಎಮ್ಮೆಯವರು (೨) ದನಗಾಹಿಗಳು (೩) ಹೂಗಾರರು (೪) ಮೀನಗಾರರು ಎಂದು ಕರೆಯಬಹುದು.

ಮೀನುಗಾರರಲ್ಲಿ ಸೂತಕುಲವನ್ನು ಮಹಾಭಾರತ ಕಾಲದಿಂದಲೇ ಕೇಳುತ್ತಿದ್ದೇವೆ. ರಾಮಾಯಣವನ್ನು ಬರೆದ ವಾಲ್ಮೀಕಿಯು ಸೂತ ಅಥವಾ ಬ್ಯಾಡನೆಂದು ಹೇಳಲಾಗುತ್ತಿದೆ. ಬಸವಣ್ಣನವರ ಒಂದು ವಚನದಲ್ಲಿ " ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು, ಅಗಸ ಕಬ್ಬಲ, ದುರ್ವಾಸ ಮುಚ್ಚಿಗ ಮುಂತಾಗಿ ಹೇಳಿದ್ದಾರೆ ಈ ವಚನದಲ್ಲಿ ಬೋಯಿತಿ. ಕಬ್ಬಿಲ. ಕಪ್ಪೆಯ ಮಗಳು ಮುಂತಾದ ಶಬ್ದಗಳು ಮೀನುಗಾರರ ಪ್ರಾಚೀನತೆಯ ಬಗ್ಗೆ ಗಮನಾರ್ಹವಾಗಿವೆ. ಮೈಸೂರು ಜನಗಣತಿ ೧೯೦೧ ರಲ್ಲಿ ತೆಲಗು ಮಾತನಾಡುವ ಬೆಸ್ತರನ್ನು ಬೋವಿ ಎಂದು ಕರೆಯಲಾಗಿದೆ. ಅವರ ಮುಖ್ಯ ಉದ್ಯೋಗಗಳು ಮೀನುಗಾರಿಕೆ, ಪಲ್ಲಕ್ಕಿ ಹೊರುವದು ಮತ್ತು ಸುಣ್ಣ ಸುಡುವದು ಇವೇ ಆಗಿದ್ದವು. ಇವರಿಗೆ ಉತ್ತರದ ಜಿಲ್ಲೆಗಳಲ್ಲಿ ಬೆಸ್ತರೆಂದು ಕರೆಯುತ್ತಾರೆ.

ದಕ್ಷಿಣದ ಜಿಲ್ಲೆಗಳಲ್ಲಿ ತೊರೆಯ, ಅಂಬಿಗ, ಪರಿವಾರ ಎಂದು ಕರೆಯುತ್ತಾರೆ. ಪಶ್ಚಿಮದ ಜಿಲ್ಲೆಗಳಲ್ಲಿ ಅವರಿಗೆ ಕಬ್ಬೇರ ಇಲ್ಲವೆ ಗಂಗೆ ಮಕ್ಕಳು ಎಂದು ಕರೆಯುತ್ತಾರೆ.

ಈಸ್ಟ್ ಇಂಡಿಯಾ ಸರಕಾರದ ಕಾಲದಲ್ಲಿ ಎಚ್. ಜಿ. ಪ್ರೆಡರ್‌ಗಸ್ಟ ಎಂಬವರು ಬೋವಿ ಇಲ್ಲವೆ ಮೀನುಗಾರರನ್ನು ಮಚ್ಚಲೀ ಪಟ್ಟಣಮ್‌ದಲ್ಲಿ ಕಂಡಾಗ ಇವರು ಒಳ್ಳೆಯ ನಂಬಿಗೆಯ ಸೇವಕರಾಗಿದ್ದರೆಂದು ಬರೆಯುತ್ತಾರೆ.

ಆಂಧ್ರಪ್ರದೇಶದಲ್ಲಿ ಬೋಯಾ ಅಥವಾ ಬೇಡರ ಜನರನ್ನು ಮಾಲಾ ಅಥವಾ ಏಕಾರೀ ಎಂಬ ಹರಿಜನರೊಳಗಿನ ಒಂದು ಭಾಗವೆಂದು ನಮೂದಿಸಲಾಗಿದೆ. ಮಾಲಾ ಜನರನ್ನೇ ಕರ್ನಾಟಕದಲ್ಲಿ ಹೊಲೆಯರು ಅಥವಾ ಚಲವಾದಿಗಳು ಎಂದು ಕರೆಯುತ್ತಾರೆ. ಮತ್ತು ಇದೇ ಜನರಿಗೆ ಮಹಾರಾಷ್ಟ್ರದಲ್ಲಿ ಮಹಾರ ಎಂದು ಕರೆಯುತ್ತಾರೆ. ಆದ್ದರಿಂದ ಮಾನವ ಕುಲಗಳ ಮೂಲಗಳನ್ನು ನಾವು ಪರೀಕ್ಷಿಸಿದಾಗ ಕೆಲವೊಂದು ಹೊಸ ಸಂಗತಿಗಳು ಬೆಳಕಿಗೆ ಬರುತ್ತವೆ. ಆರ್ಯರು ಭಾರತದಲ್ಲಿ ಮುಂಡಾ ಮತ್ತು ಕೋಲಾ ಜನರನ್ನು ಗೆದ್ದು ತಮ್ಮ ದಾಸರನ್ನಾಗಿ ಮಾಡಿಕೊಂಡಾಗ ಇಂಥ ಬೋಯಾ ಜನರು ದಾಸರಾಗಿ ಅಥವಾ ಅಸ್ಪೃಶ್ಯರಾಗಿ ಪರಿವರ್ತನವಾಗಿರುವ ಸಂಭವವಿದೆ. ಉತ್ತರ ಕರ್ನಾಟಕದಲ್ಲಿ ಚಲವಾದಿಗಳು ವೀರಶೈವ ಧರ್ಮವನ್ನು ಅನುಸರಿಸುತ್ತಾರೆ.

ಮಹಾಭಾರತದಲ್ಲಿ ಕೃಷ್ಣನನ್ನು ಒಬ್ಬ ವ್ಯಾಧನು ತನ್ನ ಬಾಣದಿಂದ ಅವನ ಹಿಮ್ಮಡಕ್ಕೆ ಹೊಡೆದು ಕೊಂದ

ನೆಂದು ಹೇಳಲಾಗಿದೆ. ಇದೇ ವ್ಯಾಧ ಶಬ್ದವು ಬ್ಯಾಧ ಎಂದು ಮತ್ತು ಬ್ಯಾಡ ಎಂದು ಆಗಿರಬಹುದಾಗಿದೆ. ಈಗ ನಾವು ಬೇಡ ಎಂದು ಹೇಳುವ ಜಾತಿಯವರು ಬ್ಯಾಧ ಅಥವಾ ಬ್ಯಾಡ ಎಂಬ ಶಬ್ದದಿಂದ ಬಂದಿರುವದರಿಂದ ಬೇಡರ ಜಾತಿಯ ಪ್ರಾಚೀನತೆಯನ್ನು ಮಹಾಭಾರತ ಕಾಲದಿಂದಲೇ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಬೋಯಾ, ಬೋಯಿ ಇಲ್ಲವೆ ಒಡ್ಡರ ಎಂದು ಕರೆಯುವ ಈ ಆದಿವಾಸಿಗಳ ಹೆಣ್ಣು ಮಕ್ಕಳು ಎದೆಯ ಮೇಲೆ ಕುಪ್ಪಸ ಇಲ್ಲವೆ ಇನ್ನಾವುದೇ ವಸ್ತ್ರವನ್ನು ಧರಿಸುತ್ತಿದ್ದಿಲ್ಲ ಇಲ್ಲವೇ ಧರಿಸುವದಿಲ್ಲ. ಇದು ಅವರಲ್ಲಿ ನಿಷಿದ್ಧಿಸಲಾದ ಪದ್ಧತಿಯಾಗಿದೆ.

ಹರಿಕಾಂತರು ಅಥವಾ ಹರಕಾಂತ್ರರು:

ಹರಿಕಾಂತರು ಸಹಿತ ಮೊಗವೀರ ಅಥವಾ ಬೋಯಿ ಜನಾಂಗಗಳಿಗೆ ಸಂಬಂಧಿಸಿದವರಂತೆಯೇ ತೋರುತ್ತದೆ. ಆದರೆ ಇವರು ಹರಭಕ್ತಿ ಇಲ್ಲವೆ ಶೈವ ಪಂಥವನ್ನು ಸೇರದೆ ಹರಿ ಪಂಥವನ್ನು ಸೇರಿದ್ದರಿಂದ ಇವರಿಗೆ ಈ ಹೆಸರು ಬಂದಂತೆ ತೋರುತ್ತದೆ. ಹರಿಕಾಂತರು ಸಹಿತ ಮೊಗವೀರರಂತೆ ತಮಿಳುನಾಡಿನಿಂದ ಬಂದವರೇ. ಉತ್ತರಕನ್ನಡ ಜಿಲ್ಲೆಗೆ ಇವರು ತುಳು ಮಾತನಾಡುವ ಪ್ರದೇಶಗಳಿಂದ ಬಂದವರು.

ಮೊಸುಗಾರಿಕೆಯ ಪದ್ಧತಿಯು ಸಹಿತ ಇವರಲ್ಲಿ ಭಿನ್ನವಾಗಿದೆ. ಅವರಲ್ಲಿಯ ಮೊಸುಗಾರಿಕೆಯ ಹಾಗೆಗಳು

ಭಿನ್ನರೀತಿಯವಾಗಿವೆ. ಅವರು ಈ ಜಾಳಿಗೆಗಳನ್ನು ಸಮುದ್ರ ದಲ್ಲಿ ಹರಡುವದರ ಬದಲಾಗಿ ಬೀಸಿ ಒಗೆದು ಕಡಲಿನಲ್ಲಿ ಹರ ಡುತ್ತಾರೆ. ಮೊದಲು ಈ ಜಾಳಿಗೆಗಳನ್ನು ಕೈಯಲ್ಲಿ ತೆಗೆದು ಕೊಂಡು ನಂತರ ತಲೆಯ ಮೇಲೆ ಎತ್ತಿ ಅವುಗಳನ್ನು ತಲೆಯ ಮೇಲೆ ಕೈಯಿಂದ ತಿರುಗಿಸಿ ಸಮುದ್ರದಲ್ಲಿ ಬೀಸಿ ಒಗೆಯು ತ್ತಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಇವರಿಗೆ ಅಂಬಿಗರೆಂತಲೂ ನಾವಿಕರೆಂತಲೂ ಕರೆಯುತ್ತಾರೆ. ಇವರು ಮುಖ್ಯವಾಗಿ ಕಡಲು ತೀರದ ಮೀನುಗಾರಿಕೆಯನ್ನು ಮಾಡುತ್ತಾರೆ.

ಮೀನುಗಾರರಲ್ಲಿ ಮೊಗವೀರರ, ಬೋಯಿ ಜನರ ನಂತರವೆ ಬೆಸ್ತರ ಒಂದು ದೊಡ್ಡ ಗುಂಪು. ಇದು ಪ್ರಾಚೀನ ಕಾಲದಿಂದಲೂ ಭಾರತದ ಪೂರ್ವದಲ್ಲಿ ಮಲೇಶಿಯಾ ಭಾಗ ದಿಂದ ಒಳಗೆ ಬಂದು ದಕ್ಷಿಣ ಭಾರತದಲ್ಲಿಯೂ, ಮಧ್ಯ ಭಾರತದಲ್ಲಿಯೂ, ಮತ್ತು ಪೂರ್ವ ಭಾರತದಲ್ಲಿಯೂ ಅನೇಕ ಉದ್ಯೋಗ ಮತ್ತು ಮೀನುಗಾರಿಕೆಗಳನ್ನು ಮಾಡುತ್ತಾ ತಮ್ಮ ಮಾನವ ಕುಲಗಳಲ್ಲಿ ಜೀವಿಸುತ್ತಾರೆ. ಒಡ್ಡ ಅಥವಾ ಒಡ್ಡರ ಜನಾಂಗವು ಅನೇಕ ಭಾಗಗಳಲ್ಲಿ ಒಡೆದು ಮನೆ ಕಟ್ಟುವ, ಒಡ್ಡುಗಳನ್ನು ಕಟ್ಟುವ ಮತ್ತು ಸೇತುವೆ ಗಳನ್ನು ಕಟ್ಟುವ ಕಾರ್ಯಗಳಲ್ಲಿ ಬಹುತೇಕವಾಗಿ ಒಳ್ಳೇ ನಿಷ್ಠಾವಂತ ಕೆಲಸಗಾರರಾಗಿ ದುಡಿಯುವದನ್ನು ನಾವು ಇಲ್ಲಿ ನೆನೆಯಬಹುದು. ಅವರು ಏಡಿ, ಮುಂತಾದ ಜಲ ಚರ ಪ್ರಾಣಿಗಳನ್ನು ಅಡವಿಯ ಇಲಿಗಳನ್ನು ಸಹಿತ ತಮ್ಮ ಆಹಾರಕ್ಕಾಗಿ ಉಪಯೋಗಿಸುತ್ತಾರೆ.

ಆಸ್ಟ್ರಿಕ್ ಜನಾಂಗದ ಈ ಮೀನುಗಾರರು ಪ್ರಾದೇಶಿಕ ಭಾಷೆಗಳಿಂದ ಮತ್ತು ಪದ್ಧತಿಗಳಿಂದ ಬಹಳಷ್ಟು ಪ್ರಭಾವಿತ ರಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಮರಾಠಿಯಿಂದ ಕರ್ನಾಟಕ ದಲ್ಲಿ ಕನ್ನಡದಿಂದ ತಮಿಳು ನಾಡಿನಲ್ಲಿ ತಮಿಳಿನಿಂದ ಕೇರಳ ದಲ್ಲಿ ಮಲಯಾಳಿ ಪದ್ಧತಿಗಳಿಂದ ಮತ್ತು ಆಂಧ್ರ, ಓರಿಸಾ. ಬಿಹಾರ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ ಇದೇ ಪ್ರಕಾರವಾಗಿ ಪ್ರಾದೇಶಿಕ ಪದ್ಧತಿಗಳಿಂದ ಪ್ರಭಾವಿತ ರಾಗಿದ್ದಾರೆ.

ನಾವು ಇಲ್ಲಿಯ ವರೆಗೆ ಮಲಯೋ ಪೊಲಿನೇಶಿಯನ್ ಭಾಗದ ಮೀನುಗಾರರ ಜನಾಂಗಗಳನ್ನು ಅಥವಾ ಮಾನವ ಕುಲಗಳನ್ನು ಪರೀಕ್ಷಿಸಿದೆವು. ಇನ್ನು ಮುಂದೆ ಆರ್ಯನ್ ಜನಾಂಗಗಳಲ್ಲಿಯ ಮೀನುಗಾರರ ಬಗ್ಗೆ ವಿಚಾರಿಸುವಾ :

೨. ಖಾರವಿ ಮೀನುಗಾರರು :

ಖಾರವಿ ಜಾತಿಯ ಮೀನುಗಾರರು ಉತ್ತರಕನ್ನಡ ಜಿಲ್ಲೆಯಲ್ಲಿ ಇದ್ದು ಇವರು ಮರಾಠಿ ಮಾತನಾಡುವ ಮೀನು ಗಾರರಾಗಿದ್ದಾರೆ. ಇವರು ಮಹಾರಾಷ್ಟ್ರದಿಂದ ಬಂದು ಇಲ್ಲಿ ನೆಲೆಸಿದ್ದಾರೆ. ಇವರ ಹೆಸರೇ ಸೂಚಿಸುವಂತೆ ಸಂಸ್ಕೃತದ ಕ್ಷಾರವೆಂಬುದು ತದ್ಭವವಾಗಿ ಖಾರವೆಂದಾಗುತ್ತದೆ. ಮರಾಠಿ ಯಲ್ಲಿ ಖಾರ ಎಂದರೆ ಉಪ್ಪು. ಇವರು ಮೊದಲು ಸಮುದ್ರದ ನೀರಿನಿಂದ ಉಪ್ಪು ಮಾಡುವ ಉದ್ಯೋಗವನ್ನು ಕೈಕೊಂಡ ದ್ದಕ್ಕೆ ಇವರಿಗೆ ಹೀಗೆ ಹೆಸರು ಬಂದಿರಬಹುದು. ಆದರೆ

ವರು ಒಳ್ಳೆಯ ಕಡಲು ತೀರದ ಮೀನುಗಾರರಾಗಿದ್ದಾರೆ.
ವರು ಒಳ್ಳೆಯ ನಾವಿಕರೂ ಹೌದು. ಇದಲ್ಲದೆ ಇವರು
ಪಕ್ಕತ್ತದ ಕಾರ್ಯಗಳಲ್ಲಿ ಮತ್ತು ಕೂಲಿಗಳಾಗಿಯೂ
ಹಿತ ಕೆಲಸ ಮಾಡುತ್ತಾರೆ. ಉತ್ತರಕನ್ನಡ ಜಿಲ್ಲೆಯ
ವರಿಗೆ ಹವಿಕ್ ಬ್ರಾಹ್ಮಣರು ಪೂಜಾ ಪ್ರಸಂಗಗಳಲ್ಲಿ
ಮತ್ತು ಮದುವೆ-ಮುಂಜಿವೆಗಳಲ್ಲಿ ಪೂಜಾರಿಗಳಾಗಿ ಕೆಲಸ
ಮಾಡುತ್ತಾರೆ. ಶೃಂಗೇರಿ ಮಠದ ಸ್ವಾಮಿಗಳು ಇವರಿಗೆ
ಧಾರ್ಮಿಕ ಗುರುಗಳಾಗಿದ್ದಾರೆ. ಅವರು ಮರಾಠಿಯೊಂದಿಗೆ
ಕೊಂಕಣಿಯನ್ನು ಸಹಿತ ಮಾತನಾಡುತ್ತಾರೆ. ಕೊಂಕಣ
ಪ್ರದೇಶದ ಸಂಪರ್ಕ ಬಹುಕಾಲದಿಂದ ಬಂದಿರುವದರಿಂದಲೇ
ವರು ಈ ಕೊಂಕಣಿ ಭಾಷೆಯನ್ನು ಬಲ್ಲವರಾಗಿದ್ದಾರೆ.
ಮೀನುಗಾರಿಕೆಯಲ್ಲಿ ತೊಡಗದೇ ಇದ್ದ ಖಾರವಿ ಜನರು
ನಿವಾರವನ್ನು ಧರಿಸುತ್ತಾರೆ. ಇವರು ಮೂಲತಃ ಶೈವ
ರಾಗಿದ್ದಾರೆ. ಅವರು ಅಜಾಯಿ ಮಾಸ್ತಿ ಮತ್ತು ನಾಗು
ಮಾಸ್ತಿ ಎಂಬ ದೇವತೆಗಳನ್ನು ಪೂಜಿಸುತ್ತಾರೆ. ಆದ್ದರಿಂದ
ವರಲ್ಲಿ ಮಹಾಸತಿಯರನ್ನು ಪೂಜಿಸುವ ಪದ್ಧತಿಯು
ಳೆದು ಬಂದಿದೆ ಎಂದು ಹೇಳಬಹುದು. ಈ ಮಹಾಸತಿ
ರು ಇವರ ಜನಾಂಗದವರೇ ಆಗಿದ್ದಿರಬೇಕು. ತಮ್ಮ
ಟುಂಬಿಕ ಪದ್ಧತಿಯಲ್ಲಿ ಅವರು ಮಕ್ಕಳ ಸಂತಾನ
ದ್ಧತಿಯನ್ನು ಆಚರಿಸುವದರಿಂದ ಇವರ ಕೌಟುಂಬಿಕ
ದ್ಧತಿಯು ಆರ್ಯರ ಪಿತೃ ಪ್ರಧಾನ ಕುಟುಂಬ ಪದ್ಧತಿ
ನ್ನು ಹೋಲುತ್ತದೆ. ಆದ್ದರಿಂದ ಇವರು ಪ್ರಾಚೀನ

ಕಾಲದಿಂದಲೂ ಆರ್ಯನ್ (Indo-Aryan) ಜನಾಂಗದವರೇ ಆಗಿರಬೇಕು. ಅವರ ವಿವಾಹಗಳನ್ನು ಅವರಲ್ಲಿಯ ಕೋತಾ ಎಂಬ ಧರ್ಮಾಧಿಕಾರಿಯಾಗಲೀ ಇಲ್ಲವೆ ಶಿವ ಬ್ರಾಹ್ಮಣರಾಗಲೀ ನೆರವೇರಿಸುತ್ತಾರೆ.

ಗಾಬಿತರು:

ಗಾಬಿತರು ಉತ್ತರ ಕನ್ನಡ ಜಿಲ್ಲೆಗೆ ಗೋವಾ, ರತ್ನಾಗಿರಿ ಮತ್ತು ಮಾಳವಾ ಪ್ರದೇಶಗಳಿಂದ ಬಂದವರು. ಇವರು ಪೋರ್ಚುಗೀಜರು ಪ್ರಾದೇಶಿಕ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡುವ ಕಾಲದಲ್ಲಿ ತಮ್ಮ ಪ್ರದೇಶಗಳನ್ನು ಬಿಟ್ಟು ಉತ್ತರಕನ್ನಡ ಜಿಲ್ಲೆಗೆ ಬಂದವರು. ಇವರು ಉತ್ತರಕನ್ನಡ ಜಿಲ್ಲೆಯಲ್ಲಿ ಗೋವಾದ ಗಡಿಯಿಂದ ಹಿಡಿದುಕೊಂಡು ಹೊನ್ನಾವರದ ವರೆಗೆ ಕಂಡುಬರುತ್ತಾರೆ. ಇವರು ಸಾವಂತವಾಡಿ ಭಾಗದ ಕೊಂಕಣಿ ಭಾಷೆಯನ್ನು ಮಾತನಾಡುತ್ತಾರೆ. ಆದ್ದರಿಂದ ಇವರು ಮುಖ್ಯವಾಗಿ ರತ್ನಾಗಿರಿ ಜಿಲ್ಲೆಗೆ ಸಂಬಂಧಿಸಿದವರೆಂದು ಹೇಳಬಹುದು. ಇವರು ಪೂರ್ತಿಯಾಗಿ ಕಡಲು ಮೀನುಗಾರರಾಗಿ ಮತ್ತು ಕಡಲ ನಾವಿಕರಾಗಿ ಕೆಲಸ ಮಾಡುತ್ತಾರೆ. ಇವರು ಒಂದು ಬಂದರಿನಿಂದ ಮತ್ತೊಂದು ಬಂದರಕ್ಕೆ ಸಣ್ಣ ನಾವೆಗಳಲ್ಲಿ ಸಾಮಾನು-ಸರಕುಗಳನ್ನು ಸಾಗಿಸುವದರಲ್ಲಿಯೂ ನಿರತರಾಗಿರುತ್ತಾರೆ. ಇವರು ಕೊಂಕಣದಲ್ಲಿ ಪ್ರಾಚೀನ ಕಾಲದಿಂದ ಹಡಗು ಪಡೆಗಳಲ್ಲಿ ಕೆಲಸ ಮಾಡಿದವರಾಗಿದ್ದಾರೆ. ಇವರಿಗೆ

ಸಮುದ್ರದ ಆಳವಾದ ಪ್ರದೇಶಗಳಲ್ಲಿ ಮೀನುಗಾರಿಕೆ ಮಾಡುವದು ಅತಿ ಇಷ್ಟವಾದುದು. ಇವರಿಗೆ ಸಮುದ್ರದ ತೆರೆಗಳನ್ನು ಮತ್ತು ಬಿರುಗಾಳಿಗಳನ್ನು ಮುಂದಾಗಿ ಸುಲಭವಾಗಿ ತಿಳಿದುಕೊಳ್ಳಬಲ್ಲ ತಿಳುವಳಿಕೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ರಾತ್ರಿಯ ವೇಳೆಯಲ್ಲಿ ಸಮುದ್ರದಲ್ಲಿ ದೂರ ಪ್ರವಾಸ ಮಾಡಿದಾಗ ದಿಕ್ಕುಗಳನ್ನು ಚುಕ್ಕೆಗಳ ಮುಖಾಂತರವಾಗಿ ತಿಳಿದುಕೊಳ್ಳಬಲ್ಲರು. ಇದು ಇವರಲ್ಲಿ ಸಂಪ್ರದಾಯಕವಾಗಿ ಬೆಳೆದುಬಂದ ಜ್ಞಾನ. ಅವರು ಮೀನುಗಳು ಯಾವಾಗ ಮರಿ ಹಾಕುತ್ತವೆ ಎಂಬ ಕಾಲವನ್ನು ಸರಿಯಾಗಿ ಬಲ್ಲರು.

ಗಾಬಿತರು ತಮ್ಮನ್ನು ಕ್ಷತ್ರಿಯರೆಂದು ಹೇಳಿಕೊಳ್ಳುತ್ತಾರೆ. ಆದ್ದರಿಂದ ಇವರು ಆರ್ಯರ ಮಾನವಕುಲದವರೆಂದು ನಾವು ತರ್ಕಿಸಬಹುದಾಗಿದೆ. ಇತ್ತೀತ್ತಲಾಗಿ ಅವರು ಭಾರತಿ ಪಂಥವನ್ನು ಅನುಸರಿಸುತ್ತಾರೆ. ಆದ್ದರಿಂದ ಇವರಿಗೆ ರಾಮ ಭಾರತಿ, ತುಕಾರಾಮ ಭಾರತಿ ಮತ್ತು ಮಾಧವ ಭಾರತಿ ಎಂಬವರು ಗುರುಗಳೆಂದು ತಿಳಿದುಕೊಳ್ಳಲ್ಪಟ್ಟಿದ್ದಾರೆ. ಆದ್ದರಿಂದ ಸಾಂಪ್ರದಾಯಿಕವಾಗಿ ಅವರ ಸ್ತ್ರೀ-ಪುರುಷರು ಭಾರತಿ ಪಂಥದ ದೀಕ್ಷೆಯನ್ನು ಪಡೆಯುತ್ತಾರೆ. ಅವರು ತಮ್ಮ ಗುರುಗಳಿಗೆ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಅವರು ಶೈವರೇ ಆಗಿದ್ದಾರೆ. ಆದರೂ ಪಂಢರಪುರಕ್ಕೆ ವಿಠ್ಠಲನನ್ನು ಪೂಜಿಸುವದಕ್ಕಾಗಿ ಯಾತ್ರೆ ಹೋಗುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಕೆಲವರು

ಮಹಾರಾಷ್ಟ್ರದಲ್ಲಿ ಬೆಳೆದು ಬಂದ "ವಾರಕರಿ" ಪಂಥವನ್ನು ಅನುಸರಿಸುತ್ತಾರೆ. ಮತ್ತು ಭಜನೆ ಮಾಡುವದು ಕೀರ್ತನೆಗಳನ್ನು ಕೇಳುವದರಲ್ಲಿ ಅಭಿರುಚಿ ಹೊಂದಿದವರಾಗಿದ್ದಾರೆ. ಅವರು ಹೆಣ್ಣು ದೇವತೆಗಳನ್ನೂ ಪೂಜಿಸುತ್ತಾರೆ. ಅವರ ಜನಪದ ಸಾಹಿತ್ಯವು ಭೂತಗಳ (devils) ದೇವರು ಹಾಗೂ ಸ್ತ್ರೀ ದೇವತೆಗಳ ಕತ್ತೆಗಳನ್ನು ಒಳಗೊಂಡಿರುವಂತಹದಾಗಿದೆ. ಅವರ ಜನಪದ ಗೀತೆಗಳಲ್ಲಿ ಜೀವನದ ಸುಖ ದುಃಖಗಳ ಬಗ್ಗೆಯೂ ಸಾಕಷ್ಟು ಮಾಹಿತಿ ದೊರೆಯುತ್ತದೆ.

ಗಾಬಿತರು ಮುಸ್ಲಿಮರ ಆಳಿಕೆಯಲ್ಲಿ ಮುಸಲ್ಮಾನರಾಗಿ ಧರ್ಮಾಂತರ ಹೊಂದಿದವರಾಗಿದ್ದಾರೆ. ಮತ್ತು ಪಾಶ್ಚಾತ್ಯರ ಪ್ರಾಬಲ್ಯ ಭಾರತದಲ್ಲಿ ಬೆಳೆದ ನಂತರ ಕ್ರಿಶ್ಚಿಯನ್ ಧರ್ಮಕ್ಕೂ ಮತಾಂತರ ಹೊಂದಿದ್ದಾರೆ. ಮುಸಲ್ಮಾನ ಧರ್ಮವನ್ನು ಅಂಗೀಕರಿಸಿದ ಗಾಬಿತರಿಗೆ ದಾಲಜಿಗಳೆಂದು ಹೆಸರು. ತುರ್ಕಸ್ತಾನ ಮತ್ತು ಪರ್ಸಿಯಾದಿಂದ ಬಂದ ಮೀನುಗಾರರು ಮತ್ತು ನಾವಿಕರು ಈ ದಾಲಜಿಗಳೊಂದಿಗೆ ಶರೀರ ಸಂಬಂಧ ಬೆಳೆಸಿದ್ದರಿಂದ ಇವರಿಗೆ ನವಾಯತರೆಂದು ಹೆಸರು ಬಂದಿತು. ಈ ದಾಲಜಿ ಅಥವಾ ನವಾಯತ ನಾವಿಕರ ಮತ್ತು ಮೀನುಗಾರರ ಬಲೆಗಳು ಮತ್ತು ನಾವೆಗಳು ಹಿಂದೂ ಗಾಬಿತರ ನಾವೆಗಳಿಗಿಂತ ಸ್ವಲ್ಪ ಭಿನ್ನವಾಗಿ ಕಂಡು ಬರುತ್ತವೆ. ಯಾಕೆಂದರೆ ಹಿಂದು ಗಾಬಿತರು ತಮ್ಮ ಆರ್ಯನ್ ಪದ್ಧತಿಯನ್ನು ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡಿದ್ದರೆ ದಾಲಜಿಗಳು ಮತ್ತು ನವಾಯತರು

ತುರ್ಕಿ ಮತ್ತು ಪರ್ಶಿಯನ್ ಪದ್ಧತಿಗಳಿಂದ ಪ್ರಭಾವಿತರಾಗಿದ್ದಾರೆ. ಆರ್ಯನ್ ಜನಾಂಗದಲ್ಲಿ ಮುಖ್ಯವಾಗಿ ಎರಡು ಗುಂಪಿನ ಮಾನವ ಕುಲಗಳಿದ್ದವು. ಒಂದು ಗುಂಪಿಗೆ "ಮತ್ಸ್ಯರು" ಎಂದೂ ಎರಡನೇ ಗುಂಪಿಗೆ "ಗೋಪರು" ಎಂದೂ ಕರೆಯುತ್ತಿದ್ದರು. ಗೋಪರು ಮುಖ್ಯವಾಗಿ ದನಗಾಹಿಗಳಾಗಿ ತಮ್ಮ ದನಕರುಗಳನ್ನು ಕಾಯುವವರಾಗಿದ್ದರು. ಮತ್ತು ಈ ದನಕರುಗಳ ಹಾಲು ಮತ್ತು ಹಾಲಿನಿಂದ ಉತ್ಪನ್ನವಾಗುವ ಖಾದ್ಯಗಳ ಮೇಲೆ ಹೆಚ್ಚಾಗಿ ಅವಲಂಬಿತರಾಗಿದ್ದರು. ಆದರೆ ಮತ್ಸ್ಯರು ಮೀನುಗಾರಿಕೆಯನ್ನು ಮಾಡುತ್ತಿದ್ದರು. ಆರ್ಯನ್ ಭಾಷೆಗಳನ್ನು ಮಾತನಾಡುವ ಮೀನುಗಾರರು ಈ ಮತ್ಸ್ಯರಿಂದಲೇ ತಮ್ಮ ಸಾಂಸ್ಕೃತಿಕ ಪ್ರಾರಂಭಿಕ ಜೀವನವನ್ನು ಆರಂಭಿಸಿರಬೇಕು. ಬೆಂಗಾಲೀ ಪ್ರದೇಶದಲ್ಲಿ ಮೀನನಾಥ ಅಥವಾ ಮತ್ಸ್ಯೇಂದ್ರನಾಥನನ್ನು ಮಚ್ಛಘ್ನ ಎಂದು ಕರೆದಿದ್ದಾರೆ. ಮಚ್ಛಘ್ನ ಎಂದರೆ ಮೀನುಗಳನ್ನು ಕೊಲ್ಲುವವ ಎಂದು ಅರ್ಥ. ಬಂಗಾಲ ಪ್ರಾಂತದ ಹೊರಗಿನವನಾದ ಗೋರಖನಾಥನು ಒಬ್ಬ ಮೀನುಗಾರನೇ ಆಗಿದ್ದನು. ಅವನಿಗೆ ಜಲಂಧರ ಎಂಬ ಹೆಸರೂ ಇದ್ದುದರಿಂದ ಅವನು ಮೀನಿನ ಜಾಳಿಗೆ ಹಿಡಿಯುವವನೆಂದೇ ಅರ್ಥವಾಗುವದು. ಇವನೇ ಬಂಗಾಲ ಪ್ರಾಂತದಲ್ಲಿ ಮುಸಲ್ಮಾನರಿಂದಾಗಿ ಮಚಂದಲಿ ಅಥವಾ ಮೋಚಾರ ಎಂಬ ಪೀರನಾದನು. ಮೋಚಿ ಎಂಬ ಹರಿಜನರು ಇದೇ ಮಾನವ ಕುಲಕ್ಕೆ ಸೇರಿದವರೆಂದು ತೋರು

ತ್ತದೆ. ಇವರಿಗೆ ಕರ್ನಾಟಕದಲ್ಲಿ ಮುಚಗಾರರು ಎಂದು ಕರೆಯುತ್ತಾರೆ. ಮುಚ್ಚಿ ಅಂದರೆ ಪಾಪೋಸು, ಮುಚ್ಚಿ ಎಂಬ ಕಾಲಮರಿಗಳು ಮೀನಿನ ಆಕಾರವಾಗಿರುವದರಿಂದ ಅವಕ್ಕೆ ಹಾಗೆ ಹೆಸರು ಬಂದಿರಬಹುದು. ಮತ್ತು ಇವುಗಳನ್ನು ಮುಚಗಾರರು ತಯಾರಿಸುತ್ತಿದ್ದುದರಿಂದಲೂ ಅವುಗಳನ್ನು ಹಾಗೆ ಕರೆದಿರಬೇಕು. ಗುಜರಾತ ಮತ್ತು ಮಹಾರಾಷ್ಟ್ರದಲ್ಲಿ ಈ ಜನಾಂಗ ಹೆಚ್ಚಿಗೆ ಕಂಡುಬಂದಿದೆ. ಇವರು ಸಂಸ್ಕೃತಿಯಲ್ಲಿ ಆರ್ಯೀಕರಣವನ್ನು ಪೂರ್ವದಿಂದಲೇ ಹೊಂದಿದ್ದರೂ ಜನಾಂಗಿಕವಾಗಿ ಮುಂಡಾ ವರ್ಗಕ್ಕೆ ಸೇರಿದವರಾಗಿರಬೇಕು. ಇಲ್ಲವೆ ಮುಂಡಾ ವರ್ಗ ಮತ್ತು ಆರ್ಯನ್ ವರ್ಗದ ಮತ್ಸ್ಯರ ಮಿಶ್ರ ಜನಾಂಗವಾಗಿರಬೇಕು. ಇವರಲ್ಲಿ ಮೊಂಗೋಲಿಯನ್ ಜನಾಂಗದ ಮಿಶ್ರಣವೂ ಪೂರ್ವ ಭಾರತದ ಗಡಿಯಿಂದ ಆದಂತೆ ತೋರುತ್ತದೆ. ಉತ್ತರ ಕರ್ನಾಟಕದ ಮುಚಿಗಾರರು ವೀರಶೈವ ಧರ್ಮವನ್ನು ಅನುಸರಿಸುತ್ತಾರೆ.

ಇಲ್ಲಿಯ ವರೆಗೆ ನಾವು ಮುಂಡಾ ಮತ್ತು ಆರ್ಯನ್ ಮೀನುಗಾರರ ಬಗ್ಗೆ ಹೇಳಿದೆವು. ಆವರೆ ಇನ್ನು ಮುಂದೆ ಇನ್ನೊಂದು ದೊಡ್ಡ ಜನಾಂಗವಾದ ಮಾಪಿಳ್ಳೆ ಜನಾಂಗದ ಬಗ್ಗೆ ಚರ್ಚಿಸುವಾ.

೬. **ಮಾಪಿಳ್ಳೆ ಮೀನುಗಾರರು:**

ಮಾಪಿಳ್ಳೆಯರು ಅರಬ್ಬೀ ಗಂಡಸರಿಗೆ ಕೇರಳದಲ್ಲಿಯ ಹೆಣ್ಣುಮಕ್ಕಳಿಗೆ ಹುಟ್ಟಿದ ಸಂತಾನವೆಂದು ಕರೆಯಿಸಿಕೊಳ್ಳ

ಲ್ಪಡುತ್ತಾರೆ. ಈ ಅರಬ್ಬೀ ವ್ಯಾಪಾರಸ್ಥರು ಮೊಂಗೋಲ ಜನರಿಂದ ಕೂಡಿದ ಪರ್ಶಿಯಾ, ಬಲೂಚಿಸ್ತಾನ ಮತ್ತು ತುರ್ಕಸ್ತಾನದ ಜನಾಂಗವಿರಬೇಕೆಂದು ಮಾನವಶಾಸ್ತ್ರಜ್ಞರು ಇವರ ದೇಹದ ಭಾಗಗಳನ್ನು ಅಳತೆ ಮಾಡಿ ಹೇಳಿದ್ದಾರೆ. ಕೇರಳದಲ್ಲಿಯ ಈ ಮಿಶ್ರ ಜನಾಂಗದೊಂದಿಗೆ ೯ನೆಯ ಶತಮಾನದ ಅರಬಿಯಾದ ಜನರೂ ಸಹಿತ ಕೂಡಿಕೊಂಡು ಮುಸಲ್ಮಾನ ಧರ್ಮವನ್ನು ಇವರಲ್ಲಿ ಹಬ್ಬಿಸಿದ್ದಾರೆ.

೧೯೫೧ ನೆಯ ಇಸ್ವಿಯ ಜನಗಣತಿಯಲ್ಲಿ ಇವರನ್ನು ಮಲಿಯಾ ಇಸ್ಲಾಮಿಯರೆಂದು ನಮೂದಿಸಲಾಗಿದೆ. ಆದ್ದರಿಂದ ಇವರು ಮುಸಲ್ಮಾನ ಧರ್ಮಕ್ಕೆ ಹೊಸದಾಗಿ ಸೇರಿಕೊಂಡವರೆಂದು ಅರ್ಥವಾಗುತ್ತದೆ. ಕೇರಳದಲ್ಲಿಯ ಮುಕ್ವನ್ ಎಂಬ ಮೀನುಗಾರರು ಬಹುತರವಾಗಿ ಇವರೊಡನೆ ಬೆರೆತಿದ್ದಾರೆ. ಈ ಜನರು ೭ ಮಂದಿ ಹೆಂಡಂದಿರನ್ನು ಮಾಡಿಕೊಂಡಿದ್ದು ಒಬ್ಬೊಬ್ಬರಿಂದ ೧೦–೧೫ ಮಕ್ಕಳನ್ನು ಸಹಿತ ಪಡೆದಿದ್ದಾರೆ. ಅಂದರೆ ಒಬ್ಬ ಗಂಡಸಿಗೆ ಒಮ್ಮೊಮ್ಮೆ ೧೦೫ ಮಕ್ಕಳು ಸಹಿತ ಆಗಬಹುದು. ಈ ಸಂಖ್ಯೆ ನಮಗೆ ಮಹಾಭಾರತದಲ್ಲಿಯ ಕುರು ರಾಜನಿಗೆ ೧೦೧ ಮಂದಿ ಮಕ್ಕಳು ಇದ್ದುದು ನೆನಪಿಗೆ ಬರುತ್ತದೆ. ಮತ್ತು ಈ ೧೦೫ ಮಕ್ಕಳಲ್ಲಿ ಅನೇಕ ಅವಳಿಮಕ್ಕಳೂ ಸೇರಿದ್ದಾರೆ. ಇದಕ್ಕೆ ಕಾಮೋತ್ಪಾದಕ ಮೀನಿನ ಆಹಾರವೇ ಕಾರಣವೆಂದು ಮಾನವಶಾಸ್ತ್ರಜ್ಞರ ಅಭಿಪ್ರಾಯವಿದೆ. ಇವರಲ್ಲಿಯ ಕೆಲವರು ಅಳಿಯ ಸಂತಾನ ಪದ್ಧತಿಯನ್ನೂ ಮತ್ತೆ ಕೆಲವರು

ಪುತ್ರ ಸಂತಾನ ಪದ್ಧತಿಯನ್ನೂ ಇನ್ನುಳಿದವರು ಮುಸ್ಲಿಮ ಧರ್ಮ ಪದ್ಧತಿಯನ್ನೂ ಪಾಲಿಸುತ್ತಾರೆ. ಈ ಮಾಪಿಳ್ಳೆ ಮೀನುಗಾರರು ಲಕ್ಷದ್ವೀಪದಲ್ಲಿಯೂ ಸಿಕ್ಕುತ್ತಾರೆ. ಮಾಪಿಳ್ಳೆಯರು ಮುಸ್ಲಿಮ್, ಕ್ರಿಶ್ಚಿಯನ್ ಮತ್ತು ಜ್ಯೂ ಧರ್ಮಗಳನ್ನು ಪಾಲಿಸುತ್ತಾರೆ. ಸಿ. ಡಬ್ಲ್ಯು. ಇ. ಕಾಟಿನ್ಸ್ ಎಂಬವರ ಪ್ರಕಾರ ಲಂಕಾ ದ್ವೀಪಕ್ಕೆ ಹೋದ ಆರ್ಯನ್ ಜನಾಂಗದ ಕೆಲವರು ಮಾಲದೀವ ಮತ್ತು ಮಿನಿಕಾಯ್ ದ್ವೀಪಗಳಲ್ಲಿ ಉಳಿದುಕೊಂಡಿರಬೇಕೆಂದು ಹೇಳುತ್ತಾರೆ. ಈ ಮಾಪಿಳ್ಳೆಯವರಿಗೆ ಕೋಯಾ ಎಂದೂ ಕರೆಯುತ್ತಾರೆ.

ಈ ಪ್ರಕಾರವಾಗಿ (racially) ಮೀನುಗಾರರನ್ನು ಅಭ್ಯಾಸ ಮಾಡಿದಾಗ ಅವರಲ್ಲಿ ಮಲೇಶಿಯಾದ ಜನಾಂಗ, ಮೊಂಗೋಲಿಯಾದ ಜನಾಂಗ, ಆರ್ಯರ ಬಿಳಿಯ ಜನಾಂಗ, ಅರೇಬಿಯಾದ ಜನಾಂಗ ಇತ್ಯಾದಿಯಾಗಿ ಭಾರತದ ಮೂಲ ದ್ರಾವಿಡರೊಡನೆ ಕೂಡಿಕೊಂಡು ಬೆಳೆದು ಬಂದ ಮಿಶ್ರ ಜನಾಂಗವಾಗಿದೆ. ಮಲೇಶಿಯಾದ ಮೂಲ ಜನಾಂಗವು ಕಂದು ಬಣ್ಣದ್ದಾಗಿತ್ತು. ಮುಂದೆ ಅವರೊಡನೆ ಚೀನದ ಕಡೆಯಿಂದ ಮೊಂಗೋಲಿಯಾದ ಹಳದಿ ವರ್ಣದ ಜನಾಂಗವು ಬೆರೆತುಕೊಂಡು ಅದು ಭಾರತಕ್ಕೂ ಬಂದಿತು. ಆರ್ಯರು ಮೂಲತಃ ಬಿಳಿಯ ಜನಾಂಗವಾಗಿದ್ದರೂ ಅವರು ಹೋದಲ್ಲೆಲ್ಲ ಮೂಲ ನಿವಾಸಿಗಳೊಡನೆ ಕೂಡಿಕೊಂಡಿದ್ದರಿಂದ ಮತ್ತು ಭಾರತದಲ್ಲಿ ಮಲೇಶಿಯಾದ ಮತ್ತು ದ್ರಾವಿಡ

ಜನಾಂಗದೊಡನೆ ಕೂಡಿಕೊಂಡಿದ್ದರಿಂದ ಅವರು ಮಿಶ್ರ ಜನಾಂಗವಾದರು. ಭಾರತದಲ್ಲಿಯ ವೆಡ್ಡಾಯಿಡ ಕಪ್ಪು ವರ್ಣ ಮತ್ತು ದ್ರಾವಿಡರ ಮೂಲ ಜನಾಂಗಗಳಲ್ಲಿಯ ಕಂದು ಬಣ್ಣಗಳೂ ಇವರಲ್ಲಿ ಕೂಡಿಕೊಂಡವು. ಅರೇಬಿಯಾ, ಪರ್ಶಿಯಾ ಮತ್ತು ತುರ್ಕಸ್ತಾನದ ಬಿಳಿಯ ಮತ್ತು ಮಂಗೋಲಿಯಾದ ಹಳದಿ ಬಣ್ಣದ ಜನಾಂಗಗಳು ಇವರಲ್ಲಿ ಕೂಡಿಕೊಂಡರು. ಹೀಗೆ ಭಾರತೀಯ ಮೀನುಗಾರರು ಜನಾಂಗಿಕವಾಗಿ ಮಿಶ್ರ ಜನಾಂಗದವರಾದರು. ಅವರ ಮಾನವ ಕುಲಗಳೂ ಸಹಿತ ಮಲೇಶಿಯಾ, ದ್ರಾವಿಡ, ಅರೇಬಿಯಾದ ಸೆಮೆಟಿಕ್ ಮತ್ತು ಮಧ್ಯ ಏಸಿಯಾದ ಆರ್ಯನ್ ಮುಂತಾದ ಮೂಲ ಮಾನವಕುಲಗಳ ಬೆರಕೆಯಿಂದಾಗಿ ಇಂದು ನಮಗೆ ಮೀನುಗಾರರ ಸ್ಪಷ್ಟ ಮಾನವ ಕುಲಗಳು ದೊರೆಯದಿದ್ದರೂ ಭಾರತದ ಜಾತಿ ಪದ್ಧತಿಯಿಂದಾಗಿ ಅವರಲ್ಲಿಯೂ ಜಾತಿಗಳು ಬಹು ಸ್ಪಷ್ಟವಾಗಿ ಕಂಡುಬರುತ್ತವೆ. ಈ ಪ್ರಕಾರವಾಗಿ ಆಸ್ಟ್ರಿಕ್ ಭಾಷೆಯ ಜನರಿಂದ ಭಾರತಕ್ಕೆ ಮೀನುಗಾರಿಕೆಯಲ್ಲಿ ಹೆಚ್ಚಿನ ಸೇವೆ ದೊರೆಯಿತು. ಇಷ್ಟೇ ಅಲ್ಲ ಇದೇ ಜನಾಂಗದ ಸಂಪರ್ಕದಿಂದಾಗಿ ಸಿಂಧು ನದಿ ತೀರದ ಕೊಳ್ಳದ ಸಂಸ್ಕೃತಿ ಮತ್ತು ಗಂಗಾನದಿ ತೀರದ ಬೈಲು ಪ್ರದೇಶದ ಸಂಸ್ಕೃತಿ ಮಲೆನೇಶಿಯಾ ಮತ್ತು ಪೊಲಿನೇಶಿಯಾದ ವರೆಗೆ ಹಬ್ಬಿಕೊಂಡಿತು. ಇದೇ ಕಾರಣದಿಂದಾಗಿ ಶಾಂತಿಸಾಗರದಲ್ಲಿರುವ ಈಸ್ಟರ ನಡುಗಡ್ಡೆಯ ವರೆಗೆ ಸಿಂಧು ನದಿ ತೀರದ ಬರಹಗಳು ಹೋಗಿ

ಮುಚ್ಚಿರಬಹುದಾಗಿದೆ. ಆದ್ದರಿಂದಲೇ ನಾವು ಈಸ್ಟರ ನಡುಗಡ್ಡೆಯಲ್ಲಿ ಸಿಂಧು ನದಿ ತೀರದ ಕೊಳ್ಳದಲ್ಲಿ ಕಾಣುವ ಅಕ್ಷರಮಾಲೆಗಳನ್ನು ಹೋಲುವ ಅಕ್ಷರಗಳನ್ನು ಕಾಣುತ್ತೇವೆ.

೬

ಮೀನುಗಾರಿಕೆಯಲ್ಲಿ ನವೀನತೆ

ಜಗತ್ತಿನ ಎಲ್ಲ ಸಾಗರಗಳಲ್ಲಿ ಹಿಂದೂ ಮಹಾಸಾಗರ ಮತ್ತು ದಕ್ಷಿಣ ಅಮೇರಿಕಾದ ಸಾಗರಗಳು ಹೆಚ್ಚು ಮೀನುಗಳನ್ನು ಹೊಂದಿರುವಂಥವಾಗಿವೆ. ಆದರೆ ಈಗ ಜಗತ್ತಿನಲ್ಲಿ ಪೂರ್ವ ಏಸಿಯಾದ ಸಾಗರದಲ್ಲಿ ಹೆಚ್ಚು ಮೀನುಗಾರಿಕೆಯನ್ನು ನಡೆಸಲಾಗುತ್ತಿದೆ. ಭಾರತದಲ್ಲಿ ಪ್ರತಿ ವರ್ಷ ಒಟ್ಟು ೩–೪ ಮಿಲಿಯನ್ ಟನ್ನಿನಷ್ಟು ಮೀನುಗಳನ್ನು ಹಿಡಿಯಲಾಗುತ್ತಿದ್ದು ಅದರಲ್ಲಿ ೧.೪ ಮಿಲಿಯನ್ ಟನ್ನಿನಷ್ಟು ಮೀನುಗಳನ್ನು ಸಮುದ್ರಗಳಲ್ಲಿ ಹಿಡಿಯಲಾಗುತ್ತದೆ. ಇದರಲ್ಲಿ ೭೫೦೦೦ ಟನ್ನಿನಷ್ಟು ಮೀನುಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ನವೀನ ಮೀನುಗಾರಿಕೆಯಲ್ಲಿ ಮೂರು ಭಾಗಗಳಲ್ಲಿ ವಿವರಿಸಲಾಗುತ್ತಿದೆ ಅವು ಯಾವವೆಂದರೆ: (೧) ಮೀನುಗಳಿರುವ ಪ್ರದೇಶಗಳನ್ನು ಗುರುತಿಸುವದು (೨) ಮೀನುಗಳನ್ನು ಬೆಳೆಸುವದು ಮತ್ತು (೩) ಮೀನುಗಳನ್ನು ಹಿಡಿಯುವದು ಇವೇ ಆಗಿವೆ. ಸಾಗರ ಮೀನುಗಾರಿಕೆಯಲ್ಲಿ ಗಾಳ

ಗಳನ್ನು ಮತ್ತು ಪ್ರವಾಹಗಳನ್ನು ಕಂಡುಹಿಡಿಯುವದು ಮಹತ್ವದ ಕೆಲಸವಾಗಿದೆ. ಹೊಸ ಪದ್ಧತಿಯ ಮೀನುಗಾರಿಕೆಯು ಭಾರತದಲ್ಲಿ ೧೮೮೦ ರಲ್ಲಿ ಪ್ರಾರಂಭವಾಗಿದ್ದರೂ ಸ್ವಾತಂತ್ರ್ಯದ ನಂತರವೇ ಅದಕ್ಕೆ ಮಹತ್ವ ಪ್ರಾಪ್ತವಾಯಿತು. ಕಡಲಿನಲ್ಲಿಯ ಮೀನುಗಳ ಸ್ಥಾನವನ್ನು ನವೀನ ಮೀನುಗಾರಿಕೆಯಲ್ಲಿ ಕೆಳಗಿನಂತೆ ವರ್ಗೀಕರಿಸಲಾಗಿದೆ:

೧) ನೀರಿನ ಮೇಲ್ಭಾಗದ ಮೀನುಗಳು
೨) ೨೦೦ ಮೀಟರ ನೀರಿನೊಳಗಿನ ಮೀನುಗಳು
೩) ೨೦೦-೨೦೦೦ ಮೀಟರ ನೀರಿನೊಳಗಿನ ಮೀನುಗಳು
೪) ೨೦೦೦-೬೦೦೦ ಮೀಟರ ನೀರಿನೊಳಗಿನ ಮೀನುಗಳು
೫) ೬೦೦೦ ಮೀಟರಗಿಂತ ದೂರದಲ್ಲಿ ಮತ್ತು ತಗ್ಗಿನಲ್ಲಿರುವ ಮೀನುಗಳು

ಒಟ್ಟು ೨೫೦೦೦ ತರದ (genera) ಮೀನುಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ೨೦೦-೩೦೦ ಜಾತಿಯ (species) ಮೀನುಗಳನ್ನು ಗುರುತಿಸಲಾಗಿದೆ. ನೀರೊಳಗಿನ ದೂರದ ಕೆಲವು ಮೀನುಗಳಿಗೆ ತಲೆಗೆ ಮತ್ತು ಅಂಗಾಂಗಳಿಗೆ ಸ್ವಯಂಚಾಲಿತ ಬೆಳಕು ಚೆಲ್ಲುವ ವ್ಯವಸ್ಥೆಯು ನೈಸರ್ಗಿಕವಾಗಿಯೇ ಇದೆ. ಮೀನುಗಳನ್ನು ಹೆಚ್ಚು ಬೆಳೆಸುವ ಅನೇಕ ವಿಧಾನಗಳಲ್ಲಿ ಮೇಲ್ಭಾಗದ ನೀರನ್ನು ಪಂಪು ಮಾಡಿ ಸಹಿತ ಮೀನುಗಳನ್ನು ಬೆಳೆಸುವ ವಿಧಾನವು ಅನುಸರಿಸ

ಲ್ಪಡುತ್ತಿದೆ. ಯಾಕೆಂದರೆ ಮೇಲ್ಭಾಗದ ನೀರಿಗಿಂತ ಒಳ ಭಾಗದ ನೀರು ಮೀನುಗಳ ಅಭಿವೃದ್ಧಿಗೆ ಯೋಗ್ಯವಾದುದು ಎಂದು ತಿಳಿದು ಬಂದಿದೆ.

ಮೀನುಗಳು ಧ್ವನಿಗಳ ಸಂಕೇತಗಳನ್ನು ಗುರುತಿಸುತ್ತವೆ ಎಂದು ಹೇಳಲಾಗುತ್ತದೆ. ಆದ್ದರಿಂದ ಧ್ವನಿಗಳ ಸಂಕೇತಗಳನ್ನು ಕಳಿಸಿ ಅವುಗಳನ್ನು ಹಡಗುಗಳತ್ತ ಕರೆಯಬಹುದು. ಆಗ ಮೀನುಗಳನ್ನು ಹಡಗುಗಳ ಮೇಲಿಂದ ಜಾಳಿಗೆಗಳನ್ನು ಎಸೆದು ಹಿಡಿಯಲಿಕ್ಕೆ ಅನುಕೂಲವಾಗುತ್ತದೆ. ನವೀನ ವಿಧಾನಗಳಲ್ಲಿ ಸೆಟೆಲಾಯಿಟ್‌ಗಳ ಮುಖಾಂತರ ಮೀನುಗಳ ಭಾರೀ ಕೇಂದ್ರಗಳನ್ನು ಮತ್ತು ಸಣ್ಣ ಕೇಂದ್ರಗಳನ್ನು ಗುರುತಿಸಬಹುದು. ಇತ್ತೀಚಿನ ಸಂಶೋಧನೆಗಳಿಂದ ಮೀನುಗಳಲ್ಲಿ ಮರಣದ ಪ್ರಮಾಣ ಎಲ್ಲ ಜೀವಿಗಳಲ್ಲಿಯೇ ಅತಿ ಹೆಚ್ಚಿನದೆಂದು ತಿಳಿದು ಬಂದಿದೆ. ಈ ಅಂಕಿ ಸಂಖ್ಯೆಗಳ ಮೇರೆಗೆ ಪ್ರತಿ ದಶಲಕ್ಷ ಮೀನುಗಳಲ್ಲಿ ೪ ಲಕ್ಷ ಮೀನುಗಳು ಮಾತ್ರ ೨" ಉದ್ದ ಬೆಳೆಯುವವರೆಗೆ ಉಳಿಯುತ್ತವೆ. ಅದಕ್ಕೆ ಅನೇಕ ಕಾರಣಗಳನ್ನು ಸಹಿತ ಕೊಡಲಾಗುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ : (೧) ಮೀನುಗಳಿಗೆ ಬರುವ ರೋಗಗಳು. (೨) ಮೀನುಗಳಿಗೆ ರಕ್ಷಣೆ ಇಲ್ಲದಿರುವದು (೩) ಮೀನುಗಳಿಗೆ ಆಹಾರವಿಲ್ಲದಿರುವದು ಮತ್ತು (೪) ಕೆಟ್ಟ ಹವಾಮಾನ. ನವೀನ ಆರ್ಥಿಕ ದೃಷ್ಟಿಯಿಂದ ಮೀನುಗಾರರಿಗೆ ಒಂದು ಸಣ್ಣ ಜಲಾಶಯದ ಮೀನದ ವ್ಯವಸಾಯವೆಂದರೆ ಒಂದು ಎಕರೆ ಹೊಲವಿದ್ದಂತೆ.

ಮೀನುಗಳಿಂದ ಆಹಾರದಲ್ಲಿಯ ೩೦ ದಶಲಕ್ಷ ಪ್ರೊಟೀನ್ ಕೊರತೆಯನ್ನು ನೀಗಿಸಬಹುದಾಗಿದೆ. ಇಡೀ ಜಗತ್ತಿನಲ್ಲಿ ಒಂದು ವರ್ಷದಲ್ಲಿ ೨೦೦ ಮಿಲಿಯನ್ ಟನ್ನುಗಳಷ್ಟು ಮೀನು ಗಳನ್ನು ಹಿಡಿದು ಶೇಖರಿಸಬಹುದು. ಇದರಲ್ಲಿ ಈಗ ಕೇವಲ ೭೦ ದಶಲಕ್ಷ ಟನ್ ಮೀನುಗಳನ್ನು ಹಿಡಿಯಲಾಗುತ್ತಿದೆ. ಯು. ಎನ್. ಓ. ದ ಆಶಯದ ಮೇರೆಗೆ ೧೯೮೫ ರಷ್ಟೊತ್ತಿಗೆ ಪೂರ್ತಿಯಾಗಿ ೨೦೦ ಮಿಲಿಯನ್ ಟನ್ನುಗಳಷ್ಟು ಮೀನು ಗಳನ್ನು ಹಿಡಿಯುವ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಆದರೆ ಅನೇಕ ತೊಂದರೆಗಳ ಮೂಲಕ ರಾಷ್ಟ್ರಗಳಲ್ಲಿ ಈ ಗುರಿಯನ್ನು ಸಾಧಿಸುವದು ಶಕ್ಯವಾಗಲಿಲ್ಲ. ಆದ್ದರಿಂದ ಈ ಗುರಿಯನ್ನು ೧೯೯೫ ರಷ್ಟೊತ್ತಿಗಾದರೂ ಸಾಧಿಸಬಹು ದಾಗಿದೆ ಎಂದು ಆಶಯವನ್ನು ವ್ಯಕ್ತಪಡಿಸಲಾಗಿದೆ.

ಜಗತ್ತಿನಲ್ಲಿ ಮೀನುಗಾರಿಕೆಯ ಅತಿ ಮಹತ್ವದ ಸ್ಥಳ ಗಳನ್ನು ಈ ರೀತಿಯಾಗಿ ಗುರುತಿಸಲಾಗಿದೆ.

೧) ಉತ್ತರ ಅಮೇರಿಕೆಯ ಸಮುದ್ರಗಳು.
೨) ಉತ್ತರ ಯುರೋಪದ ಸಮುದ್ರಗಳು
೩) ದಕ್ಷಿಣ ಅಮೇರಿಕಾದ ಸಮುದ್ರಗಳು
೪) ಹಿಂದೂ ಮಹಾಸಾಗರ
೫) ಪೂರ್ವ ಏಸಿಯಾದ ಸಮುದ್ರಗಳು.

ಇವುಗಳಲ್ಲಿ ದಕ್ಷಿಣ ಅಮೇರಿಕಾದ ಸಮುದ್ರಗಳಲ್ಲಿ ಮತ್ತು ಹಿಂದೂ ಮಹಾಸಾಗರದಲ್ಲಿ ಮೀನುಗಳು ಭಾರೀ ಪ್ರಮಾಣದಲ್ಲಿ ಇವೆ ಎಂದು ಗೊತ್ತಾಗಿದೆ. ಇಲ್ಲಿಯವರೆಗೆ

ಪೂರ್ವ ಏಸಿಯಾದ ಸಮುದ್ರಗಳಲ್ಲಿ ಸಾಕಷ್ಟು ಮೀನುಗಾರಿಕೆಯನ್ನು ಕೈಕೊಂಡಿದ್ದು ಉಳಿದೆಡೆ ಭಾರೀ ಪ್ರಮಾಣದಲ್ಲಿ ಮೀನುಗಾರಿಕೆಯು ಬೆಳೆದಿರುವದಿಲ್ಲ.

ಇತ್ತೀಚಿನ ಮೀನುಗಾರಿಕೆಯಲ್ಲಿ ಹಿಡಿಯಲಾಗುವ ಮೀನುಗಳಲ್ಲಿ ಶೇ. ೫೩ ಶಾಂತಿಸಾಗರದಲ್ಲಿ, ಶೇ. ೪೦ ಅಟ್ಲಾಂಟಿಕ್ ಸಾಗರದಲ್ಲಿ, ಶೇ. ೫ ಹಿಂದೂ ಮಹಾಸಾಗರದಲ್ಲಿ, ಶೇ. ೨ ಭೂಮಧ್ಯ ಸಾಗರದಲ್ಲಿ ದೊರೆಯುವ ಮೀನುಗಳು ಎಂದು ಹೇಳಲಾಗುತ್ತಿದೆ. ಭಾರತದಲ್ಲಿ ೧೯೮೧ ರಲ್ಲಿ ೨.೪ ಮಿಲಿಯನ್ ಟನ್ನುಗಳಷ್ಟು ಮೀನುಗಳನ್ನು ಹಿಡಿಯಲಾಗುತ್ತಿತ್ತು. ಇದರಲ್ಲಿ ೧.೪ ಮಿಲಿಯನ್ ಟನ್ನುಗಳಷ್ಟು ಮೀನನ್ನು ಸಮುದ್ರಗಳಿಂದ ಮತ್ತು ೧.೦೦ ಮಿಲಿಯನ್ ಟನ್ನುಗಳಷ್ಟು ಮೀನುಗಳನ್ನು ಭೂಭಾಗದ ಜಲಸಂಗ್ರಹ ಮತ್ತು ಜಲಪ್ರವಾಹಗಳಲ್ಲಿ ಹಿಡಿಯಲಾಗುತ್ತಿತ್ತು.

ಇತ್ತೀಚಿನ ಒಂದು ಮೀನುಗಾರಿಕೆಯ ವರದಿಯ ಪ್ರಕಾರ ಗಂಗಾನದಿಯಲ್ಲಿ ಔದ್ಯೋಗಿಕ ಪೂರ್ವದ ಸಮಯದಲ್ಲಿ ಬಹಳಷ್ಟು ಮೀನುಗಳು ಇರುತ್ತಿದ್ದವೆಂದು ಮತ್ತು ಗಂಗಾನದಿಯ ತಟದ ಪಟ್ಟಣಗಳಲ್ಲಿ ಔದ್ಯೋಗೀಕರಣ ಭರದಿಂದ ಬೆಳೆದಾಗಿನಿಂದ ಗಂಗಾ ನದಿಯ ನೀರು ಕಲುಷಿತವಾಗಿರುವದರಿಂದ ಅಲ್ಲಿ ಮೀನುಗಳು ಮರಣಹೊಂದಲಿಕ್ಕೆ ಹತ್ತಿ ಭಾರೀ ಪ್ರಮಾಣದಲ್ಲಿ ಮೀನುಗಳ ಸಂಖ್ಯೆ ಕಡಿಮೆಯಾಗಿದೆ ಎಂದು ತಿಳಿದು ಬರುತ್ತದೆ. ಇತ್ತೀಚಿಗೆ ಗಂಗಾ ನದಿಯ

ನೀರನ್ನು ಶುದ್ಧೀಕರಿಸುವ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದು ಇದು ಪೂರ್ತಿಗೊಂಡ ನಂತರ ಮೊದಲಿನಂತೆ ಮೀನುಗಳು ಇಲ್ಲಿ ಬೆಳೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತದೆ. ಔದ್ಯೋಗೀಕರಣದ ವಿಷಪೂರಿತ ಮತ್ತು ಆಮ್ಲಜನಕ ನೀರು ಸಮುದ್ರಗಳಲ್ಲಿ ಕೂಡುವದರಿಂದ ಸಹಿತ ಇಂಥ ಪರಿಸ್ಥಿತಿ ಅನೇಕ ಸಾಗರಗಳಲ್ಲಿಯೂ ಉಂಟಾಗಿದ್ದು ಮಲೀನೀಕರಣವನ್ನು ತಡೆಯುವ ಅನೇಕ ಯೋಜನೆಗಳನ್ನು ಇತ್ತೀಚೆಗೆ ಹಾಕಿಕೊಳ್ಳಲಾಗುತ್ತಿದೆ.

ಸಮುದ್ರಗಳು, ಸಾಗರಗಳು, ಜಲಸಂಗ್ರಹಗಳು ಮತ್ತು ನದಿಗಳು ಆಹಾರದ ದೃಷ್ಟಿಯಿಂದ ಮತ್ತು ಸಾರಿಗೆ ದೃಷ್ಟಿಯಿಂದ ಮಹತ್ವವಾದವುಗಳೆಂದು ಕಂಡುಕೊಂಡಿರುವದರಿಂದಲೇ ಇವು ಪೂಜೆಗೆ ಅರ್ಹವಾದವು ಮತ್ತು ಜಲವು ಗಂಗಾದೇವಿಗೆ ಸರಿಸಮಾನವಾಯಿತು. ಮೀನುಗಾರರು ಗಂಗೆಯನ್ನು ಶಿವನ ಎರಡನೆಯ ಹೆಂಡತಿಯೆಂದು ತಿಳಿದುಕೊಳ್ಳುತ್ತಾರೆ. ಮತ್ತು ಅವರಿಬ್ಬರ ವಿವಾಹದ ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ತದಡಿ ಗ್ರಾಮದ ಸುತ್ತಮುತ್ತ ಇರುವ ಮೀನುಗಾರರು ಶಿವ ಮತ್ತು ಗಂಗೆಯರ ವಿವಾಹದ ಹಬ್ಬಗಳನ್ನು ಆಚರಿಸಿ ಆನಂದ ಪಡೆಯುತ್ತಾರೆ. ಉಳಿದ ಸಮಾಜಗಳು ಸಹಿತ ಇದರ ಮಹತ್ವವನ್ನು ಅರಿತುಕೊಂಡು ತಮ್ಮ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಗಂಗೆಯ ಪೂಜೆಗೆ ವಿಶಿಷ್ಟವಾದ ಸ್ಥಾನವನ್ನು ಕೊಟ್ಟಿದ್ದಾರೆ.

ಭಾರತ ದೇಶಕ್ಕೆ ೫೮೦೦ ಮೈಲುದ್ದದ ಕರಾವಳಿ ಪ್ರದೇಶವಿದೆ. ಆದ್ದರಿಂದ ಅದು ಪ್ರಾಚೀನ ಕಾಲದಿಂದಲೇ ಸಾಗರೋತ್ತರ ವ್ಯವಹಾರಗಳನ್ನು ಮತ್ತು ಮೀನುಗಾರಿಕೆಯನ್ನು ಬೆಳೆಯಿಸಿಕೊಂಡು ಬಂದಿದೆ. ಇದಕ್ಕಾಗಿ ನಮ್ಮ ದೇಶದಲ್ಲಿ ನಾವೆಗಳನ್ನು ಮತ್ತು ಹಡಗುಗಳನ್ನು ಕಟ್ಟಲಾಗುತ್ತಿತ್ತು. ಇದು ಕ್ರಿ. ಶ. ಪೂರ್ವ ೨೦೦೦ ವರ್ಷಗಳಿಂದಲೇ ನಡೆದು ಬಂದ ಸಮುದ್ರದ ಮೀನುಗಾರಿಕೆ ಮತ್ತು ಜಲ ಪರ್ಯಟನ ನಮ್ಮ ದೇಶದಲ್ಲಿ ಬೆಳೆದು ಬಂದ ಸಂಪ್ರದಾಯವಾಗಿದೆ. ಆದರೆ ನಮ್ಮ ಮೀನುಗಾರಿಕೆಯನ್ನು ಇನ್ನೂ ನವೀಕರಿಸುವದು ಅತಿ ಅವಶ್ಯಕವಾದ ಜವಾಬ್ದಾರಿಯಾಗಿದೆ ಯಾಕೆಂದರೆ ನಮ್ಮ ಮೀನುಗಾರರು ಹಿಂದುಳಿದವರಾಗಿದ್ದು ಮೀನುಗಾರಿಕೆಯನ್ನು ಇನ್ನೂ ಸಾಂಪ್ರದಾಯಿಕ ಪದ್ಧತಿಗಳಿಂದಲೇ ನಡೆಯಿಸಿಕೊಂಡು ಬರುತ್ತಿದ್ದಾರೆ.

ಒಮ್ಮೊಮ್ಮೆ ನದಿ ತೀರದಲ್ಲಿ ಮರಳಿನ ದಿಣ್ಣೆಗಳು ಹುಟ್ಟಿಕೊಳ್ಳುತ್ತವೆ. ಅವುಗಳನ್ನು ತೆಗೆದು ಹಾಕುವದು ಅವಶ್ಯಕ. ಇಲ್ಲದಿದ್ದರೆ ಡೋಣಿಗಳು ಇವುಗಳಿಗೆ ಒಡಿದು ಅಪಘಾತಗಳು ಸಂಭವಿಸುತ್ತವೆ. ಈ ಮರಳನ್ನು ಮತ್ತು ಮರಳು ದಿನ್ನಿಗಳನ್ನು ತೆಗೆಯುವದಕ್ಕಾಗಿ ಆಧುನಿಕ ಯಾಂತ್ರಿಕ ಸಾಮಗ್ರಿಗಳನ್ನು ಇದಕ್ಕಾಗಿ ಉಪಯೋಗಿಸಬೇಕಾಗುತ್ತದೆ. ಮೀನುಗಾರಿಕೆಯನ್ನು ಯಾಂತ್ರೀಕೃತ ಹಡಗುಗಳಿಂದ ನಡೆಸಬೇಕಾಗುತ್ತದೆ. ಒಟ್ಟಾರೆ ನಮ್ಮ ಮೀನುಗಾರಿಕೆಯನ್ನು ನವೀಕರಿಸುವದು ಅತ್ಯವಶ್ಯವಾಗಿದೆ.

ಇದಕ್ಕಾಗಿ ಮೀನುಗಾರರನ್ನು ತರಬೇತಿಗೊಳಿಸಬೇಕಾಗುತ್ತದೆ. ಮೀನುಗಾರರಿಗೆ ಆರ್ಥಿಕ-ಸಾಮಾಜಿಕ ರಕ್ಷಣೆ ಒದಗಿಸಬೇಕಾಗುತ್ತದೆ. ಅವರಿಗೆ ಮೀನುಗಾರಿಕೆಯ ಕಟ್ಟೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ಇದಲ್ಲದೆ ಹಿಡಿದ ಮೀನುಗಳನ್ನು ಶೇಖರಿಸುವ ಗುದಾಮುಗಳನ್ನು ನವೀನ ರೀತಿಯಲ್ಲಿ ಕಟ್ಟಿಸಬೇಕಾಗುತ್ತದೆ. ಮೀನುಗಳು ಕೆಡದಂತೆ ಇಡುವ ವ್ಯವಸ್ಥೆ ಮಾಡಬೇಕಾಗುತ್ತದೆ. ಮೀನುಗಳನ್ನು ಪ್ಯಾಕೇಜ ಮಾಡುವ ಮತ್ತು ಅವುಗಳನ್ನು ದೂರದ ಪೇಟೆಗೆ ಕಳಿಸುವ ಮತ್ತು ರಫ್ತು ಮಾಡುವ ವ್ಯಾಪಾರಿಕ ಮಾರುಕಟ್ಟೆಗಳನ್ನು ಕಟ್ಟಬೇಕಾಗುತ್ತದೆ. ಇಷ್ಟೆಲ್ಲ ಸಮಸ್ಯೆಗಳನ್ನು ಒಮ್ಮೆಲೇ ಬಗೆಹರಿಸುವದು ಸುಲಭ ಸಾಧ್ಯವಲ್ಲ. ಇದಕ್ಕೆ ಒಂದು ಸಂಯೋಜಿತ ಸಂಘಟನೆ ಬೇಕಾಗುತ್ತದೆ. ಆದಕ್ಕಾಗಿಯೇ ಅನೇಕ ಪ್ರಾಂತಿಕ ಸರಕಾರಗಳು ಮೀನುಗಾರಿಕೆಯ ಸಚಿವಾಲಯುಗಳನ್ನು ಮತ್ತು ವಿಭಾಗಗಳನ್ನು ಪ್ರಾರಂಭಿಸಿದ್ದಾರೆ

ಭಾರತದ ಜಲಪರ್ಯಟನಗಾರರು ಅಂಟಾರ್ಕಿಟಿಕ್ ಸಾಗರಕ್ಕೆ ತಲುಪಿ ಅನೇಕ ಸಂಶೋಧನೆಗಳನ್ನು ಇತ್ತೀಚಿಗೆ ಬೆಳೆಯಿಸಿಕೊಂಡಿರುವದು ಅತ್ಯಂತ ಸಂತೋಷದ ಸಂಗತಿ ಆದ್ದರಿಂದ ನಮ್ಮ ಜಲಪರ್ಯಟನಗಾರರು ಮುಂದುವರಿದ ದೇಶಗಳ ಜಲಪರ್ಯಟನಗಾರರೊಂದಿಗೆ ಈ ದಿಶೆಯಲ್ಲಿ ತಮ್ಮ ಸಂಶೋಧನೆಗಳನ್ನು ಮುಂದುವರಿಸಿರುವದು ನಮ್ಮ ದೇಶದವರಿಗೆಲ್ಲ ಅಭಿಮಾನದ ಸಂಗತಿ. ಅಲ್ಲಿಯೂ ಸಹಿತ ನಮ್ಮ

ಜಲಪರ್ಯಟನಗಾರರು ಮೀನುಗಾರಿಕೆಯನ್ನು ಪ್ರಾಯೋಗಿಕವಾಗಿ ಕೈಕೊಂಡಿರುವದು ಇನ್ನೂ ಹೆಚ್ಚಿನ ಅಭಿಮಾನದ ಸಂಗತಿ.

ಉತ್ತರ ಕನ್ನಡ ಜಿಲ್ಲೆಯಲ್ಲಿಯ ತದಡಿಯಲ್ಲಿ ಇತ್ತೀಚೆಗೆ ಭಾರತ–ಡೆನ್ಮಾರ್ಕ ಮೀನುಗಾರಿಕೆಯ ಯೋಜನೆಯೊಂದನ್ನು ಹಾಕಿಕೊಂಡಿದ್ದು ಅದನ್ನೀಗಾಗಲೇ ಶುಭಾರಂಭ ಮಾಡಲಾಗಿದೆ. ಅದರ ಕಿರುಪರಿಚಯುವನ್ನು ಕೊಡುವದರಿಂದ ಮೀನುಗಾರಿಕೆಯ ನವೀನತೆಯ ಪರಿಚಯ ಮಾಡಿಕೊಟ್ಟಂತೆ ಆಗುವದೆಂಬ ಭರವಸೆಯಿಂದ ಇಲ್ಲಿ ಅದರ ಕಿರು ಪರಿಚಯುವನ್ನು ವಿವರಿಸಲಾಗುವದು :

ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಅಂಕೋಲಾ ತಾಲೂಕಗಳ ಮೀನುಗಾರರ ಆರ್ಥಿಕ, ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಮತ್ತು ಮೀನುಗಾರಿಕೆಯನ್ನು ನವೀಕರಿಸುವದರ ಸಲುವಾಗಿ ಕರ್ನಾಟಕ ಸರಕಾರವು ಡೆನ್ಮಾರ್ಕ ದೇಶದ ಸರಕಾರದೊಂದಿಗೆ ತದಡಿಯಲ್ಲಿ ಮೀನುಗಾರಿಕೆಯ ಅಭಿವೃದ್ಧಿಯ ಯೋಜನೆಯೊಂದನ್ನು ಹಾಕಿಕೊಂಡಿದೆ. ಇದು ೧೯೮೨–ರಲ್ಲಿಯೇ ಪ್ರಾರಂಭವಾಯಿತು. ಈ ಯೋಜನೆಯ ಪ್ರಕಾರ ೭ ಕೋಟಿ ೪೮ ಲಕ್ಷ ರೂಪಾಯಿಗಳನ್ನು ಅಭಿವೃದ್ಧಿಗಾಗಿ ಇಟ್ಟುಕೊಂಡಿದ್ದು ಅದರಲ್ಲಿ ೬ ಕೋಟಿ ೩೭ ಲಕ್ಷ ರೂ.ಗಳನ್ನು ಡೆನ್ಮಾರ್ಕ ಸರಕಾರ ಕೊಡಲು ಒಪ್ಪಿಕೊಂಡಿದೆ. ಈ ಯೋಜನೆಯಲ್ಲಿ ಸುಮಾರು ಸುತ್ತಮುತ್ತಲಿನ ೨೫ ಹಳ್ಳಿ

ಗಳಲ್ಲಿರುವ ಮೀನುಗಾರರು ಇದರ ಲಾಭ ಪಡೆಯುವವರಿದ್ದಾರೆ.

ಯೋಜನೆಯ ಕಾರ್ಯಕ್ರಮದ ಗುರಿಗಳಲ್ಲಿ ಕೆಳಗಿನವುಗಳನ್ನು ಇಟ್ಟುಕೊಳ್ಳಲಾಗಿದೆ :

೧. ತದಡಿಯಲ್ಲಿ ೨೫೦ ಮೀಟರ ಉದ್ದದ ಮೀನುಗಾರಿಕೆಯ ಬಂದರವನ್ನು ನಿರ್ಮಾಣ ಮಾಡುವದು
೨. ೧೪೦೦ ಚದರ ಮೀಟರದ ಹರಾಜ ಪ್ರಾಂಗಣವನ್ನು ನಿರ್ಮಿಸುವದು.
೩. ಮೀನಿನ ಬಲೆಗಳನ್ನು ರಿಪೇರಿ ಮಾಡುವ ಉದ್ಯೋಗ ಕೈಕೊಳ್ಳುವದು.
೪. ಮೀನು ಶೇಖರಿಸುವ ಕಟ್ಟಡಗಳನ್ನು ಕಟ್ಟುವದು.
೫. ಇಂಜಿನುಗಳನ್ನು ರಿಪೇರಿ ಮಾಡಲು ವರ್ಕಶಾಪ್ ನಿರ್ಮಾಣ ಮಾಡುವದು.
೬. ನವೀನ ರೀತಿಯ ಬೋಟು ನಿರ್ಮಾಣ ಕೇಂದ್ರವನ್ನು ತೆರೆಯುವದು.
೭. ಮೀನಿನ ಉತ್ಪತ್ತಿಯನ್ನು ಹೆಚ್ಚಿಸುವ ವಿಧಾನಗಳನ್ನು ಬಳಸುವದು.
೮. ಡೋಣಿಗಳಿಗೆ ಯಂತ್ರಗಳನ್ನು ಅಳವಡಿಸುವದು.
೯. ಮೀನುಗಾರರಿಗೆ ಬಲೆಗಳನ್ನು ಮತ್ತು ಬೋಟುಗಳನ್ನು ಕೊಡುವದು.
೧೦. ಮೀನು ಹಿಡಿಯುವ ವಿಧಾನಗಳನ್ನು ಬೆಳೆಸುವದು.
೧೧. ಮೀನುಗಳನ್ನು ಕಾಯ್ದಿಡಲು ಶೈತ್ಯಾಗಾರ ನಿರ್ಮಿಸುವದು.

೧೨. ೩ ರೆಫ್ರಿಜಿಯೇಟರ ವಾಹನಗಳನ್ನು ಮೀನುಗಳ ಸಾಗಾಣಿಕೆಗೆ ಇಡುವದು.

೧೩. ೨೦ ರೆಫ್ರಿಜಿಯೇಟರ ಕ್ಯಾಬಿನೆಟ್ಟುಗಳನ್ನು ಮೀನುಗಳ ಮಾರಾಟ ಸ್ಥಳದಲ್ಲಿ ಸ್ಥಾಪಿಸುವದು.

೧೪. ಬಡ ಮೀನುಗಾರರಿಗೆ ವಸತಿಗೃಹಗಳನ್ನು ನಿರ್ಮಿಸುವದು.

ಇತ್ಯಾದಿಯಾಗಿ ಮುಖ್ಯ ಕಾರ್ಯಯೋಜನೆಯನ್ನು ಇಲ್ಲಿ ಹಾಕಿಕೊಂಡಿದ್ದಾರೆ. ಇದಕ್ಕಾಗಿ ಈಗಾಗಲೇ ಡೆನ್ಮಾರ್ಕ ದೇಶದ ಮೀನುಗಾರಿಕೆಯ ತಜ್ಞರು ಮತ್ತು ಭಾರತೀಯ ಮೀನುಗಾರಿಕೆಯ ತಜ್ಞರು ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಅನೇಕ ಸಲಹೆಗಾರರು ಮತ್ತು ತಜ್ಞರು ಈ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಬಂದರು ಕಟ್ಟುವ ಕೆಲಸದಲ್ಲಿ ಈಗಾಗಲೇ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಮೀನುಗಾರಿಕೆಯ ಕಟ್ಟೆಯನ್ನು ಕಟ್ಟುವ ಕಾರ್ಯವು ಪೂರ್ತಿಯಾಗುತ್ತ ಬಂದಿದೆ. ಇದರಂತೆ ನಮ್ಮ ಕರ್ನಾಟಕದ ಮತ್ತು ಭಾರತೀಯ ಸಮುದ್ರ ತೀರಗಳಲ್ಲಿರುವ ಬಂದರುಗಳಲ್ಲಿ ಮೀನುಗಾರಿಕೆಯ ಕಟ್ಟೆಗಳನ್ನು ಕಟ್ಟುವದು ಅವಶ್ಯಕವಾಗಿದೆ. ಯಾವ ರೀತಿಯಿಂದ ರೈತರು ತಮ್ಮ ಹೊಲಗಳನ್ನು ತಯಾರಿಸಿ ಬೇಸಾಯವನ್ನು ಅಭಿವೃದ್ಧಿಪಡಿಸ ಬೇಕಾಗುತ್ತದೆಯೋ ಅದೇ ಪ್ರಕಾರವಾಗಿ ಮೀನುಗಾರಿಕೆಯ ಉದ್ಯೋಗವನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಇದಕ್ಕಾಗಿ ತರಬೇತಿಯ ಶಾಲೆ-ಕಾಲೇಜುಗಳನ್ನು

ಪ್ರಾರಂಭಿಸಬೇಕಾಗುತ್ತದೆ. ಅಂದರೆ ಮಾತ್ರ ನಮ್ಮ ಮೀನುಗಾರಿಕೆ ಇನ್ನುಳಿದ ದೇಶಗಳ ಮೀನುಗಾರಿಕೆಯೊಂದಿಗೆ ಹೋಲಿಸಲು ಸಾಧ್ಯವಾಗಬಹುದು. ಇಲ್ಲದೆ ಹೋದರೆ ಎಲ್ಲ ದೇಶದವರು ತಮ್ಮ ಮೀನುಗಾರಿಕೆಯನ್ನು ನವೀಕೃತಗೊಳಿಸುತ್ತಿರುವಾಗ ನಮ್ಮ ಮೀನುಗಾರರು ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿಯೇ ಮುಂದುವರಿದು ಬಡತನದಿಂದ ಗೋಳಾಡಬೇಕಾಗುತ್ತದೆ.

ದೇಶದಲ್ಲಿ ಸಮಗ್ರ ಉದ್ಯೋಗಗಳು ಭರದಿಂದ ನವೀಕೃತಗೊಳಿಸಲ್ಪಡುತ್ತಿರುವಾಗ ಮೀನುಗಾರಿಕೆಯನ್ನು ನಾವು ಅಲಕ್ಷಿಸಿದ್ದಾದರೆ ಭಾರತೀಯ ಜನಾಂಗದ ಮಹತ್ವದ ಒಂದು ಜನಾಂಗವನ್ನೇ ನಾವು ಅಲಕ್ಷಿಸಿದಂತೆ ಆಗುತ್ತದೆ, ಆದ್ದರಿಂದ ನಾವು ಈ ಕಡೆಗೆ ಗಮನ ಕೊಟ್ಟು ನಮ್ಮ ಕರಾವಳಿಗಳು ಚೆನ್ನಾಗಿ ಬೆಳೆಯುವಂತೆ ಆಗಬೇಕಾದರೆ ನಾವು ಮೀನುಗಾರಿಕೆ ಮತ್ತು ಮೀನುಗಾರರ ಬಗ್ಗೆ ಲಕ್ಷ್ಯವಹಿಸುವದು ಅತಿ ಅವಶ್ಯಕವಾಗಿದೆ.

ನಾನು ತದಡಿಯಲ್ಲಿ ಭಾಷಣ ಮಾಡಲಿಕ್ಕೆ ಹೋದಾಗ ಅಲ್ಲಿಯ ಕೆಲವರು ಮೀನುಗಳನ್ನು ರಫ್ತು ಮಾಡುವದನ್ನು ವಿರೋಧಿಸಿದರು. ಮೀನುಗಳನ್ನು ಹೊಸಪದ್ಧತಿಯಲ್ಲಿ ರಫ್ತು ಮಾಡುತ್ತಿರುವದರಿಂದ ನಮ್ಮಲ್ಲಿ ಮೀನುಗಳು ತುಟ್ಟಿಯಾಗಿ ಜನರು ಮೀನವನ್ನು ಆಹಾರವನ್ನಾಗಿ ಉಪಯೋಗಿಸುವದನ್ನು ಬಿಡುತ್ತಿದ್ದಾರೆ ಎಂದು ಹೇಳಿದರು. ಆದರೆ ಸಾಕಷ್ಟು

ಮೀನುಗಾರಿಕೆ ಬೆಳೆದರೆ ಈ ತೊಂದರೆ ತಪ್ಪುವದೆಂದು ನಾನು ದೃಢವಾಗಿ ಹೇಳಬಲ್ಲೆನು. ಮೀನುಗಾರರ ಶೋಷಣೆಯಿಂದ ನಮ್ಮ ಜನರಿಗೆ ಮೀನುಗಳಿಂದ ಹೊಟ್ಟೆ ತುಂಬಿಸುವದು ಒಂದು ದೊಡ್ಡ ತಪ್ಪು.

ಏನೇ ಅಂದರೂ ಸಾಂಪ್ರದಾಯಿಕವಾದ ನಮ್ಮ ದೇಶದಲ್ಲಿ ಮೀನುಗಾರಿಕೆಯನ್ನು ನವೀಕೃತಗೊಳಿಸುವಲ್ಲಿ ಸಾವಧಾನವಾಗಿ ಪ್ರಗತಿಯಾಗುತ್ತಿದೆ. ಸಾಂಪ್ರದಾಯಬದ್ಧವಾದ ನಮ್ಮ ದೇಶದಲ್ಲಿ ಸಾಂಪ್ರದಾಯಿಕ ಉದ್ಯೋಗಕ್ಕೆ ಹೆಚ್ಚು ಮಹತ್ವವಿದೆ. ಜನರು ತಾವಾಗಿಯೇ ಮುಂದೆ ಬಂದು ಮೀನುಗಾರರ ಸಹಕಾರೀ ಸಂಘಗಳನ್ನು ಕಟ್ಟಿಕೊಂಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು. ನಮ್ಮ ಸರಕಾರಗಳು ಇದಕ್ಕೆ ಪ್ರೋತ್ಸಾಹನ ಮತ್ತು ರಕ್ಷಣೆ ಕೊಡಬೇಕು. ತದಡಿಯಲ್ಲಿರುವ ಮೀನುಗಾರರ ಸಹಕಾರೀ ಸಂಘವು ಈ ದಿಶೆಯಲ್ಲಿ ಭಾರೀ ಪ್ರಗತಿಯನ್ನು ಸಾಧಿಸಿದೆ. ಉಳಿದ ಮೀನುಗಾರರ ಸಹಕಾರೀ ಸಂಘಗಳು ಅವರ ಅನುಕರಣ ಮಾಡಿ ಮೀನುಗಾರಿಕೆಯನ್ನು ಬೆಳೆಯಿಸಬೇಕು.

ಪತ್ರಿಕಾ ವರದಿಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರ ಸ್ಥಿತಿಯು ಅತಿ ಶೋಚನೀಯವಾಗಿದೆ ಎಂದೂ ಪೂರ್ವ ಕರಾವಳಿಯಲ್ಲಿ ಮೀನುಗಾರಿಕೆಯನ್ನು ಅತ್ಯಂತ ಅಲಕ್ಷಿಸಲಾಗಿದೆ ಎಂದೂ ತಿಳಿದು ಬಂದಿದೆ. ಇದಕ್ಕೆ ನಮ್ಮಲ್ಲಿಯ ಪ್ರಜ್ಞಾವಂತರ ಮತ್ತು ಸರಕಾರಗಳ ಅಲಕ್ಷವೇ ಕಾರಣ.

ಉಪಸಂಹಾರ

ಮೀನುಗಾರಿಕೆಯ ಪ್ರಾಚೀನತೆಯನ್ನು ಕುರಿತು ನಾವು ಅಭ್ಯಾಸ ಮಾಡಿದಾಗ ಮಾನವನು ತನ್ನ ಆಹಾರಕ್ಕಾಗಿ ಸಂಶೋಧನೆ ನಡೆಸಿದಾಗ ಮೀನು ತನ್ನ ಒಳ್ಳೆಯ ಆಹಾರವಾಗಬಲ್ಲದೆಂಬುವದನ್ನು ಅತಿ ಪ್ರಾಚೀನಕಾಲದಲ್ಲಿ ಅಂದರೆ ಹಳೆಯ ಶಿಲಾಯುಗದಲ್ಲಿಯೇ ಕಂಡುಕೊಂಡಿದ್ದಾನೆ. ಮತ್ತು ಆವಾಗಿನಿಂದ ಅದನ್ನು ತನ್ನ ಆಹಾರವನ್ನಾಗಿ ಉಪಯೋಗಿಸಿಕೊಂಡು ಬಂದಿದ್ದಾನೆ. ಸಮುದ್ರ ತೀರಗಳಲ್ಲಿ ಮುಖ್ಯವಾಗಿ ಮೀನುಗಾರಿಕೆ ಬೆಳೆಯಿತು. ಏಕೆಂದರೆ ಅಲ್ಲಿ ಮೀನುಗಳು ಸಾಕಷ್ಟು ಮತ್ತು ವಿವಿಧ ರೀತಿಯ ಮೀನುಗಳು ದೊರೆಯುತ್ತಿದ್ದವು. ಮೀನುಗಾರಿಕೆಯು ಅತಿ ಪ್ರಾಚೀನ ಕಾಲದಿಂದಲೇ ಜಗತ್ತಿನ ತುಂಬ ಹಬ್ಬಿಕೊಂಡಿತ್ತು. ಏಕೆಂದರೆ ಬೇರೆ ಬೇರೆ ಪ್ರದೇಶಗಳಲ್ಲಿಯ ಜನರಿಗೆ ಅದು ಉತ್ತಮ ಆಹಾರವಾಗುವದೆಂದು ಪ್ರತ್ಯೇಕವಾಗಿಯೇ ಕಂಡು ಹಿಡಿಯಲ್ಪಟ್ಟಿತ್ತು. ಮುಂದೆ ಮೀನುಗಾರಿಕೆಯು ಜಲಪರ್ಯಟನಕ್ಕೆ ಮತ್ತು ಅಂತರ್ ರಾಷ್ಟ್ರೀಯ ವ್ಯಾಪಾರಕ್ಕೆ ಬುನಾದಿಯನ್ನು ಹಾಕಿಕೊಟ್ಟಿತು.

ಭಾರತದ ಮಟ್ಟಿಗೆ ಹೇಳಬೇಕೆಂದರೆ ಸಿಂಧು ನದಿ ತೀರದ ಸಂಸ್ಕೃತಿಯಲ್ಲಿ ಕ್ರಿ. ಶ. ಪೂರ್ವ ೩000 ವರ್ಷಗಳಿಂದಲೇ ಮೀನುಗಾರಿಕೆ ಚೆನ್ನಾಗಿ ಮತ್ತು ಸುಸಜ್ಜಿತವಾದ ರೀತಿಯಲ್ಲಿ ನಡೆದು ಬಂದಿತ್ತು. ಮುಂದೆ ನಮ್ಮ ವೇದಗಳಲ್ಲಿ, ಪುರಾಣಗಳಲ್ಲಿ ಮತ್ತು ಇನ್ನಿತರ ಸಾಹಿತ್ಯದಲ್ಲಿ

ಮೀನುಗಾರಿಕೆಯ ಬಗ್ಗೆ ಮತ್ತು ಮೀನುಗಾರರ ಬಗ್ಗೆ ಅನೇಕ ದಾಖಲೆಗಳು ದೊರೆಯುತ್ತವೆ.

ಮಾನವಶಾಸ್ತ್ರಜ್ಞರ ಪ್ರಕಾರ ಮೀನುಗಾರಿಕೆಯ ತಂತ್ರಗಳು ಈಗಿನಿಂದ ೨೦-೨೫ ಸಾವಿರ ವರ್ಷಗಳ ಹಿಂದೆಯೇ ಪ್ರಾರಂಭವಾದವು. ಮೊದಲು ನೀರಿನಲ್ಲಿ ಅಡ್ಡಾಡಿ ಕೈಯಿಂದ ಮೀನು ಹಿಡಿಯಲಿಕ್ಕೆ ಪ್ರಾರಂಭವಾಗಿ ನಂತರ ಬರ್ಚಿ, ಬಾಣ-ಬಿಲ್ಲು, ಕೊಂಡಿ, ಬಲೆಗಳು ಮತ್ತು ಜಾಳಿಗೆಗಳು ಪ್ರಚಾರದಲ್ಲಿ ಬಂದವು. ನವೀನ ಯುಗದಲ್ಲಿ ಮೋಟಾರ ಬೋಟುಗಳನ್ನು ಇಲೆಕ್ಟ್ರಾನಿಕ್ ಯಂತ್ರಗಳನ್ನು ಮತ್ತು ಮುಳುಗುವ ಸಾಧನಗಳನ್ನು ಉಪಯೋಗಿಸಿ ಮೀನುಗಾರಿಕೆಯನ್ನು ಮಾಡುತ್ತಾರೆ. ಮೀನುಗಾರಿಕೆಯನ್ನು ಬೆಳೆಸಿಕೊಳ್ಳುವದಕ್ಕಾಗಿ ಬಂದರುಗಳನ್ನು ಮತ್ತು ಮೀನುಗಾರಿಕೆಯ ಕಟ್ಟೆಗಳನ್ನು ಸಮುದ್ರ ತೀರದಲ್ಲಿ ಬೆಳೆಸುವದು ಅವಶ್ಯವಾಗಿದೆ. ಈಗೀಗ ಸಮುದ್ರ ತೀರದ ಮೀನುಗಾರಿಕೆಯಷ್ಟೇ ಮಹತ್ವವನ್ನು ಒಳನಾಡಿನ ಮೀನುಗಾರಿಕೆಗೂ ಕೊಡಲಾಗುತ್ತಿದೆ.

ಮೀನುಗಾರಿಕೆಯ ಉದ್ಯೋಗದಲ್ಲಿ ತೊಡಗಿದ ನಮ್ಮ ಮೀನುಗಾರರಲ್ಲಿ ಜಾತಿ ಸಂಸ್ಥೆಯು ಬೆಳೆದು ಬಂದಿದೆ. ಅವರು ಪ್ರಾಚೀನಕಾಲದಿಂದಲೇ ಬೇರೆ ಬೇರೆ ಜನಾಂಗಗಳಿಗೆ ಮತ್ತು ಮಾನವ ಕುಲಗಳಿಗೆ ಸೇರಿದವರಾಗಿದ್ದಾರೆ. ಈಗ ಭಾರತದಲ್ಲಿಯ ಮೀನುಗಾರರು ಮಿಶ್ರ ಜನಾಂಗದವರಾಗಿ ವಿಶೇಷ

ವಾಗಿ ಭಾರತದ ಕರಾವಳಿ ಪ್ರದೇಶದಲ್ಲಿ ಮತ್ತು ಒಳನಾಡಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕಂಡುಬರುತ್ತಾರೆ. ಮೀನುಗಾರರ ನಿರ್ಧಿಷ್ಟವಾದ ಅಂಕಿ–ಸಂಖ್ಯೆಗಳು ಇನ್ನೂ ಲಭ್ಯವಾಗಿರುವದಿಲ್ಲ. ಕರ್ನಾಟಕದಲ್ಲಿಯ ಮೀನುಗಾರರು ಸುಣಗಾರರಾಗಿ, ಬೆಸ್ತರಾಗಿ, ಊಳಿಗದವರಾಗಿ ಮತ್ತು ಪಲ್ಲಕ್ಕಿ ಹೊರುವವರಾಗಿ ಸಹಿತ ಸೇವೆ ಸಲ್ಲಿಸುತ್ತಾರೆ. ಇತ್ತಿತ್ತಲಾಗಿ ಮೀನುಗಾರ ಜಾತಿಯುವರಲ್ಲದವರು ಮೀನುಗಾರಿಕೆಯು ಉದ್ಯೋಗ ಕೈಕೊಂಡಿದ್ದಾರೆ ಮತ್ತು ಮೀನುಗಾರ ಜಾತಿಯುವರು ಬೇರೆ ಉದ್ಯೋಗಗಳನ್ನು ಕೈಕೊಂಡಿದ್ದಾರೆ. ಇವರು ಸಾಮಾನ್ಯವಾಗಿ ತಾವು ನೆಲೆಸಿದ ರಾಜ್ಯಗಳ ಭಾಷೆಗಳನ್ನೇ ಮಾತೃಭಾಷೆಯಾಗಿ ಸ್ವೀಕರಿಸಿದ್ದಾರೆ. ನಾವು ಮೀನುಗಾರರ ಮೂಲ ಸಾಧನಗಳನ್ನು, ಮೂಲ ಮಾನವ ಕುಲಗಳನ್ನು ಮತ್ತು ಮೂಲ ಜನಾಂಗಿಕ ಪ್ರಾರಂಭಗಳನ್ನು ಕಂಡು ಹಿಡಿಯಲಿಕ್ಕೆ ಇಲ್ಲಿ ಸಾಕಷ್ಟು ಚರ್ಚಿಸಿದ್ದೇವೆ. ಭಾರತದಲ್ಲಿಯ ಮೀನುಗಾರರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಜಾತಿ ಪದ್ಧತಿಯ ಏಣಿ ಶ್ರೇಣಿಗಳಲ್ಲಿ ಮೀನುಗಾರರನ್ನು ಕನಿಷ್ಟರೆಂದೇ ಬಗೆಯಲಾಗುವದು. ಭಾರತದಲ್ಲಿ ಮೀನವು ಆಹಾರ ದೃಷ್ಟಿಯಿಂದ ಮಾಂಸಾಹಾರವೆಂದೇ ಗಣಿಸಲ್ಪಟ್ಟಿದ್ದರೂ ಕೆಲವೊಮ್ಮೆ ಶಾಖಾಹಾರೀ ಜನರು ಮೀನವನ್ನು ತಿನ್ನುವದುಂಟು ಮತ್ತು ತಾವು ಶಾಖಾಹಾರಿಗಳೆಂದೇ ಹೇಳಿಕೊಳ್ಳುತ್ತಾರೆ. ಕೋಳಿಮೊಟ್ಟೆಗಳು ಯಾವ ಪ್ರಕಾರ ಒಮ್ಮೊಮ್ಮೆ ಶಾಖಾಹಾರದಲ್ಲಿ ಕೂಡಿಸಲ್ಪಡುತ್ತವೆಯೋ ಅದೇ ಪ್ರಕಾರ ಮೀನವನ್ನು ಸಹಿತ

ಒಮ್ಮೊಮ್ಮೆ ಶಾಖಾ ಆಹಾರದಲ್ಲಿ ಕೂಡಿಸುವದುಂಟು. ಮೀನಿನ ದುರ್ವಾಸನೆಯಿಂದಾಗಿ ಒಮ್ಮೊಮ್ಮೆ ಜನರು ಮೀನು ಗಾರಿಕೆಯನ್ನು ಮತ್ತು ಮೀನುಗಾರರನ್ನು ದೂರವಿಡುವ ದೃಷ್ಟಿಕೋನಗಳು ಕಂಡು ಬರುತ್ತವೆ.

ಪೌರಾಣಿಕವಾಗಿ ಮೀನಿಗೆ ನಮ್ಮ ದೇಶದಲ್ಲಿ ಉಚ್ಚ ಸ್ಥಾನವಿತ್ತು. ಮೀನು ವಿಷ್ಣುವಿನ ಅವತಾರಗಳಲ್ಲಿ ಒಂದು. ಹೀಗಾಗಿ ಮೀನುಗಳಿಗೆ ಮತ್ತು ಮೀನುಗಾರಿಕೆಗೆ ನಮ್ಮ ದೇಶದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪ್ರಾಚೀನ ಕಾಲದಿಂದಲೇ ಕೊಡುತ್ತಾ ಬಂದಿದ್ದಾರೆ. ಆದ್ದರಿಂದಲೇ ಅದು ಮನು ಕುಲ ರಕ್ಷಿಸುವ ಪ್ರಾಣಿ ಎಂದು ಪುರಾಣಗಳಲ್ಲಿ ಬಣ್ಣಿಸಲ್ಪಟ್ಟಿತು.

ಈಗ ನಮ್ಮ ಸರಕಾರಗಳು ಮೀನುಗಾರಿಕೆಗೆ ಹೆಚ್ಚಿನ ಮಹತ್ವ ಕೊಟ್ಟು ಮೀನುಗಾರಿಕೆಯನ್ನು ನವೀನ ರೀತಿ ಯಿಂದ ಅಭಿವೃದ್ಧಿಗೊಳಿಸುತ್ತಿರುವದರಿಂದ ಅದು ಸಾಕಷ್ಟು ಬೆಳೆಯುವ ಸಾಧ್ಯತೆಗಳು ಇವೆ. ಮತ್ತು ಮೀನುಗಾರಿಕೆಗೆ ಇನ್ನೂ ಮಹತ್ವದ ಸ್ಥಾನಮಾನವನ್ನು ಕೊಡಬೇಕಾಗಿದೆ. ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಗತಿ ಗಳನ್ನು ಸುಧಾರಿಸಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ಜಾತಿಯ ಜನರು ಶಾಖಾಹಾರಿಗಳಾಗಿರುವದರಿಂದ ಮೀನಿನ ಬಗ್ಗೆ ಕನಿಷ್ಠ ಭಾವನೆಯನ್ನು ತೋರಿಸುತ್ತಾರೆ. ಆದರೆ ಬಹಳಷ್ಟು ಪ್ರಮಾಣದಲ್ಲಿ ಮಾಂಸಾಹಾರಿಗಳೂ ಇರುವದ ರಿಂದ ಮೀನಿನ ಆಹಾರಕ್ಕೆ ಮತ್ತು ಮೀನುಗಾರಿಕೆಗೆ ನಮ್ಮ ದೇಶದಲ್ಲಿ ಹೆಚ್ಚಿನ ಮಹತ್ವವಿದೆ.

ಆಧಾರ ಗ್ರಂಥಗಳು

Kadetotad N. K., Religion and Society among the Harijans Karnatak University, Dharwad, 1977

Kaikini Gourish (Ed), Meenaka, Association of Fishermen of Tadadi, Tadadi (N, K), 1978.

Linton Ralph, The Tree of Culture. Alfred A, knopf, New York, 1955.

Punekar V. B., The Son Kolis of Bombay, Popular Book Depot Bombay, 1969.

Ramachandra Rao, D, Man and Ocean, Indian Science Congress Association, Calcutta, 1983.

Ramakrishna Mission, Cultural Heritage of India, Ramkrishna Mission, Calcutta, 1969.

Thurston, Edgar, Castes and Tribes of Southern India, Cosmo, Publication, Delhi, 1975.

*

ಉಪನ್ಯಾಸ ಗ್ರಂಥಮಾಲೆಯು

ಕೆಲವು ಪ್ರಕಟನೆಗಳು

---

೧. ಉಷ್ಣ ಮತ್ತು ಅದರ ಸ್ವರೂಪ —ಬಿ. ಕೆ. ಚಳಗೇರಿ

೨. ಭಾಸ್ಕರ ಉಪಗ್ರಹ —ಎಂ. ಆರ್. ಹುಕ್ಕೇರಿ

೩. ನೇಕಾರಿಕೆ ಮತ್ತು ಸರಕಾರ —ಈರಣ್ಣ ಹಟ್ಟಿ

೪. ಹಳ್ಳಿಯ ಬೃಹತ್ ಯೋಜನೆ —ಎಂ. ಎಸ್. ಹುಲ್ಲೊಳ್ಳಿ

೫. ಪ್ರಾಚೀನ ಭಾರತದಲ್ಲಿಯ ವಿದ್ಯಾಕೇಂದ್ರಗಳು —ಅನಂತ ಕುಲಕರ್ಣಿ

೬. ಶಿರಾಲಿಯ ಗೊಂಡರು —ನಾರಾಯಣ ಯಾಜಿ

೭. ಉಪ್ಪು-ಕ್ಷಾರಭೂಮಿ ಮತ್ತು ಅವುಗಳ ಸುಧಾರಣೆ —ವಿಜಯಕುಮಾರ ಗಿಡ್ನವರ

೮. ಗ್ರಾಮೋದ್ಯೋಗಗಳ ಮಹತ್ವ —ಪಿ. ಎ. ಭಟ್ಟ

೯. ಕುಂಟುತ್ತಿರುವ ಕೈಮಗ್ಗದ ಉದ್ದಿಮೆ —ಈರಣ್ಣ ಹಟ್ಟಿ

೧೦. ಹಳ್ಳಿಗಳ ಆರ್ಥಿಕ ಅಭಿವೃದ್ಧಿ —ಎಸ್. ಜಿ. ಕುಲಕರ್ಣಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ